# 4

# ಕ್ರಿಸ್ತನ ಎರಡನೆಯ ಬರೋಣ

## (3:1-16)

ತನ್ನ ಸಂದೇಶಕ್ಕೆ ಬಾಹ್ಯಚಹರೆ ಇಲ್ಲ ಎಂಬುದನ್ನು ಪೇತ್ರನು ಸ್ಪಷ್ಟಪಡಿಸಿದ್ದಾನೆ. ಅಪೊಸ್ತಲರ ಸಂದೇಶವು ಅವರ ಓದುಗರನ್ನು ರಕ್ಷಣೆಗೆ ನಡೆಸಿತು. ಅವನು ಸಂಬೋಧಿಸಿದ ಸಭೆಗಳು ಸತ್ಯವನ್ನು ಅರಿತುಕೊಂಡವು, ಖಂಡಿತವಾಗಿಯೂ ಅವು ಸತ್ಯದಲ್ಲಿ ಸ್ಥಾಪಿತವಾದವು (1:12). ನಂತರ ಸುಳ್ಳುಬೋಧಕರು ಬಂದರು. ಅವರು ಸಭೆಗಳನ್ನು ಹರಿದು ಬೇರ್ಪಡಿಸಿದರು. ಕೆಲವು ಕ್ರೈಸ್ತರು ಸ್ವೀಕರಿಸಿದರು ಅಥವಾ ಕನಿಷ್ಟಪಕ್ಷ ಅವರನ್ನು ಸಹಿಸಿಕೊಂಡರು; ಇತರರು ಅವರ ಬೋಧನೆಯ ಸೂಚನೆಗಳನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಂಡರು ಮತ್ತು ಅವರನ್ನು ತಿರಸ್ಕರಿದರು. ಅಪೊಸ್ತಲನಿಗೆ ಈ ಪತ್ರವನ್ನು ಬರೆಯುವಾಗ ಎರಡು ಉದ್ದೇಶ ಗಳಿದ್ದವು: (1) ಅವನು ತನ್ನ ಓದುಗರಿಗೆ ಸುಳ್ಳು ಬೋಧಕರು ಅವರನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ಮನದಟ್ಟು ಮಾಡಲು ಬಯಸಿದ್ದನು. ಅದಕ್ಕಿಂತ ಹೆಚ್ಚಾಗಿ ಅವರು ಅಪೊಸ್ತಲರ ಸಂದೇಶವನ್ನು ಗುರುತಿಸುವದಕ್ಕಿಂತ ಹೆಚ್ಚಾಗಿ ಸಂಧಾನ ಮಾಡುಕೊಳ್ಳುತ್ತಿದ್ದರು. (2) ಅವನು ತನ್ನ ಓದುಗರನ್ನು ಅವರ ಕರೆಯುವಿಕೆಯ ಬಲ ಮತ್ತು ಪರಿಶುದ್ಧತೆಯನ್ನು ಜ್ಞಾಪಿಸುವದರ ಮೂಲಕ ಅವರನ್ನು ಪ್ರೋತ್ಸಾಹಿಸಲು ಬಯಸಿದ್ದನು. ಆತನು ಅವರನ್ನು ನಂಬಿಕೆಯಲ್ಲಿ ಬಲಪಡಿಸಲು ಇಚ್ಛಿಸಿದನು. ಅವನಲ್ಲಿ ಯಾವುದೇ ಹೊಸ ಅಥವಾ ಸೃಷ್ಟಿಸಲ್ಪಟ್ಟ ವಾಕ್ಯಭಾಗಗಳಿಲ್ಲ ಎಂಬುದನ್ನು ಸ್ಪಷ್ಟಪಡಿಸಿದನು. ಅವನ ಉದ್ದೇಶ ಅವರಿಗೆ ಜ್ಞಾಪಿಸುವದು ಮತ್ತು ಉತ್ತೇಜಿಸುವದು ಆಗಿದೆ. ಅವರು ದೇವಜನರಾಗಿ ಮುಂದುವರೆಯಲು ಬಯಸಿದ್ದಲ್ಲಿ ಅವರು ಸುಳ್ಳು ಬೋಧಕರನ್ನು ಬಿಟ್ಟುಬಿಡಬೇಕು ಮತ್ತು ಅವರು ಅಪೊಸ್ತಲರಿಂದ ಕೇಳಿದ ಸಂದೇಶಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡು ಪುನದೃಢೀಕರಿಸಬೇಕು.

### "ನಿಮ್ಮ ಸರಳ ಮನಸ್ಸನ್ನು ಪೇರಿಸಿರಿ" (3:1, 2)

**1ಪ್ರಿಯರೇ, ನಿಮಗೀಗ ಬರೆಯುವದು ಎರಡನೆಯ ಪತ್ರಿಕೆ. 2ಪರಿಶುದ್ಧ ಪ್ರವಾದಿಗಳು ಪೂರ್ವದಲ್ಲಿ ಹೇಳಿದ ಮಾತುಗಳನ್ನೂ ಕರ್ತನಾದ ರಕ್ಷಕನು ನಿಮ್ಮ ಅಪೊಸ್ತಲರ ಮೂಲಕ ಕೊಟ್ಟ ಅಪ್ಪಣೆಯನ್ನೂ ನೀವು ಜ್ಞಾಪಕಮಾಡಿಕೊಳ್ಳಬೇಕೆಂದು ಈ ಎರಡು ಪತ್ರಿಕೆಗಳಲ್ಲಿಯೂ ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪೇರಿಸುತ್ತಿದ್ದೇನೆ.**

**ವಚನ 1. ಪ್ರಿಯರೇ,** ಎಂಬ ಪದವು ಸ್ವರದಲ್ಲಿ ಬದಲಾವಣೆಯನ್ನು ಸೂಚಿಸುತ್ತದೆ. ಪತ್ರವು ಸುಳ್ಳುಬೋಧಕರ ನಿಂದನೆಯಿಂದ ಸಂಧಾನಪಡಿಸುವ ಪ್ರೋತ್ಸಾಹದೆಹೆಗೆ ಮುಂದುವರೆ ಯುತ್ತದೆ. ಮುಂದುವರೆಯುತ್ತಿರುವಾಗ ಅಪೊಸ್ತಲನು ಇದು ಅವರಿಗೆ ತಾನು ಬರೆಯುತ್ತಿರುವ **ಎರಡನೆಯ ಪತ್ರಿಕೆ** ಎಂದು ಉಲ್ಲೇಖಿಸುತ್ತಾನೆ. ಕ್ರಮಾನುಸಾರವಾದ ಪುಸ್ತಕಗಳು ಅವು ಇದ್ದಂತೆಯೇ ಕ್ರಮಪಡಿಸಲಾಗಿವೆ, ಆಧುನಿಕ ಓದುಗರಿಗೆ 1 ಪೇತ್ರನ ಪತ್ರಿಕೆಯ ತಕ್ಷಣ ಮೊದಲಿನ ಓದುಗರೊಂದಿಗೆ ಇರುವ ಸಂಬಂಧ ಅಷ್ಟೊಂದು ಸ್ಪಷ್ಟವಾಗಿಲ್ಲ ಎಂದು ಭಾವಿಸುತ್ತಾರೆ. ಅವರು ಕೆಲವು ಪುಟಗಳನ್ನು ತಿರುವಿ ಹಾಕಿದ ಮೇಲೆ 1 ಪೇತ್ರನ ಪತ್ರಿಕೆಯನ್ನು ಕಂಡುಕೊಳ್ಳಬೇಕಾಗಿಲ್ಲ. ಮುಂದಿನ ಪರ್ಯಾಲೋಚನೆ ಆಧುನಿಕ ಓದುಗರನ್ನು

ಅಪೊಸ್ತಲರು ಉಲ್ಲೇಖಿಸಿರುವದು 1 ಪೇತ್ರ ಎಂಬುದನ್ನು ಖಚಿತಪಡಿಸಿಕೊಳ್ಳುವದು ವಿರಳ. ಇಷ್ಟು ಮಾತ್ರ ನಾವು ಖಚಿತವಾಗಿ ಹೇಳಬಹುದೇನೆಂದರೆ ಪೇತ್ರನು ತನ್ನ ಶೋತೃಗಳಿಗೆ ಮುಂಚಿತವಾಗಿ ಪತ್ರವನ್ನು ಬರೆದಿದ್ದಾನೆ. ಯಾಕೋಬ ಏನೋ ತಿಳಿದಲ್ಲ 1 ಪೇತ್ರನ ಪತ್ರ ಅಷ್ಟೊಂದು ಖಚಿತವಾಗಿಲ್ಲ.

ಅಪೊಸ್ತಲನು 2 ಪೇತ್ರ ಈ ಪತ್ರ ಹಿಂದಿನ ಪತ್ರದಂತೆಯೇ ಇದೆ, **ಜ್ಞಾಪಕಕೊಟ್ಟು ನಿಮ್ಮ ಸರಳ ಮನಸ್ಸನ್ನು ಪೇರಿಸುವದು** ಉದ್ದೇಶವಾಗಿದೆ. 2 ಪೇತ್ರನ ಪತ್ರಿಕೆಯಲ್ಲಿ ಆತನು ಯೇಸುವಿನ ಜೊತೆಯಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಂಡು ತನ್ನ ಓದುಗರಿಗೆ ಜ್ಞಾಪಿಸುತ್ತಿದ್ದಾನೆ. ವಿಷಯಲಂಪಟತನವನ್ನು ತೊಡಗಿಸಿಕೊಳ್ಳುವದರಿಂದ ಸ್ವತಂತ್ರಗಳಾಗಿರಬೇಕೆಂದು ಕರ್ತನು ಬಯಸುತ್ತಾನೆ ಎಂಬುದನ್ನು ಜ್ಞಾಪಿಸುತ್ತಾನೆ. ಆತನು ಅದರ ಪರಿಣಾಮಗಳನ್ನು ಜ್ಞಾಪಿಸುತ್ತಾನೆ ಮತ್ತು ತಮ್ಮನ್ನು ಬಸಿದುಹೋಗುವಂತೆ ಮಾಡಿದ ಸುಳ್ಳುಬೋಧಕರನ್ನು ಅವರು ಅಪ್ಪಿಕೊಳ್ಳಬೇಕೋ ಎಂದು ಕೇಳುತ್ತಾನೆ.

ಉತ್ತಮ ಆತ್ಮೀಕ ನಾಯಕನಾಗಿ ಆತನು, ತಾನು ತನ್ನ ಎಲ್ಲಾ ಓದುಗರನ್ನು ಒಂದೇ ಕುಂಚದಿಂದ ಚಿತ್ರಿಸುತ್ತಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದಾನೆ. ಅವರಲ್ಲಿ ಕೆಲವರು ಪರಿಶ್ರಮಿಗಳಾಗಿದ್ದರು. ಅವರು ಸುಳ್ಳು ಬೋಧಕರನ್ನು ವಿರೋಧವಾಗಿ ನಿಂತುಕೊಂಡರು; ಅವರು ತಾವು ಗ್ರಹಿಸಿಕೊಂಡಿದ್ದರಲ್ಲಿ ಪ್ರಾಮಾಣಿಕರಾಗಿದ್ದರು. ಪೇತ್ರನು ಅವರನ್ನು ಪ್ರೋತ್ಸಾಹಿಸಲು ಬಯಸುತ್ತಾನೆ. ತನ್ನ ಓದುಗರನ್ನು ಜ್ಞಾಪಿಸಲು ಬಯಸುವ ಆತನ ಬಯಕೆ 1:12ರಲ್ಲಿ ವ್ಯಕ್ತವಾಗುತ್ತದೆ. ಅಪೊಸ್ತಲನು ಸಮತೋಲನದ ಕಾರ್ಯವನ್ನು ಮಾಡಬೇಕಾಗಿದೆ. ಒಂದು ರೀತಿಯಲ್ಲಿ ಆತನು ಸುಳ್ಳುಬೋಧಕರನ್ನು ಆಪಾದಿಸಲು ಬಯಸುತ್ತಾನೆ ತನ್ನ ಎಲ್ಲಾ ಭಾವಾವೇಶದ ಆಜ್ಞೆಗಳ ಮೂಲಕ ಇನ್ನೊಂದು ರೀತಿಯಲ್ಲಿ ಅವನು ತನ್ನ ಓದುಗರ ಜ್ಞಾನವನ್ನು ಮತ್ತು ವಿಶ್ವಾಸಾರ್ಹತೆಯನ್ನು ಅವಮಾನ ಮಾಡಲು ಬಯಸುವದಿಲ್ಲ.

ಎರಡು ವಾಕ್ಯಭಾಗಗಲ್ಲಿ ಮತ್ತು 1:12ರಲ್ಲಿ ಸೂಚಿಸಲ್ಪಟ್ಟ ವಿಮರ್ಶೆಯಿದೆ. ಆತನ ಓದುಗರಿಗೆ ಅವರು ಅಪೊಸ್ತಲರಿಂದ ಕೇಳಿದ ಸಂದೇಶವನ್ನು ಜ್ಞಾಪಿಸಬೇಕಾಗಿದೆ. "ಅವರು ಸತ್ಯದಲ್ಲಿ ಉತ್ತಮವಾಗಿ ನೆಲೆಯಾಗಿದ್ದಾರೆ" ಎಂದು ತನ್ನ ವಿಶ್ವಾಸವನ್ನು ವ್ಯಕ್ತಪಡಿಸುವದರ ಮೂಲಕ ಆತನು ತನ್ನ ಖಂಡೆಯನ್ನು ಮೃದುಗೊಳಿಸುತ್ತಾನೆ. ಯಾರು ಆತ್ಮೀಕ ನಾಯಕರಾಗಿರಬೇಕೆಂದು ಹಂಬಲಿಸುತ್ತಾರೋ ಅಪೊಸ್ತಲರ ಅನುಸಂಧಾನದಿಂದ ಉತ್ತಮವಾದ ಪಾಠವನ್ನು ಕಲಿಯಬಹುದು, ಒಬ್ಬನು ಸತ್ಯವನ್ನು ಸ್ಪಷ್ಟವಾಗಿ ತಿಳಿದಿರಬೇಕು ಮತ್ತು ದೃಢವಾಗಿ ನಿಂತುಕೊಳ್ಳಬೇಕು. ಬಹಿರಂಗವಾಗಿ ಖಂಡಿಸದೇ ಇರುವದು ಬಹುಶ ಇಚ್ಛಿತ ಫಲಿತಾಂಶದ ಮೇಲೆ ಪರಿಣಾಮವನ್ನು ಬೀರುತ್ತದೆ. ಆದರೆ ಒಬ್ಬನ ನಡಾವಳಿ ಇಚ್ಛಿತ ಫಲಿತಾಂಶವನ್ನು ಹೊಂದಿಕೊಳ್ಳುವದರಲ್ಲಿ ದೊಡ್ಡ ಕೊಡುಗೆಯನ್ನು ನೀಡುವದಾಗಿದೆ.

**ವಚನ 2.** ಪೇತ್ರನು ತನ್ನ ಓದುಗರು ಇತ್ತಿಚೆಗೆ ತಮ್ಮ ಸುಳ್ಳು ಬೋಧಕರಿಂದ ಆಲಿಸಿದ ವಾಕ್ಯಗಳಿಗೂ ಮತ್ತು ತಮ್ಮ ಮೊದಲಿನ ಕ್ರೈಸ್ತ ಬೋಧಕರಿಂದ ಆಲಿಸಿದ ವಾಕ್ಯಗಳಿಗೂ ವ್ಯತ್ಯಾಸವನ್ನು ತೋರಿಸುವದನ್ನು ಮುಂದುವರೆಸುತ್ತಿದ್ದಾನೆ. ಆತನು ಅವರಿಗೆ ಅವರು **ಕೊಟ್ಟ ಅಪ್ಪಣೆಯನ್ನೂ ನೀವು ಜ್ಞಾಪಕಮಾಡಿಕೊಳ್ಳಬೇಕೆಂದು** ಮನದಟ್ಟುಮಾಡುತ್ತಿದ್ದಾನೆ. ಅವರು ಮೊದಲನೆಯ ಸ್ಥಾನದಲ್ಲಿ ಸ್ವೀಕರಿಸಿದ ವಾಕ್ಯಗಳು, ದೇವರು ತನ್ನ **ಪರಿಶುದ್ಧ ಪ್ರವಾದಿಗಳ** ಮೂಲಕ ಮೊದಲೇ ಮಾತಾಡಿದ ವಾಕ್ಯಗಳಾಗಿವೆ. ಪೇತ್ರನು ಈಗಾಗಲೇ ಹಳೆ ಒಡಂಬಡಿಕೆಯ ಪ್ರವಾದಿಗಳು ಪವಿತ್ರಾತ್ಮನ ಪ್ರೇರಣೆಯಿಂದ ಮಾತನಾಡಿದ್ದಾರೆ ಎಂದು ಹೇಳಿದ್ದಾನೆ (1:21). ಇದರೊಟ್ಟಿಗೆ, ಅವರು ಆಲಿಸಿದ ಅಪೊಸ್ತಲರ ಸಂದೇಶವು, "ಪರಿಶುದ್ಧ ಪ್ರವಾದಿಗಳ" ಪ್ರವಾದನೆಯ ನೆರವೇರಿಕೆಯಾಗಿದೆ. Donald Guthrie ರವರು ಹೀಗೆ ವೀಕ್ಷಿಸುತ್ತಾರೆ, "ಪ್ರವಾದಿಗಳ ಪ್ರವಾದನೆಯನ್ನು ಯೇಸುವಿನ ಆಜ್ಞೆಗಳೊಂದಿಗೆ ಹೋಲಿಸುವದು ಅಧಿಕಾರಯುತವಾದ ಕ್ರೈಸ್ತ ಬೋಧನೆಯನ್ನು (ಹಳೆ ಒಡಂಬಡಿಕೆ)

ಯೊಂದಿಗೆ ಜೋಡಿಸುವ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ ಎಂಬುದನ್ನು ತೋರಿಸುತ್ತದೆ."[1]

ಪೇತ್ರನ ಗ್ರೀಕ್ ಭಾಷೆ ವಕ್ರವಾಗಿದ್ದರೂ, ಅರ್ಥವು ಸ್ಪಷ್ಟವಾಗಿದೆ. ವಾಸ್ತವಿಕವಾಗಿ ಆತನು ಹೇಳುವದೇನೆಂದರೆ ಪ್ರವಾದಿಗಳು ಮೊದಲೇ ಹೇಳಿದ ವಾಕ್ಯಗಳು "ನಿಮ್ಮ ಅಪೊಸ್ತಲರ, ಕರ್ತನೂ ರಕ್ಷಕನಾದ ಯೇಸು ಕ್ರಿಸ್ತ ಆಜ್ಞೆಗಳು." ಪೇತ್ರನ ಓದುಗರು ಆಜ್ಞೆಗಳನ್ನು ತಮ್ಮ ಅಪೊಸ್ತಲರ ಬಾಯಿಂದ ಆಲಿಸಿದಾಗ, ಅವು ಕರ್ತನು ಮತ್ತು ರಕ್ಷಕನ ಆಜ್ಞೆಗಳಾಗಿದ್ದವು. ಇನ್ನೊಂದು ಸಾಧ್ಯತೆ ಏನೆಂದರೆ ಈ ಆಜ್ಞೆಗಳು ಅಪೊಸ್ತಲರ ಆಜ್ಞೆಗಳಾಗಿದ್ದವು. ಅಪೊಸ್ತಲರು, ಇನ್ನೊಂದು ರೀತಿಯಲ್ಲಿ ಕರ್ತನು ಮತ್ತು ರಕ್ಷಕನಿಂದ ಆಯಲ್ಪಟ್ಟವರು ಮತ್ತು ಕಳುಹಿಸಲ್ಪಟ್ಟವರು ಆಗಿದ್ದರು. ಈ ಅರ್ಥವು ಸನ್ನಿವೇಶಕ್ಕೆ ಉತ್ತಮವಾಗಿ ಹೊಂದಿಕೊಳ್ಳುವದಿಲ್ಲ ಅಥವಾ ಇತರರಿಂದ ಮೆಚ್ಚಿಕೆಯನ್ನು ವ್ಯಕ್ತಪಡಿಸುವಷ್ಟು ವ್ಯತ್ಯಾಸವನ್ನು ತೋರಿಸುವದಿಲ್ಲ.

ಪೇತ್ರನು ಅಪೊಸ್ತಲರನ್ನು **ನಿಮ್ಮ ಅಪೊಸ್ತಲರು** ಎಂದು ಗುರುತಿಸುತ್ತಾನೆ. ಅವರಿಗೆ ಯಾವ ಅಗೋಚರವಾದ ಗುರಿಗಳು ಇರಲಿಲ್ಲ. ಅವರು ಕ್ರೈಸ್ತರನ್ನು ವ್ಯಾಪಾರದ ಸರಕನ್ನಾಗಿ ಮಾಡಲಿಲ್ಲ; ವಿಶ್ವಾಸಿಗಳನ್ನು ಸ್ವಪ್ರಯೋಜನದ ಲಾಭಕ್ಕಾಗಿ ಉಪಯೋಗಿಸುವವರಾಗಿರಲಿಲ್ಲ. ಅಪೊಸ್ತಲರು ಕರ್ತನ ಮಹಿಮೆಗಾಗಿ ಮತ್ತು ಮನುಷ್ಯರ ರಕ್ಷಣೆಯನ್ನು ಬಿಟ್ಟರೆ ಬೇರೆ ಯಾವ ಕಾರಣಕ್ಕಾಗಿಯೂ ಕಾರ್ಯಪ್ರವೃತ್ತರಾಗಿರಲಿಲ್ಲ. ಅವರು "ನಿಮ್ಮ ಅಪೊಸ್ತಲರಾಗಿದ್ದರು." ಪೇತ್ರನು ಅವಶ್ಯವಿದ್ದಲ್ಲಿ ಅಪೊಸ್ತಲರ ಅಧಿಕಾರಕ್ಕೆ ಭಿನ್ನವಿಸುತ್ತಾನೆ. ಆದರೆ ಸದ್ಯದಲ್ಲಿ ವಿಷಯ ಅದಾಗಿಲ್ಲ. ಈ ಹಂತದಲ್ಲಿ, ಆತನು ತನ್ನ ಓದುಗರಿಗೆ ಅಪೊಸ್ತಲರು ಅವರನ್ನು ಪ್ರೀತಿಸಿದ್ದರು ಮತ್ತು ಅವರ ಸೇವೆಯನ್ನು ಮಾಡಿದ್ದರು ಎಂಬುದನ್ನು ಜ್ಞಾಪಿಸುತ್ತಿದ್ದಾನೆ. ಸುಳ್ಳು ಬೋಧಕರು, ಲಾಭಕ್ಕಾಗಿ ಅವರನ್ನು ಬಳಸಿಕೊಂಡಿದ್ದರು (2:3, 15). ಇನ್ನೂ, ಅಧಿಕಾರದ ವಿಷಯ ಸಮಂಜಸವಾಗಿರಲಿಲ್ಲ. ಅವನು ಪ್ರವಾದಿಗಳ ಬರಹಗಳನ್ನು ಅಪೊಸ್ತಲರ ಆಜ್ಞೆಗಳನ್ನು ಮತ್ತು ಯೇಸುವಿನ ಆಜ್ಞೆಗಳನ್ನು ಸುಳ್ಳು ಬೋಧಕರ ಸಿದ್ಧಾಂತಗಳು ಮತ್ತು ಅವರು ಓದುಗರ ಮುಂದೆ ಪ್ರದರ್ಶಿಸಿದ ಜೀವನ ಶೈಲಿಯ ನಡುವಿನ ವ್ಯತ್ಯಾಸವನ್ನು ತೋರಿಸಿದ್ದಾನೆ.

ಸತ್ಯದ ಪ್ರಶ್ನೆಗಳು ವಿಷಯವಾದಾಗ, ಸುಳ್ಳು ಬೋಧಕರ ವಿಷಾದನೀಯವಾದ ನೈತಿಕ ಜೀವಿತಗಳನ್ನು ತಾತ್ಕಾಲಿಕವಾಗಿ ಬದಿಗಿರಿಸಲಾಗಿದೆ. ಕ್ರಿಸ್ತನ ಕುರಿತಾದ ಸತ್ಯ, ರಕ್ಷಣೆಯ ಮಾರ್ಗದ ಕುರಿತು, ಅಥವಾ ಆತನ ಸಭೆಯ ಕುರಿತು ಕ್ರೈಸ್ತರು ಅಪೊಸ್ತಲರ ಬೋಧನೆ ಮತ್ತು ಮಾರ್ಗದರ್ಶನವನ್ನು ನೋಡಬೇಕು. ಪೇತ್ರನು ಅಪೊಸ್ತಲರನ್ನು "ನಿಮ್ಮ ಅಪೊಸ್ತಲರು" ಎಂದು ಗುರುತಿಸುತ್ತಾನೆ. ಯಾಕೆಂದರೆ ಅವರ ಮೊದಲ ಕಳಕಳಿ ವಿಶ್ವಾಸಿಗಳ "ಆತ್ಮೀಕ ಬೆಳವಣಿಗೆ" ಆಗಿದೆ. ಆತನು ದೈವೀಕ ಪ್ರೇರಣೆ ಹೊಂದಿದ ಮನುಷ್ಯರಿಂದ ಪ್ರಕಟಿಸಲ್ಪಟ್ಟ ವಾಸ್ತವವಾದ ನಂಬಿಕೆ ಮತ್ತು ಅಪೊಸ್ತಲರ ಮತ್ತು ಅವರ ಓದುಗರ ಮಧ್ಯದಲ್ಲಿರುವ ವಯಕ್ತಿಕ ಪರ್ಯಾಲೋಚನೆಗಳನ್ನು ಜೋಡಿಸಿದ್ದಾನೆ. ವಯಕ್ತಿಕ ಅಂಶವನ್ನು ಕ್ರೈಸ್ತ ನಾಯಕತ್ವದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಒಳ್ಳೇ ಕುರುಬನಂತೆ, ಅಪೊಸ್ತಲರು ಅವರನ್ನು ಪ್ರೀತಿಸಿದ್ದರು ಮತ್ತು ಕಾಳಜಿವಹಿಸಿದ್ದರು.

**ಅಪ್ಪಣೆಗಳನ್ನು** ನೀಡಿರುವ "ಅಪೊಸ್ತಲರು" ಯಾರು? ಅವರು ಮೊದಲನೆಯ ಸಂಗತಿಯಾಗಿ, ಕರ್ತನಿಂದ ಆಯಲ್ಪಟ್ಟು ಮತ್ತು ಕಳುಹಿಸಲ್ಪಟ್ಟ ಹನ್ನೆರಡು ಜನರಾಗಿದ್ದರು. ಈ ಹನ್ನೆರಡು ಜನರು ಇತರರಿಗೆ ಬೋಧಿಸಿದ್ದರು ಮತ್ತು ಹೋಗುವದಕ್ಕೆ ನೇಮಿಸಿದವರಾಗಿದ್ದರು.[2] ಪೇತ್ರನು ಬಹುಶಃ ತನ್ನ ಓದುಗರಿಗೆ ಮೊದಲನೆಯದಾಗಿ ಸುವಾರ್ತೆಯನ್ನು ಸಾರಿದವರು ಹನ್ನೆರಡು ಜನರಲ್ಲಿದ್ದವರು ಅಥವಾ ಹನ್ನೆರೆಡು ಜನರಿಂದ ನೇಮಿಸಲ್ಪಟ್ಟವರಾಗಿದ್ದರು ಎಂದು ಉಲ್ಲೇಖಿಸುತ್ತಾನೆ. ಯೇಸುವಿನ ಕುರಿತಾಗಿ ಮೊದಲನೆಯದಾಗಿ ಸಾರಿದ ಮಿಷನರಿಗಳು ಯಾರು ಅನ್ನುವದಕ್ಕಿಂತ ಸಂದೇಶವು ಮೂಲತ ಅಪೊಸ್ತಲರಿಂದ ಬಂದದ್ದು ಎಂಬುದು

ಪ್ರಾಮುಖ್ಯವಾಗಿದೆ.

## "ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನ ಎಲ್ಲಿದೆ?" (3:3-7)

**3ಕಡೇ ದಿವಸಗಳಲ್ಲಿ ತಮ್ಮ ದುರಾಶೆಗಳ ಪ್ರಕಾರ ನಡೆಯುವ ಕುಚೋದ್ಯಗಾರರು ಬಂದು**
**ಕುಚೋದ್ಯಮಾಡುತ್ತಾ 4ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು? ನಮ್ಮ**
**ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕಾದಿಯಿಂದಿದ್ದ**
**ಹಾಗೆಯೇ ಇರುತ್ತದಲ್ಲಾ ಎಂದು ಹೇಳುವರೆಂಬುದಾಗಿ ನೀವು ಮೊದಲು ತಿಳುಕೊಳ್ಳಬೇಕು.**
**5ಹೀಗೆ ಮಾತಾಡುವವರು ಒಂದು ಸಂಗತಿಯನ್ನು ತಿಳಿದರೂ ಬೇಕೆಂದು ಮರೆತು ಬಿಡುತ್ತಾರೆ;**
**ಅದೇನಂದರೆ - ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ನೀರಿ**
**ನಿಂದ ಉಂಟಾಗಿ 6ನೀರಿನಿಂದ ಆಧಾರಗೊಂಡಿರುವಲ್ಲಿ ಆ ನೀರುಗಳಿಂದಲೇ ಆ ಕಾಲದಲ್ಲಿದ್ದ**
**ಲೋಕವು ಜಲಪ್ರಳಯದಲ್ಲಿ ನಾಶವಾಯಿತು. 7ಆದರೆ ಈಗಿರುವ ಭೂಮ್ಯಾಕಾಶಗಳು ಅದೇ**
**ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವದಕ್ಕೆ ಇಡಲ್ಪಟ್ಟಿವೆ; ಮತ್ತು ಭಕ್ತಿ ಹೀನರ**
**ಶಿಕ್ಷಾವಿಧಿಯೂ ನಾಶವೂ ಉಂಟಾಗುವ ದಿನಕ್ಕಾಗಿ ಆ ಬೆಂಕಿ ಸಿದ್ಧವಾಗಿದೆ.**

ಪೇತ್ರನು ಸುಳ್ಳು ಬೋಧಕರ ಸಿದ್ಧಾಂತಗಳ ವಿಷಯದಲ್ಲಿ ವಿಶೇಷವಾದ ವಿವರಣೆಯನ್ನು ನೀಡದೇ ಹೋದಾಗ್ಯೂ, ಅವರು ಕರ್ತನು ತಿರುಗಿ ಬರುವ ವಿಷಯವನ್ನು ಅಲ್ಲಗಳೆದರೆಂದು ಹೇಳುವದು ಸರಳವಾಗಿದೆ. ಪರಲೋಕಕ್ಕೆ ಒಯ್ಯಲ್ಪಟ್ಟು ದೇವರ ಬಲಗಡೆಯಲ್ಲಿ ಆಸೀನನಾಗಿ ಆಳ್ವಿಕೆಯನ್ನು ಮಾಡುತ್ತಿರುವ ಕರ್ತನ ತಿರುಗಿ ಬರಲಿಕ್ಕಿದ್ದಾನೆ ಎಂಬ ಭರವಸೆಯನ್ನು ಆದಿ ಮಿಶನರಿಗಳು ಪರಿವರ್ತನೆ ಹೊಂದಿದವರಿಗೆ ನೀಡಿದ್ದರು. ಇನ್ನು ಹೆಚ್ಚಾಗಿ, ಆತನು ಬೇಗನೇ ಬರುತ್ತಾನೆ (ಯಾಕೋಬ 5:8; 1 ಪೇತ್ರ 4:7). ಅದೇ ಸಮಯದಲ್ಲಿ "ಬೇಗನೇ" ಎಂಬ ಪದವು ಸಂಬಂಧಾತ್ಮಕ ಪದವಾಗಿದೆ. ಅನೇಕರು ಕ್ರಿಸ್ತನು ಕೆಲವೇ ವರ್ಷಗಳಲ್ಲಿ ಅಥವಾ ಕನಿಷ್ಟಪಕ್ಷ ಕೆಲವೇ ದಶಕಗಳಲ್ಲಿ ಬರಲಿಕ್ಕಿದ್ದಾನೆ ಎಂದು ನಿರೀಕ್ಷಿಸದ್ದರಲ್ಲಿ ಸಂದೇಹವಿಲ್ಲ. ಸಮಯವು ಕಳೆದುಹೋಯಿತು ಆದರೆ ಯೇಸು ತಿರುಗಿಬರಲಿಲ್ಲ. ಸುಳ್ಳು ಬೋಧಕರು ವಿಫಲವಾದ ನಿರೀಕ್ಷೆಯನ್ನು ಸ್ವಪ್ರಯೋಜನಕ್ಕಾಗಿ ಬಳಸಿಕೊಂಡು ಕರ್ತನು ತಿರುಗಿ ಬರುವದೇ ಇಲ್ಲ ಎಂಬುದನ್ನು ದೃಢಪಡಿಸಲು ಪ್ರಾರಂಭಿಸಿದರು. ಇದಕ್ಕೆ ಬದಲಾಗಿ, ಕೆಲವರು ಕರ್ತನು ಈಗಾಗಲೇ ಕೆಲವು ಆತ್ಮೀಕ, ವಾಸ್ತವಿಕವಲ್ಲದ ಅರ್ಥದಲ್ಲಿ ತಿರುಗಿ ಬಂದಿದ್ದಾನೆ ಎಂದು ವಾದಿಸಲು ಪ್ರಾರಂಭಿಸಿದರು. ಉದಾಹರಣೆಗೆ ಕರ್ತನು ಅವರಿಗಾಗಿ ದೀಕ್ಷಾಸ್ನಾನದ ಸಮಯದಲ್ಲಿ ವಯಕ್ತಿಕವಾಗಿ ತಿರುಗಿ ಬಂದಿದ್ದಾನೆ ಎಂದು ಸಮರ್ಥಿಸಿಕೊಳ್ಳ ತೊಡಗಿದರು. ಪೇತ್ರನು ಇವುಗಳಲ್ಲಿ ಯಾವುದನ್ನು ಸಮರ್ಥಿಸಲಿಲ್ಲ. ಅಪೊಸ್ತಲನು ಯಾರೊಬ್ಬರೂ ಕರ್ತನ ಯಾವಾಗ ಬರುತ್ತಾನೆ ಎಂಬ ವಿಷಯದಲ್ಲಿ ಸಂದೇಹವನ್ನು ಇಟ್ಟುಕೊಳ್ಳಬಾರದು ಎಂದು ಹೇಳಿದನು. ಹಿಂದಿನ ಕಾಲದಲ್ಲಿ ದೇವರು ಲೋಕಕ್ಕೆ ನ್ಯಾಯ ತೀರಿಸಿದಂತೆ, ಆತನು ತಿರುಗಿ ನ್ಯಾಯ ತೀರಿಸಲಿಕ್ಕಿದ್ದಾನೆ.

**ವಚನ 3.** ಸುಳ್ಳು ಬೋಧಕರು ಕ್ರೈಸ್ತರಲ್ಲಿ ನೆಲೆಯಾಗಿರುವದರಿಂದ ಪ್ರತಿಯೊಬ್ಬರು ಎಚ್ಚರವಾಗಿರಬೇಕು. ಪೇತ್ರನು, ಪೌಲನು ಇತರ ಕ್ರೈಸ್ತರನ್ನು ಎಚ್ಚರಿಸಿದಂತೆ ಸುಳ್ಳು ಬೋಧಕರು ನಿಮ್ಮಲ್ಲಿ ನೆಲೆಯಾಗಿದ್ದಾರೆ ಎಂದು ಅವರನ್ನು ಎಚ್ಚರಿಸಿದನು (ಅಪೊಸ್ತಲರ ಕೃತ್ಯಗಳು 20:29-31; 1 ತಿಮೋಥೆ 4). ಇಂಗ್ಲೀಷ್‌ನಲ್ಲಿ **ಕುಚೋದ್ಯಮಾಡುವವರು** (ಬರುತ್ತಿದ್ದಾರೆ) ತಮ್ಮ **ಕುಚೋದ್ಯರೊಂದಿಗೆ** ಎಂಬದು ಆದರೆ ಇದು ಮಿತಿಮೀರಿದ್ದಾಗಿ ತೋರಿಬರುತ್ತದೆ ಆದರೆ ಇಬ್ರಿಯರಲ್ಲಿ ವ್ಯಕ್ತಪಡಿಸುವ ನಿರ್ದಿಷ್ಟಮಾನ ವಿಧಾನವಾಗಿದೆ. ಅಪೊಸ್ತಲರು ಮೊದಲನೆಯ ಭಾಷೆಯ ಹವ್ಯಾಸಗಳನ್ನು ಪೂರ್ವಸ್ಥಿತಿಗೆ ಹಿಂತಿರುಗಿಸಿದಂತೆ ತೋರಿಬರುತ್ತದೆ.

ಈ ವಚನದಲ್ಲಿರುವ "ಕುಚೋದ್ಯಗಾರರು" 2ನೇ ಅಧ್ಯಾಯದಲ್ಲಿರುವ

ಸುಳ್ಳುಬೋಧಕರಿಗೆ ಸಮಾನವಾಗಿದ್ದಾರೆ. ಅವರು ಅಪೊಸ್ತಲರ ಬೋಧನೆಗಳನ್ನು ಹಾಸ್ಯಮಾಡಿದಷ್ಟೇ ಅಲ್ಲ. ನಿರ್ದಿಷ್ಟವಾಗಿ ಕರ್ತನ ಬರೋಣವನ್ನು ಮತ್ತು ಅವರು **ತಮ್ಮ ದುರಾಶೆಗಳ ಪ್ರಕಾರ ನಡೆಯುವದನ್ನು** ಅನುಸರಿಸಿದ್ದಾರೆ. ದೇವರ ಜನರ ಗುಣಲಕ್ಷಣವಾದ ಪರಿಶುದ್ಧ ಜೀವಿತವನ್ನು ನೇರವಾಗಿ ವಿರೋಧಿಸುವ ಜೀವಿತ ಇರುವದಾಗಿದೆ. Michael Green ರವರು ಹೀಗೆ ವಿಮರ್ಶಿಸುತ್ತಾರೆ. "ವಿರಕ್ತಕೆ ಮತ್ತು ಸ್ವಯಂ ತೃಪ್ತಿ ಕ್ರಮವಾಗಿ ಒಟ್ಟಾಗಿ ಹೋಗುತ್ತದೆ."[3] ಯಾರಿಗೆ ಅಪೊಸ್ತಲರ ಮೂಲಕ ದೇವರ ಪ್ರಕಟನೆಗಳ ಕುರಿತು ಸ್ವಲ್ಪವಾದರು ಗೌರವವಿರುತ್ತದೋ ಅವರು ಸಿದ್ಧಾಂತಗಳು ಮತ್ತು ನೈತಿಕ ಕ್ಷೇತ್ರದಲ್ಲಿ ಉಲ್ಲಂಘಿಸುವದರ ಔಚಿತ್ಯವನ್ನು ತಿಳಿದಿರುತ್ತಾರೆ.

ಪೇತ್ರನು ತಾನು ಮತ್ತು ತನ್ನ ಓದುಗರು **ಕೊನೆಯ ದಿವಸಗಳಲ್ಲಿ** ಜೀವಿಸುತ್ತಿದ್ದೇವೆಂಬುದರ ಕುರಿತು ಮುಂದಿನ ಯಾವ ವಿಮರ್ಶೆಯನ್ನು ಸ್ವೀಕರಿಸುವದಿಲ್ಲ. ಕರ್ತನು ಬರುವದಕ್ಕೆ ಸಾವಿರ ವರ್ಷ ತಡಮಾಡಿದರೂ ಸಹ ಇವು ಕೊನೆಯ ದಿನಗಳಾಗಿವೆ (3:8). "ಕೊನೆಯ ದಿನಗಳು" 2 ತಿಮೋಥೆ 3:1 ಮತ್ತು ಇಬ್ರಿಯ 1:1, 2ರಲ್ಲಿರುವಂತೆ. ರಕ್ಷಕನ ಮೊದಲನೆಯ ಬರೋಣ (ಆತನ ರಾಜ್ಯದ ಪ್ರಾರಂಭದ ತಿಳುವಳಿಕೆ) ಮತ್ತು ಆತನ ಎರಡನೆಯ ಬರೋಣ (ನ್ಯಾಯತೀರ್ಪು ನಡೆಯುವ ಕಾಲ ಮತ್ತು ಆತನ ಆಳ್ವಿಕೆಯ ಅಂತಿಮ ತಿಳುವಳಿಕೆಯ) ಮಧ್ಯದಲ್ಲಿರುವ ಸಂಪೂರ್ಣ ಅವಧಿಯಾಗಿದೆ. ಪೇತ್ರನು ಮತ್ತು ಇತರ ಹೊಸ ಒಡಂಬಡಿಕೆಯ ಲೇಖಕರು "ಕೊನೆಯ ದಿವಸಗಳ" ತಿಳುವಳಿಕೆಗಾಗಿ ಪ್ರವಾದಿಗಳ ಮೇಲೆ ಅವಲಂಬಿತ ರಾಗಿದ್ದಾರೆ. ಯೆಶಾಯನು, "ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು ಗುಡ್ಡಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವದು; ಆಗ ಸಕಲದೇಶಗಳವರು ಅದರ ಕಡೆಗೆ ಪ್ರವಾಹಗಳಂತೆ ಬರುವರು" (ಯೆಶಾಯ 2:2). ಆ ದಿವಸಗಳಲ್ಲಿ ಜೀವಿಸಿದ್ದ ಪೇತ್ರನ ಕ್ರೈಸ್ತ ಓದುಗರು ಪ್ರವಾದಿಗಳು ದೇವರ ಪರ್ವತ ದೇವರ ಆಲಯ ಸ್ಥಾಪಿತವಾಗುವದನ್ನು ನೋಡಲು ಹೋರಾಡಿದರು. ಪ್ರವಾದಿಯಾದ ಸುಳ್ಳು ಬೋಧಕರು ಅಪೊಸ್ತಲರ ಮಾತುಗಳನ್ನು ಕಡೆಗಾಣಿಸಿದಂತೆ ಯೊಾಯನ ಸಮಕಾಲೀನರು ಆತನ ಮಾತುಗಳನ್ನು ಕಡೆಗಾಣಿಸಿದರು (ಯೆಶಾಯ 28:14, 15). ಕ್ರೈಸ್ತರು "ಕೊನೆಯ ದಿವಸಗಳಲ್ಲಿ ಜೀವಿಸುತ್ತಿದ್ದಾರೆ" ಇದು ಅವರ ನಿಯೋಗದ ಮತ್ತು ಅವರ ಸೇವೆಯನ್ನು ಮುಂದಾಗಿ ಗ್ರಹಿಸುವದರ ತ್ವರಿತತೆಯನ್ನು ಸೇರಿ ಸುತ್ತದೆ.

**ವಚನ 4.** ಸುಳ್ಳು ಬೋಧಕರು ಸಂದೇಹಾಸ್ಪದವಾಗಿ, **ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನವು ಏನಾಯಿತು?** ಎಂದು ಕೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅವರು ವಿಶ್ವಾಸಿಗಳನ್ನು ಅಪೊಸ್ತಲರ ವಾಕ್ಯಗಳನ್ನು ನಿಜವೆಂದು ನಂಬಿ ಸುಲಭವಾಗಿ ಮೋಸಕ್ಕೆ ಒಳಗಾಗುವರು ಎಂದು ಕುಚೋದ್ಯಮಾಡಿದರು. ಅವರು ಸತ್ಯವನ್ನು, **ನಮ್ಮ ಪಿತೃಗಳು ನಿದ್ರೆ ಹೊಂದಿದ ದಿನ ಮೊದಲುಗೊಂಡು ಸಮಸ್ತವೂ ಲೋಕಾದಿಯಿಂದಿದ್ದ ಹಾಗೆಯೇ ಇರುತ್ತದಲ್ಲಾ ಎಂದು ಹೇಳುವರೆಂಬುದಾಗಿ ನೀವು ಮೊದಲು ತಿಳುಕೊಳ್ಳಬೇಕು.** ಕಾಲಗಳು ಬಂದು ಹೋಗುವದು, ಹೊಸ ಸಂತತಿಯ ಜನನ ಮತ್ತು ಹಳೆಯದರ ಮರಣ, ಜೀವಿತದ ಕೊನೆಯಿಲ್ಲ ಚಕ್ರದ ಸಾಕ್ಷಿಯಾಗಿದೆ. ಆದುದರಿಂದ ಸುಳ್ಳು ಬೋಧಕರು ವಾದಿಸುತ್ತಿದ್ದರು. "ಆತನ ಪ್ರತ್ಯಕ್ಷತೆಯ ವಿಷಯವಾದ ವಾಗ್ದಾನ" ಕಲ್ಪನಾ ಕತೆಯು ಮನಸ್ಸಿಗೆ ಮಂಕನ್ನು ತರುವಂತದ್ದಾಗಿದೆ ಎಂದು ಅವರು ಹೇಳುತ್ತಿದ್ದರು.

ಸಂದೇಹವಾದವು ಮಾನವ ಕುಲದಷ್ಟೇ ಹಳೆಯದಾಗಿದೆ. ಇದು ನಿರ್ದಿಷ್ಟವಾಗಿ ಯಾರು ಧರ್ಮಶಾಸ್ತ್ರ ಮತ್ತು ನಿರ್ಭಂದಗಳು ಬೇಡವೆನ್ನುತ್ತಾರೋ ಅವರ ವೇದನೆಯಾಗಿದೆ. ಸೊಲೊಮೋನನು ಇದರೊಂದಿಗೆ ಹೋರಾಡಿದನು, "ಇದ್ದದ್ದೇ ಇರುವದು, ನಡೆದದ್ದೇ ನಡೆಯುವದು, ಲೋಕದಲ್ಲಿ ಹೊಸದೇನೂ ಇಲ್ಲ" (ಪ್ರಸಂಗಿ 1:9). ಕೆಲವು ಸ್ಥಳಗಳಲ್ಲಿ ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ಕಲೆಗಳು ಇಲ್ಲಿಗಿಂತ ಹೆಚ್ಚಾಗಿ ಗುರುತಿಸಲ್ಪಟ್ಟಿವೆ. ಲೋಕವು

ತನ್ನ ಕೊನೆಯತ್ತ ಎಲ್ಲೋ ಒಂದೆಡೆಗೆ ಚಲಿಸುತ್ತಿದೆ ಎಂಬುದರ ಕುರಿತಾಗಿ ವಿಶ್ವಾಸಿಗ ಖಚಿತವಾಗಿದೆ. ಅವಿಶ್ವಾಸಿಗಳು ಕೇವಲ ಅವಕಾಶಗಳು ಮತ್ತು ಪರಿಸ್ಥಿತಿಗಳು ಅಧಿಕಾರವನ್ನು ಹೊಂದಿವೆ ಎಂದು ಪ್ರಕಟಿಸುತ್ತಾರೆ. ಲೋಕವು ಎಲ್ಲಿಗೂ ಹೋಗುತ್ತಿಲ್ಲ. ಮಾನವ ಜೀವಿತಕ್ಕೆ ಅಂತಿಮ ಉದ್ದೇಶವಿಲ್ಲ.

ಪೇತ್ರನು ಉಪಯೋಗಿಸಿದ, "ಮರಣ" *(koimaomai)* ಎಂಬ ಪದವನ್ನು ಉಪಯೋಗಿಸಿದ ರೀತಿ ಆಸಕ್ತಿಯನ್ನು ಕಳೆದುಕೊಂಡಿದೆ. ಇದು ಸ್ತೇಫನನ ಮರಣಕ್ಕೆ ಉಪಯೋಗಿ ಸಿದ ಅದೇ ಪದವಾಗಿದೆ. "ಅವನು ನಿದ್ರೆ ಹೋದನು" ಎಂದು ಲೂಕನು ಬರೆಯುತ್ತಾನೆ (ಅಪೊಸ್ತಲರ ಕೃತ್ಯಗಳು 7:60). ಪೌಲನು ಸತ್ತವರ ಕುರಿತು "ನಿದ್ರೆ ಹೋದವರು" ಎಂದು ಬರೆಯುವಾಗ (1 ಥೆಸಲೋನಿಕ 4:13). ಅದೇ ಪದವನ್ನು ಉಪಯೋಗಿಸುತ್ತಾನೆ. ವಾಸ್ತ ವವಾಗಿ NASB ಹೀಗೆ ಅನುವಾದಿಸುತ್ತದೆ, ಅನೇಕ ಅವತರಣಿಕೆಗಳು "ಸಾಯುವದು" ಎಂಬ ಕ್ರಿಯಾಪದವನ್ನು ಉಪಯೋಗಿಸುತ್ತವೆ. ಅದೇ ಪದದ ಸ್ಪಷ್ಟವಾದ ಅರ್ಥ. ಇನ್ನೂ, "ನಿದ್ರೆಯಲ್ಲಿ" ಇದು ಮರಣ ಕುರಿತು ಮಾತನಾಡುವ ಮೃದುವಾದ ಪದ.

"ನಿದ್ರೆಯಲ್ಲಿ" ಇರುವಾಗ ಇದು ಗ್ರೀಕೋ ರೋಮನ್ ಲೋಕದಲ್ಲಿ ಮರಣಕ್ಕೆ ಉಪಯೋಗಿ ಸಬಹುದಾದ ಸಾಮಾನ್ಯ ರೂಪಾಕಾಲಂಕಾರವಾಗಿದೆ. ಮರಣವು ರೋಮನ್ ಲೋಕದಲ್ಲಿ ಸತ್ವಹೀನವಾದ ಮತ್ತು ಸತ್ಯವನ್ನು ಸೂಕ್ಷವಾಗಿ ಹೇಳುವ ಒಂದು ವಿಕಾರವಾದ ವಿಷಯ ಎಂಬುದು ಸಹ ಸತ್ಯವಾಗಿದೆ. ಪ್ರಾಚೀನ ಸಮಯದದಿಂದ ಪಂಚಪಾತ್ರೆಯನ್ನು ತಲೆಬುರುಡೆಯ ಆಕಾರಕ್ಕೆ ನಮೂನೆಗೆ ಉಳಿಸಲ್ಪಟ್ಟಿವೆ. ರೋಮನ್‌ರ ಸಮಾಧಿಯ ಸ್ಮಾರಕಗಳ ಮೇಲೆ ಒಂದು ಸಾಮಾನ್ಯ ವಿಶೇಷವಾಗಿ ಲ್ಯಾಟೀನ್ ಅಕ್ಷರಗಳ ಅವಧಿಯಿಂದ *Non fui, fui, non sum, non curo*. ಇದರ ಮೊದಲ ಅಕ್ಷರಗಳಾಗಿವೆ N F F N S N C ಇದನ್ನು ಅನುವಾದಿಸಿದಾಗ ಪದಗಳು ಈ ಅರ್ಥವನ್ನು ನೀಡಿತ್ತವೆ. "ನೀನು ಆಗಿರಲಿಲ್ಲ, ನಾನು ಆಗಿದ್ದೆನು, ನಾನು ಅಲ್ಲ ನಾನು ಲಕ್ಷಿಸುವದಿಲ್ಲ."[4] ಪೇತ್ರನ ಸಮಕಾಲೀನರಲ್ಲಿ ಅನೇಕರಿಗೆ ಮರಣವು ಅವರ ಹಣೆಬರಹದ ವಿಕಾರ ರೂಪವಾಗಿತ್ತು. ಕ್ರೈಸ್ತರಿಗೆ, ಮರಣವೆನೆಂದರೆ ನಿದ್ರೆಹೋಗುವದಾಗಿತ್ತು.

ಕೆಲವು ಪೇತ್ರನ ವಾಕ್ಯದಲ್ಲಿ ದಶಕಗಳು ಕಳೆದುಹೋಗುವದನ್ನು ನೋಡುತ್ತಾರೆ. ಅವರು ಅಪೊಸ್ತಲನು "ಅವರ ಪಿತೃಗಳು ನಿದ್ರೆಹೋದರು" ಇದು ಒಂದು ಅಮೂರ್ತವಾದ ಹೇಳಿಕೆಯಲ್ಲ ಎಂದು ವಾದಿಸುತ್ತಾರೆ. ಇಲ್ಲಿ ಪಿತೃಗಳು ಎಂದರೆ ಕ್ರೈಸ್ತ ಸಮುದಾಯದಲ್ಲಿ ಆದಿಯಲ್ಲಿದ್ದವರು ಮತ್ತು ಈಗ ವಯಸ್ಸಾದವರು ಎಂದು ಅವರು ಹೇಳುತ್ತಾರೆ. ವರ್ಷಗಳು ಗತಿಸಿದವು, ಸಂತತಿಗಳು ಸತ್ತುಹೋದವು, ಇನ್ನೂ ಕರ್ತನು ತಿರುಗಿ ಬರಲಿಲ್ಲ. ಸುಳ್ಳು ಬೋಧಕರು ದೀರ್ಘಕಾಲದಿಂದ ಇದ್ದ ನಿರಾಶೆಯನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿ ಸುತ್ತಾರೆ. ಅವರು ಹೀಗೆ ಪದಗಳನ್ನು ಅರ್ಥೈಸಿ ಅವರು 2 ಪೇತ್ರನ ಪತ್ರಿಕೆ ಅಪೋಸ್ತಲನಾದ ಪೌಲನ ಮರಣದ ದಶಕಗಳ ನಂತರ ಬರೆಯಲ್ಪಟ್ಟಿರಬಹುದು ಎಂದು ಊಹಿಸುತ್ತಾರೆ. ಈ ಅರ್ಥೈಸುವಿಕೆ ಕೆಲವೊಂದು ಕಾರಣದಿಂದ ವಿಫಲವಾಗಿದೆ.

ಇಂಥಹ ಒಂದು ಅರ್ಥೈಸುವಿಕೆ ನಿರಾಶೆಯಾಗಿ ಸ್ಥಾಪಿತವಾಗಲು ದಶಕಗಳನ್ನು ತೆಗೆದುಕೊಂಡಿದೆ. ಅಪೊಸ್ತಲರ ಸಂದೇಶ. "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" ಎಂಬುದಾಗಿದೆ (1 ಪೇತ್ರ 4:7). "ಹತ್ತಿರ" ಎಂಬುದನ್ನು ಅನೇಕ ಕ್ರೈಸ್ತರು ಹೇಗೆ ಅರ್ಥೈಸಿಕೊಂಡಿದ್ದಾರೆ ಎಂಬುದನ್ನು ಹೇಳಲು ಕಠಿಣವಾಗಿದೆ. ಕೆಲವರು ಕರ್ತನು ಒಂದು ವರ್ಷದಲ್ಲಿ ತಿರುಗಿಬರುತ್ತಾನೆ ಎಂದು ನಿರ್ಣಯಿಸಿರಬಹುದು. ನಿರಾಶೆಯು ಸ್ಥಾಪಿತವಾಗುವದಕ್ಕೆ ದಶಕಗಳವರೆಗೆ ಕಾಯುವದು ಅವಶ್ಯವಾಗಿರಲಿಕ್ಕಿಲ್ಲ. ನಿರಾಶೆಯು ಅದರ ಪ್ರಾರಂಭದ ಹಂತದಲ್ಲಿಯೇ ತೀವ್ರವಾಗಿ ಸ್ಥಾಪಿತವಾಗಿರಬಹುದು. ಸುಳ್ಳು ಬೋಧಕರು, ಸಂತತಿಗಳು ಬಂದು ಹೋಗುತ್ತವೆ ಆದರೆ ಪ್ರಾರಂಭದ ದಿನದಿಂದ ಸಂಗತಿಗಳು ಬದಲಾಗಿಲ್ಲ

ಎಂದು ಸೂಚಿಸುವದರ ಮೂಲಕ ಕ್ರೈಸ್ತರ ನಿರೀಕ್ಷೆಯನ್ನು ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸಿದರು. ಅವರ ಪ್ರಕಾರ "ಕರ್ತನು ತಿರುಗಿಬರುವದು" ಸಂಭವಿಸುವದಿಲ್ಲ.

ಸುಳ್ಳು ಬೋಧಕರು ಜ್ಞಾನದ ಸ್ವಯಂ-ನೇಮಿತ ಪಾಲಕರಾಗಿದ್ದರು. ಹೀಗಾಗಿ ಅವರು ವಾಸ್ತವವಾಗಿ ಕರ್ತನ ಬರೋಣ ಇಲ್ಲ ಎಂಬುದನ್ನು ತಿಳಿದುಕೊಂಡಿದ್ದರು. ಇದರೊಟ್ಟಿಗೆ ಅವರ ಜ್ಞಾನ, ಆದುದರಿಂದ ಅವರು ಸ್ವಾತಂತ್ರ್ಯದ ಕುರಿತು ತಮ್ಮ ಸಂದೇಶವನ್ನು (2:19), ಅವರು ಧರ್ಮಶಾಸ್ತ್ರವನ್ನು ತಿರಸ್ಕರಿಸುವದನ್ನು (2:21) ಮತ್ತು ತಮ್ಮ ಶರೀರದ ತೃಪ್ತಿಪಡಿಸುವಿಕೆಯನ್ನು (2:18) ಸಮರ್ಥಿಸಿಕೊಳ್ಳುತ್ತಿದ್ದರು. ಸುಳ್ಳು ಬೋಧಕರು ನ್ಯಾಯತೀರ್ಪಿಗಾಗಿ ಕರ್ತನಾದ ಯೇಸು ಪ್ರತ್ಯಕ್ಷನಾಗುವದು ಕ್ರೈಸ್ತ ಸಿದ್ಧಾಂತದ ನಂತರದ ಯೋಚನೆಯಲ್ಲ. ಮಾನವ ಇತಿಹಾಸವು ಎಲ್ಲೋ ಒಂದೆಡೆಗೆ ಹೋಗುತ್ತಿದೆ ಎಂಬುದಕ್ಕೆ ಯೇಸು ತಿರುಗಿಬರುತ್ತಾನೆ ಎಂಬುದು ಒಂದು ಧೈರ್ಯದಾಯಕವಾದ ಪ್ರಕಟನೆಯಾಗಿದೆ. ಜನರು ನಡೆದುಕೊಳ್ಳುವ ರೀತಿ ಮತ್ತು ಅವರು ಏನನ್ನು ನಂಬುತ್ತಾರೆ ಎಂಬುದು ದೇವರು ಲೋಕವನ್ನು ಕೊನೆಯ ಉತ್ತರದಾಯಿತ್ವದೆಡೆಗೆ ನಡೆಸುತ್ತಿದ್ದಾನೆ ಎಂಬುದನ್ನು ಪರಿಗಣಿಸುತ್ತದೆ. ಎಲ್ಲಾ ಜನಾಂಗಗಳು ಆತನ ಮುಂದೆ ನೆರೆದು ಬರುವವು (ಮತ್ತಾಯ 25:31-33) ಮತ್ತು ಪ್ರತಿಯೊಂದು ಮೊಣಕಾಲು ಅಡ್ಡಬೀಳುವದು (ಫಿಲಿಪ್ಪಿ 2:10). ಕೊನೆಯ ದಿನಸಗಳು ಕೊನೆಯ ದಿವಸದೊಂದಿಗೆ, "ಕರ್ತನ ದಿನ" (3:10), ಕಾಲವು ಪರಿಪೂರ್ಣವಾದಾಗ. ಕ್ರೈಸ್ತರ ಪ್ರತಿಯೊಂದು ದೃಢಿಕರಿಸುವಿಕೆ ಅವರ ಪ್ರಾರಂಭದ ಸಮಯ ಒಂದಿತ್ತು ಮತ್ತು ಅಂತ್ಯದ ಸಮಯವೂ ಇದೆ ಎಂಬ ನಂಬಿಕೆಯಿಂದಾಗಿ ಬೆಳೆಯುವದು. "ಎಲ್ಲವೂ ಹೇಗಿ ದೆಯೋ ಹಾಗೆ ಮುಂದುವರೆಯುತ್ತದೆ" ಎಂದು ಹೇಳುವದು ಅಪನಂಬಿಕೆಯಾಗಿದೆ, ಲೌಕಿಕ ವಿಷಯಗಳಲ್ಲಿ ಆಳವಾಗಿ ಬೇರೂರಿದ ಮತ್ತು ಆಧುನಿಕ ಪಾಶ್ಚತ್ತ ಸಂಸ್ಕೃತಿಗೆ ಸಂಬಂಧಿಸಿದ ಅಪನಂಬಿಕೆಯಾಗಿದೆ.

**ವಚನ 5.** ಮುಕ್ತಾಯ ಮಾಡಲು ಪೇತ್ರನು ವಾದಿಸುತ್ತಾನೆ ಮತ್ತು ವಾದದ ಕೊನೆಯಲ್ಲಿ ಪ್ರಾರಂಭವಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಇವೆರಡು ಪರಸ್ಪರ ಸಂಬಂಧವನ್ನು ಹೊಂದಿವೆ. ದೇವರು ಯಾವುದನ್ನು ಅಸ್ತಿತ್ವದಲ್ಲಿ ತಂದಿದ್ದಾನೋ ಅದಕ್ಕೊಂದು ಮುಕ್ತಾಯವನ್ನು ಸಹ ಇಟ್ಟಿದ್ದಾನೆ. ಕೊನೆಯ ದಿವಸಗಳು ಯೇಸುವಿನ ಕ್ರೂಜೆಯ ಮರಣ ಮತ್ತು ಪುನರುತ್ಥಾನದೊಂದಿಗೆ ಈಗಾಗಲೇ ಪ್ರಾರಂಭವಾಗಿವೆ. ಪುನರುತ್ಥಾನ ಹೊಂದಿದ ಯೇಸು ಕೊನೆಯ ನ್ಯಾಯತೀರ್ಪಿಗೆ ತಿರುಗಿ ಬರಲಿಕ್ಕಿದ್ದಾನೆ. ಪ್ರಾರಂಭ ಮತ್ತು ಅಂತ್ಯ ನಿಜವಾಗಿವೆ ಯಾಕಂದರೆ ದೇವರು ನಿಜವಾಗಿದ್ದಾನೆ. ನ್ಯಾಯ ತೀರಿಸುವದಕ್ಕೆ ಕ್ರಿಸ್ತನ ತಿರುಗಿ ಬರಲಿಕ್ಕಿದ್ದಾನೆ ಎಂಬುದನ್ನು ಅಲ್ಲಗಳೆಯುವವರನ್ನು ಪೇತ್ರನು ವೀಕ್ಷಿಸಿ ಅವರು **ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ಬಹಳ ಹಿಂದಿನಿಂದ ಅಸ್ಥಿತ್ವದಲ್ಲಿದೆ** ಎಂಬುದು ಅವರ ಗಮನದಿಂದ ತಪ್ಪಿಸಿಕೊಂಡಿದೆ ಎಂದು ಡೊಂಕಾಗಿ ಹೇಳುತ್ತಾನೆ. ಇಲ್ಲಿ ವಿಷಯವೇನೆಂದರೆ ಅವರು ದೇವರ ಅಪ್ಪಣೆಯಿಂದ ಅಸ್ತಿತ್ವದಲ್ಲಿ ಬಂದರು; ಅವರು ದೇವರ ಅಪ್ಪಣೆಯ ಮೇರೆಗೆ ಅಸ್ತಿತ್ವದಲ್ಲಿ ಬರುತ್ತಾರೆ.

ಪೇತ್ರನ ಸೃಷ್ಟಿಯ ಕುರಿತಾಗಿ ಬರೆದಾಗ, ಆತನು ಹಳೆ ಒಡಂಬಡಿಕೆಯ ಪ್ರವಾದಿಗಳ ಮತ್ತು ಜ್ಞಾನಿಗಳ ಸಂಪ್ರದಾಯವನ್ನು ಆತುಕೊಳ್ಳುತ್ತಾನೆ. ಆತನು ಯಾವುದೇ ದಂತಕತೆಗಳಲ್ಲಿ ಬರುವ ದೇವರುಗಳ ಕದನವು ಭೂಲೋಕದಲ್ಲಿ ಮಾನವರನ್ನು ಅಸ್ತಿತ್ವದಲ್ಲಿ ತಂದಿತು ಎಂದು ಹೇಳುವದಿಲ್ಲ. ಅವನು ಆಧುನಿಕ ವಿಜ್ಞಾನಿಗಳ ಯಾವ ಪ್ರಯತ್ನವನ್ನು ತೃಪ್ತಿಪಡಿಸುವ ಯಾವ ಪ್ರಯತ್ನವನ್ನು ಆತನು ಮಾಡುವದಿಲ್ಲ. ಅವನು ಸರಳವಾಗಿ ದೃಢೀಕರಿಸುತ್ತಾನೆ. ಅಪೋಸ್ತಲನು ಆದಿಕಾಂಡದಲ್ಲಿರುವ ದಾಖಲೆಯು ಸರಿಯಾಗಿದೆ ಎಂಬುದನ್ನು ಸ್ವಂತ-ಸಾಕ್ಷಿಯಾಗಿ ತೆಗೆದುಕೊಳ್ಳುತ್ತಾನೆ. ದೇವರು ಮಾತನಾಡಿದನು ಮತ್ತು ಲೋಕವು ಅಸ್ತಿತ್ವದಲ್ಲಿ ಬಂತು. ಇದು ನಂಬಿಕೆಯ ಹೇಳಿಕೆಯಾಗಿದೆ. ನೈಜ್ಯತೆಯ ಎಲ್ಲಾ ದೃಢೀಕರಣಗಳು ಅವು "ವೈಜ್ಞಾನಿಕವಾ

ಗಿರಲಿ'' ಅಥವಾ ಅವುಗಳಿಗೆ ಇನ್ನಾವುದಾದರೂ ಸಂಕೇತವನ್ನು ನೀಡಿರಲಿ, ನಂಬಿಕೆಯ ಹೇಳಿಕೆಯೊಂದಿಗೆ ಪ್ರಾರಂಭವಾಗುತ್ತವೆ; ಆದರೆ ಎಲ್ಲಾ ನಂಬಿಕೆಯ ಹೇಳಿಕೆಗಳು ಅದೇ ಕ್ರಮದಲ್ಲಿರುವದಿಲ್ಲ.

ನಂಬಿಕೆಯ ಪರ್ಯಾಯ ಹೇಳಿಕೆಗಳು, ವಿಶ್ವಕ್ಕೆ ಪ್ರಾರಂಭ ಎಂಬುದಿಲ್ಲ, ಆ ವಿಷಯವು ತನ್ನಷ್ಟಕ್ಕೆ ಶಾಶ್ವತವಾದದ್ದಾಗಿದೆ, ಅವದು ವಿಷಯದಲ್ಲಿ ಇಚ್ಛಾಶಕ್ತಿಯನ್ನು ಮತ್ತು ಉತ್ಪಾದಿಸುವ ಬಲವನ್ನು ನಿಸರ್ಗಗಲ್ಲಿ ಕ್ರಮವನ್ನು ಮತ್ತು ಜೀವಿತದಲ್ಲಿ ಅದ್ಭುತಗಳನ್ನು ಉತ್ಪಾದಿಸುವದು ಸ್ವಾಭಾವಿಕವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯಿಂದಾಗಿ, ನಂಬಿಕೆಗೆ ಮೀರಿದ ಅಹಂಕಾರ ಮಾನವ ಕುಟುಂಬದಲ್ಲಿ ತುಂಬಿದೆ. ಈ ಅಹಂಕಾರವನ್ನು ಕೆಲವರು ಸಂದೇಹಿಸುವಂತೆ ದೇವರು ಒಂದು ರೀತಿಯಲ್ಲಿ ಸಹಿಸಲಾಧ್ಯವಾದ್ದು ಎಂದು ಇನ್ನೊಂದು ರೀತಿಯಲ್ಲಿ ವಿನೋದಪಡಿಸುವಂತಹದ್ದಾಗಿದೆ ಎಂದು ಪರಿಗಣಿಸುತ್ತಾನೆ. ಕ್ರೈಸ್ತರ ನಂಬಿಕೆಯ ಹೇಳಿಕೆಯು ಲೋಕದ ವೀಕ್ಷಣೆಯನ್ನು ಮತ್ತು ಮಾನವರ ಜೀವಿತವನ್ನು ಆಧರಿಸಿದೆ. ಇದು ದೇವರ ತನ್ನನ್ನು ತಾನು ಸೃಷ್ಟಿಯಲ್ಲಿ ಮತ್ತು ವಾಕ್ಯದಲ್ಲಿ ಪ್ರಕಟಿಸಿರುವದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಕರ್ತನು ತಿರುಗಿ ಬರುವದನ್ನು ಅಲ್ಲಗಳೆಯುವ ಸುಳ್ಳುಬೋಧಕರು "ದೇವರ ವಾಕ್ಯದ ಮೂಲಕ'' ಭೂಮಿ ಮತ್ತು ಆಕಾಶ ಪ್ರಾರಂಭವಾಯಿತು ಎಂಬುದನ್ನು ಮರೆತಿದ್ದಾರೆ ಎಂದು ಪೇತ್ರನು ಉತ್ತಮವಾದ ಕಾರಣದಿಂದ ತನ್ನ ಓದುಗರಿಗೆ ಜ್ಞಾಪಿಸುತ್ತಾನೆ.

ಅದೇ ಸಮಯದಲ್ಲಿ, ಸೃಷ್ಟಿಯ ಪ್ರಾರಂಭವನ್ನು ಕೊನೆಯಿದೆ ಎಂಬುದಕ್ಕೆ ಸಾಕ್ಷಿಯಾಗಿ ಸೂಚಿಸುತ್ತಾನೆ ಎನ್ನುವದು ಆಶ್ಚರ್ಯವಾಗೇನಿಲ್ಲ, ಪದಗಳ ಅವನ ಆಯ್ಕೆ ಆಶ್ಚರ್ಯಕರವಾಗಿದೆ. ಪೇತ್ರನು **ಪೂರ್ವಕಾಲದಲ್ಲಿದ್ದ ಭೂಮ್ಯಾಕಾಶಗಳು ದೇವರ ವಾಕ್ಯದ ಮೂಲಕ ನೀರಿನಿಂದ ಉಂಟಾಯಿತು.** ಬಹುಶಃ ಆತನ ಮಾತುಗಳಲ್ಲಿ ಇದು ತೋರಿಬಂದಾಗ್ಯೂ ಆತನು ಜೀವಿಸುವದಕ್ಕೆ ನೀರಿನ ಅವಶ್ಯಕತೆಯ ಕುರಿತಾಗಿ ಏನನ್ನೂ ಹೇಳುತ್ತಿಲ್ಲ. ಆದಿಕಾಂಡದಲ್ಲಿರುವ ದಾಖಲೆ ಅಲಂಕಾರಿಕ ಭಾಷೆಯಲ್ಲಿ ಆಕಾಶದಲ್ಲಿರುವ ನೀರನ್ನು ಭೂಮಿಯಲ್ಲಿರುವ ನೀರನ್ನು ಪ್ರತ್ಯೇಕಿಸಿದನ್ನು ಹೇಳುತ್ತದೆ. ಇದಕ್ಕಿಂತ ಹೆಚ್ಚಾಗಿ ಪೇತ್ರನು ನ್ಯಾಯತೀರ್ಪು ಎಂಬ ಮುಖ್ಯ ವಿಷಯದೆಡೆಗೆ ನಡೆಸುತ್ತಿದ್ದಾನೆ. ನಂತರ ಒಣ ನೆಲವನ್ನು ಸೃಷ್ಟಿಸಲು ಭೂಮಿಯ ಮೇಲಿದ್ದ ನೀರನ್ನು ಒಂದೆಡೆಗೆ ಸಂಗ್ರಹಿಸುವದನ್ನು ನೋಡುತ್ತೇವೆ (ಆದಿಕಾಂಡ 1:6-10). ದೇವರು ನೀರನ್ನು ನಿರ್ವಹಿಸಿರುವದು, ನೀರಿನ ಮೇಲೆ ಆತನಿಗೆ ಇರುವ ಒಡೆತನ ಸೃಷ್ಟಿಯ ಕಥೆಯಲ್ಲಿ ಪ್ರಾಮುಖ್ಯವಾಗಿದೆ. ದೇವರು ನೀರನ್ನು ನಿರ್ವಹಿಸಿದ ರೀತಿಯ ಕುರಿತು ಆತನು ಸ್ಪಷ್ಟವಾಗಿದ್ದರೂ, ಪೇತ್ರನು ನ್ಯಾಯತೀರ್ಪಿನಲ್ಲಿ ನೀರಿನ ಕುರಿತಾಗಿ ವಹಿಸಿದಷ್ಟು ಸೃಷ್ಟಿಯಲ್ಲಿ ನೀರಿನ ಕುರಿತಾಗಿ ಅಷ್ಟೊಂದು ಕಾಳಜಿಯನ್ನು ವಹಿಸುತ್ತಿಲ್ಲ. ಅವನ ವಿಚಾರಗಳು ಮುಂದುವರೆಯುತ್ತಿರುವ ಹಾಗೆ ಅವನ ವಿಷಯವು ಹೆಚ್ಚು ಸ್ಪಷ್ಟವಾಗುತ್ತದೆ.

**ವಚನ 6.** ತನ್ನ ಚಿಕ್ಕ ಪತ್ರದಲ್ಲಿ ಮೂರು ಸಾರಿ, ಪೇತ್ರನು ಜಲಪ್ರಳಯವನ್ನು ಜ್ಞಾಪಿಸಿಕೊಳ್ಳುತ್ತಾನೆ (1 ಪೇತ್ರ 3:20; 2 ಪೇತ್ರ 2:5; 3:6) ಎಲ್ಲಾ ಮೂರು ಜಲಪ್ರಳಯದ ಉದಾಹರಣೆಗಳಲ್ಲಿ ದೇವರ ನ್ಯಾಯತೀರ್ಪಿ ದೇವವಿರೋಧಿ ಲೋಕಕ್ಕೆ ಅಂತ್ಯವನ್ನು ತಂದಿತು ಎಂಬುದನ್ನು ಜ್ಞಾಪಿಸುತ್ತವೆ. ಆತನ ನ್ಯಾಯತೀರ್ಪಿ ಸದ್ಯದಲ್ಲಿರುವದಕ್ಕೆ ಒಂದು ಅಂತ್ಯವನ್ನು ತರುತ್ತದೆ. ಈ ವಚನದ **ಪ್ರಾರಂಭ** *(di'hōn)* ಪದಗಳ ಮೂಲಕ ಗ್ರೀಕ್ ಸರ್ವನಾಮವು ಬಹುವಚನದಲ್ಲಿರುವದು ನಮಗೆ ಗಲಿಬಿಲಿಯನ್ನುಂಟು ಮಾಡುತ್ತದೆ. ಸಹಜವಾಗಿ ಪೇತ್ರನು "ಮೂಲಕ'' ಅಥವಾ "ಅದರ ಮಾರ್ಗವಾಗಿ'' ಎಂದು ಅರ್ಥೈಸುತ್ತಾನೆ. ದೇವರ ವಾಕ್ಯ ಮತ್ತು ನೀರುಗಳ ಮೂಲಕ **ಆ ಸಮಯದಲ್ಲಿ ಲೋಕವನ್ನು ನಾಶಮಾಡಿತು.** ಕೇವಲ ಜಲಪ್ರಳಯವು ಲೋಕವನ್ನು ನಾಶಮಾಡಲಿಲ್ಲ, ಆದರೆ ದೇವರ ವಾಕ್ಯಗಳು ನಾಶನಕ್ಕೆ ಪ್ರಾಮುಖ್ಯವಾದ ಕಾರಣಗಳಾಗಿವೆ. ಅಪೊಸ್ತಲನು ಕರ್ತನ ಬರೋಣವನ್ನು ಅಲ್ಲಗಳೆಯುವವರಿಗೆ ದೇವರು ಸೃಷ್ಟಿಕರ್ತನು ಎಂಬುದನ್ನು ಜ್ಞಾಪಿಸುತ್ತಾನೆ. ಸೃಷ್ಟಿಕರ್ತನು ಲೋಕಕ್ಕೆ ನ್ಯಾಯತೀರಿಸಿದ್ದಾನೆ

ಮತ್ತು ಅದನ್ನು ನೀರಿನಿಂದ ಈ ಹಿಂದೆ ನಾಶಮಾಡಿದ್ದಾನೆ. ಆತನು ಹಿಂದಿನ ಕಾಲದಲ್ಲಿ ಲೋಕವನ್ನು ಲೆಕ್ಕಕೇಳಿದಷ್ಟೇ ಖಚಿತವಾಗಿ ಆತನು ತಿರುಗಿ ಲೆಕ್ಕಾಕೊಡುವದಕ್ಕೆ ಅದನ್ನು ಕರೆಯಲಿದ್ದಾನೆ.

**ವಚನ 7.** ದೇವರ ವಾಕ್ಯವು ಸೃಷ್ಟಿಯ ರಚನೆಯಲ್ಲಿ ಮತ್ತು ನೀರಿನ ಮೂಲಕ ಅದರ ನಾಶನದಲ್ಲಿ ಪ್ರಾಮುಖ್ಯವಾಗಿರುವ ಹಾಗೆ, **ಆದರೆ ಈಗಿರುವ ಭೂಮ್ಯಾಕಾಶಗಳು ಅದೇ ವಾಕ್ಯದ ಬಲದಿಂದ ಬೆಂಕಿಯ ಮೂಲಕ ನಾಶವಾಗುವದಕ್ಕೆ ಇಡಲ್ಪಟ್ಟಿವೆ.** ವಚನವು ವಿರುದ್ಧಾರ್ಥದ *de* ಎಂಬ ಕೂಡಿಸುವ ಪದದೊಂದಿಗೆ ಪ್ರಾರಂಭವಾಗಿದೆ, ಹಿಂದೆ ಸಂಭವಿಸಿರುವರ ವ್ಯತ್ಯಾಸವನ್ನು ಸೂಚಿಸುವದರ ಮೂಲಕ NASB ಇದನ್ನು **ಆದರೆ** ಎಂದು ಸರಿಯಾಗಿ ಅನುವಾದಿಸುತ್ತದೆ. ದೇವರ ವಿರೋಧಿ ಆಕಾಶ ಮತ್ತು ಭೂಮಿಯ ಮತ್ತು ನ್ಯಾಯ ತೀರ್ಪಿನಲ್ಲಿ ಇದ್ದ ಹಾಗೆಯೇ ಸಧ್ಯದಲ್ಲಿರುವದರ ಸ್ವರೂಪಗಳ ಮಧ್ಯದಲ್ಲಿ ಅಷ್ಟೊಂದು ವ್ಯತ್ಯಾಸವಿಲ್ಲ. ದೇವರು ದೇವವಿರೋಧಿ "ಆಕಾಶ ಮತ್ತು ಭೂಮಿಗೆ" ನೀರಿನ ಮೂಲಕ ನ್ಯಾಯತೀರ್ಪನ್ನು ನೀಡಿದನು, ಆತನು ಬೆಂಕಿಯ ಮೂಲಕ ಸದ್ಯದ ಲೋಕಕ್ಕೆ ನ್ಯಾಯತೀರ್ಪನ್ನು ನೀಡುತ್ತಾನೆ. "ಭೂಮ್ಯಾಕಾಶ" ಎಂಬ ವಾಕ್ಯಭಾಗ ಮಾನವರು ಲೋಕದಲ್ಲಿ ಅನುಭವಿಸುತ್ತಿರುವದಕ್ಕೆ ಅನಾವಶ್ಯಕವಾದ ಪದಪ್ರಯೋಗವಾಗಿದೆ. ಆದುದರಿಂದ, ಜಲಪ್ರಳಯವು ಪರಲೋಕದ ನ್ಯಾಯತೀರ್ಪಾಗಿ ಹೇಗೆ ಪರಿಗಣಿಸಲ್ಪಡುತ್ತದೆ ಎಂಬುದು ಅಸಮಂಜಸವಾಗಿದೆ. ವಿಷಯವೆಂದರೆ ಸರ್ವಸೃಷ್ಟಿಯು ದೇವರ ನ್ಯಾಯತೀರ್ಪಿಗೆ ವಿಷಯವಾಗಿದೆ.

ಜಲಪ್ರಳಯದ ನಂತರ ದೇವರು ನೋಹನಿಗೆ, ನಾನು ಹಿಂದೆ ಮಾಡಿದಂತೆ ಇನ್ನು ಮೇಲೆ ಎಂದಿಗೂ ಜೀವಿಗಳನ್ನು ನಾಶಮಾಡುವದಿಲ್ಲ (ಆದಿಕಾಂಡ 8:21) ಎಂದು ಭರವಸೆಯನ್ನು ನೀಡುತ್ತಾನೆ. ಯೆಹೂದ್ಯರ ಅರ್ಥೈಸುವಿಕೆ ಕೊನೆಯ ವಾಕ್ಯಭಾಗವನ್ನು ಸಾಮಾನ್ಯವಾಗಿ ತಿಳಿದುಕೊಳ್ಳುತ್ತದೆ. ಇದರ ಅರ್ಥ ನೀರಿನಿಂದ ಜಾಗತಿಕವಾದ ನ್ಯಾಯತೀರ್ಪ ಇಲ್ಲ ಎಂದು ಇದರ ಅರ್ಥ. ದೇವರು ಜಾಗತಿಕವಾದ ನ್ಯಾಯತೀರ್ಪನ್ನು ಇನ್ನೂ ಮೇಲೆ ತರುವದಿಲ್ಲ ಎಂದಲ್ಲ. ಜಲಪ್ರಳಯವಾದ ಅನೇಕ ವರ್ಷಗಳ ನಂತರ ಧರ್ಮೋಪದೇಶಕಾಂಡ ಪುಸ್ತಕದ ಕೊನೆಯಲ್ಲಿ ಬರುವ ಮೋಶೆಯ ಗೀತೆಯಲ್ಲಿ ದೇವರು ತನ್ನ ಸ್ವಂತ ಮಾತುಗಳನ್ನು ಧರ್ಮಶಾಸ್ತ್ರವನ್ನು ನೀಡಿದವನ ಬಾಯಲ್ಲಿಟ್ಟನು "ನನ್ನ ಕೋಪಾಗ್ನಿ ಪ್ರಜ್ವಲಿಸುತ್ತದೆ; ಅದು ಪಾತಾಳದವರೆಗೂ ವ್ಯಾಪಿಸಿ ಬೆಳೆ ಸಹಿತವಾಗಿ ಭೂಮಿಯನ್ನೂ ಬೂಡ ಸಹಿತವಾಗಿ ಬೆಟ್ಟಗಳನ್ನೂ ದಹಿಸಿಬಿಡುವದು" (ಧರ್ಮೋಪದೇಶಕಾಂಡ 32:22).

ದೇವರು ಲೋಕಕ್ಕೆ ಬೆಂಕಿಯ ನ್ಯಾಯತೀರ್ಪನ್ನು ಕಳುಹಿಸುತ್ತಾನೆ ಎಂಬುದು ಯೆಹೂದ್ಯದರಲ್ಲಿ ಸಾಮಾನ್ಯ ನಂಬಿಕೆಯಾಗಿತ್ತು. "ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆತನು ನಮ್ಮ ಕರ್ತನಾದ ಯೇಸುವು ದೇವರನ್ನರಿಯವದರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತಿಕಾರವನ್ನು ಸಲ್ಲಿಸುವನು" (2 ಥೆಸಲೋನಿಕ 1:7, 8). ಪೇತ್ರನು ಸಹ, ಯೇಸು ಕರ್ತನು ಬೆಂಕಿಯಲ್ಲಿ ಪ್ರತ್ಯಕ್ಷನಾಗುವ ಸಮಯವನ್ನು ದೇವರ ನ್ಯಾಯತೀರ್ಪಿನ ದಿನವೆಂದು ಹೇಳುತ್ತಾನೆ.

ಪೇತ್ರನ ಓದುಗರು ಅಪೊಸ್ತಲನು ಹೇಳಿದ ಅರ್ಹತೆಗಳನ್ನು ಕಳೆದುಕೊಳ್ಳುವದರಲ್ಲಿ ವಿಫಲರಾಗಲಿಲ್ಲ. ಎಲ್ಲಾ ಜನರು ಬೆಂಕಿಯ ನ್ಯಾಯತೀರ್ಪನ್ನು ಹೊಂದುವದಿಲ್ಲ, ಕೇವಲ ದುಷ್ಟರು **ನ್ಯಾಯತೀರ್ಪಿನ ದಿನವು** ಮಾತ್ರ ಬೆಂಕಿಯ **ಭಕ್ತಿಹೀನ ಮನುಷ್ಯರ ನಾಶಕ್ಕಾಗಿದೆ.** "ಭಕ್ತಿಹೀನ ಮನುಷ್ಯರಲ್ಲಿ" "ಆತನ ಪ್ರತ್ಯಕ್ಷತೆಯ ವಾಗ್ದಾನ ಏನಾಯಿತು?" ಎಂದು ಕೇಳುವ ಸುಳ್ಳು ಬೋಧಕರು ಅದರಲ್ಲಿರುವರು ಎಂಬುದರಲ್ಲಿ ಸಂದೇಹವಿಲ್ಲ. ಭಕ್ತಿಹೀನರ ನಾಶನದ ದಿನವಾದ ಅದೇ ದಿನವು ಯಾರು ದೇವರ ಪ್ರತ್ಯಕ್ಷತೆಯ ದಿನವನ್ನು ಎದುರು ನೋಡುತ್ತಾರೋ ಅವರ ಬಿಡುಗಡೆ ಮತ್ತು ರಕ್ಷಣೆಯ ದಿನವಾಗಿದೆ (3:12).

ಆದುನಿಕ ಜನರು, ಕ್ರೈಸ್ತರು ಮತ್ತು ಅಕ್ರೈಸ್ತರು ಲೋಕಾಂತ್ಯವನ್ನು ಕಲ್ಪಿಸಿಕೊಂಡು ಅದು ಲೋಕದ ಕೊನೆಯೆಂದು ಅರ್ಥಮಾಡಿಕೊಳ್ಳುತ್ತಾರೆ. ಬಹುಶಃ ಭೂಮಿಯೊಳಗಿಂದ ಜ್ವಾಲಾಮುಖಿಗಳು ಉದ್ಭವಿಸುತ್ತವೆ ಮತ್ತು ಎಲ್ಲಾ ಜೀವಿಗಳು ನಾಶವಾಗುತ್ತವೆ ಅಥವಾ ಯುದ್ಧಮಾಡುವ ರಾಷ್ಟಗಳು ನ್ಯೂಕ್ಲೀಯರ್ ಬಾಂಬ್‌ಗಳ ಮೂಲಕ ಲೋಕಕ್ಕೆ ಅಂತ್ಯವನ್ನು ತರುತ್ತವೆ. ಬಹುಶಃ ದೊಡ್ಡ ಉಲ್ಕಾಪಾತದಿಂದಾಗಿ ಭೂಮಿಯ ಮೇಲಿನ ಜೀವಿಗಳು ನಾಶವಾಗುತ್ತವೆ. ನಮ್ಮ ಎಲ್ಲಾ ವೈಜಾನಿಕ ಅದ್ಭುತಗಳಿಂದಾಗಿ, ಆಧುನಿಕ ಜನರನ್ನು ಎಲ್ಲಾ ವಿಷಯಗಳಿಗೆ ಅಂತ್ಯವಿದೆ ಎಂಬುದನ್ನು ಮನದಟ್ಟು ಮಾಡುವದರ ಕಠಿಣವಾಗಿದೆ. ಅವಿಶ್ವಾಸಿಗಳಿಗೆ ಸಹ, ಈ ವಿಶ್ವವು ಭಯವನ್ನು ಹುಟ್ಟಿಸುವ ಮತ್ತು ಅನಿಶ್ಚಿತವಾದ ಸ್ಥಳವಾಗಿದೆ. ಇಷ್ಟನ್ನು ಸತ್ಯವೇದವು ಸ್ಪಷ್ಟಪಡಿಸುತ್ತದೆ. ಅಂತ್ಯವು ಬಂದಾಗ ಅದು ಆಯ್ಕೆಯ ಸಂಗತಿಯಾಗಿರುವದಿಲ್ಲ. ದೇವರು ತನ್ನ ಮಗನನ್ನು ಎರಡನೆಯ ಸಾರಿ ಕಳುಹಿಸುವಾಗ ತಾನು ಇಚ್ಛೆಸಿದಂತೆ ಲೋಕಕ್ಕೆ ಅಂತ್ಯವನ್ನು ಬರಮಾಡುತ್ತಾನೆ. ನ್ಯಾಯತೀರ್ಪು ಮತ್ತು ನಿತ್ಯಜೀವವನ್ನು ನೀಡುತ್ತಾನೆ.

## "ಕರ್ತನ ದಿನ" (3:8-10)

**8 ಪ್ರಿಯರೇ, ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮಾತ್ರ ಮರೆಯಬೇಡಿರಿ.**
**9 ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ ಆತನು ತಡಮಾಡಿಸುವವನಲ್ಲ, ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ.**
**10 ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು. ಭೂಮಿಯೂ ಅದರಲ್ಲಿರುವ ಕೆಲಸಗಳೂ ಸುಟ್ಟುಹೋಗುವವು.**

"ಆತನ ಬರೋಣದ ವಾಗ್ದಾನ," "ನ್ಯಾಯತೀರ್ಪಿನ ದಿನ ಮತ್ತು ಭಕ್ತಿಹೀನ ಮನುಷ್ಯರ ನಾಶನ," "ಕರ್ತನ ದಿನ" ಇಂಥಹದೇ ಎಲ್ಲಾ ವಾಕ್ಯಾಂಗಗಳು ಈ ಘಟನೆಗೆ ಸಂಬಂಧಿಸಿದವುಗಳಾಗಿವೆ. ಕುಚೋದ್ಯಗಾರರು ಕರ್ತನು ಮಾನವ ಕುಲಕ್ಕೆ ನ್ಯಾಯತೀರ್ಪನ್ನು ನೀಡುವನೆಂಬುದನ್ನು ಸಂದೇಹಿಸುತ್ತಾರೆ, ಆದರೆ ಪೇತ್ರನು ಅವರಿಗೆ ದೇವರು ಸೃಷ್ಟಿ ಕರ್ತನು ಎಂಬುದನ್ನು ಜ್ಞಾಪಿಸುತ್ತಾನೆ, ಆತನು ನ್ಯಾಯತೀರಿಸುತ್ತಾನೆ ಇದರೊಟ್ಟಿಗೆ, ಅಪೊಸ್ತಲನು ಹಿಂದಿನ ದಿನಗಳಲ್ಲಿ ದೇವವಿರೋಧಿಗಳು ಸಹಸ ಕುಚೋದ್ಯಮಾಡಿದರು. ಮತ್ತು ಸಂದೇಹಿಸುತ್ತಿದ್ದ ಲೋಕಕ್ಕೆ ಖಂಡಿತವಾಗಿಯು ನ್ಯಾಯತೀರ್ಪು ಬಂತು, ಅದು ಸಂದೇಹಿಸುತ್ತಿರುವ ಈ ಲೋಕಕ್ಕೂ ಬರುತ್ತದೆ. ಯಾವ ತಡವಾಗಿರುವದಕ್ಕೆ ಅವಧಿಗೆ ಆಶ್ಚರ್ಯಪಡುತ್ತಿರುವವರಿಗೆ ಪೇತ್ರನು ಇತರ ಆಲೋಚನೆಗಳನ್ನು ನೀಡುತ್ತಾನೆ. ಅವನ ಉದ್ದೇಶ ತನ್ನ ಓದುಗರಿಗೆ ಅಪೊಸ್ತಲರು ವಾಗ್ದಾನ ಮಾಡಿದ ವಿಷಯ ನೆರವೇರುತ್ತದೆ ಎಂದು ಭರವಸೆಯನ್ನು ನೀಡುವದಾಗಿದೆ. ಪರಲೋಕಕ್ಕೆ ಏರಿಹೋಗಿ ದೇವರ ಬಲಗಡೆಯಲ್ಲಿ ಆಸೀನನಾಗಿರುವ ಕರ್ತನು ತಿರುಗಿ ಬರಲಿಕ್ಕಿದ್ದಾನೆ. ಅವನು ಯಾವಾಗ ಬರುತ್ತಾನೆ, ಆಗ ಆತನು ಮಾನವ ಕುಲಕ್ಕೆ ನ್ಯಾಯತೀರ್ಪನ್ನು ನೀಡುವದಕ್ಕಾಗಿ ಮತ್ತು ನೀತಿವಂತರ ಎತ್ತಿಹಿಡಿಯುವದಕ್ಕಾಗಿ ಬರುತ್ತಾನೆ.

**ವಚನ 8.** ಪ್ರವಾದಿಗಳು ಸಹ ದೇವರ ನ್ಯಾಯತೀರ್ಪು ತಡವಾಗಿದ್ದರಿಂದ ತಮ್ಮ ಸಮಕಾಲೀನವರಿಂದ ಕುಚೋದ್ಯವನ್ನು ಎದುರಿಸಿದರು. ಯೆರೆಮೀಯನು ದೇವರ

ನ್ಯಾಯತೀರ್ಪು ಸಮೀಪವಾಯಿತು ಎಂದು ಪ್ರಕಟಿಸುವಾಗ ತನ್ನ ವಯಕ್ತಿಕ ಕಾರ್ಯವನ್ನು ಮುನ್ನಡೆಸುವದಕ್ಕೆ ಹಾವಿನಂತೆ ವಿಷಯವನ್ನು ಕಕ್ಕುವದರಲ್ಲಿ ಆನಂದಿಸುತ್ತಾನೆ ಎಂದು ಕುಚೋದ್ಯ ಮಾಡಿದರು, ಪ್ರವಾದಿಗೆ ತನ್ನ ಸಂದೇಶವು ದೇವರಿಂದ ಬಂದದ್ದು ಎಂಬುದು ತಿಳಿದಿತ್ತು, ಆದಾಗ್ಯೂ ಅವನು ತಡವಾದದ್ದಕ್ಕೆ ಆಶ್ಚರ್ಯಪಟ್ಟನು. ಆತನು ದೇವರನ್ನು ಹೀಗೆ ಸಂಬೋಧಿಸಿದನು, "ನೀನೇ ನನಗೆ ಸುತ್ಯನು. ಅಹಾ, ಜನರು ನನಗೆ ಯೆಹೋವನ ಮಾತೆಲ್ಲಿ? ಅದು ಈಗಲೇ ನೆರವೇರಲಿ ಎಂದು ಹೇಳುತ್ತಾರೆ. ನಾನಾದರೋ ಸಭಾಪಾಲನೆಯಲ್ಲಿ ನಿನ್ನನ್ನು ಹಿಂಬಾಲಿಸುವದನ್ನು ಬಿಡುವದಕ್ಕೆ ಆತುರಪಡಲಿಲ್ಲ; ನೀನೇ ಬಲ್ಲೆ; ನಿನ್ನ ಸಮಕ್ಷಮದಲ್ಲೇ ನನ್ನ ಬಾಯ ಮಾತು ಹೊರಟಿತು" (ಯೆರಮಿಯ 17:15, 16). ಯೆರೆಮೀಯನು, ಪೇತ್ರನಂತೆ ಕರ್ತನು ನಿರ್ದಿಷ್ಟವಾಗಿ ಯಾವಾಗ ನ್ಯಾಯತೀರಿಸುವನು ಎಂಬುದನ್ನು ಊಹಿಸಲಿಲ್ಲ, ಆದರೆ ಆತನ ನ್ಯಾಯತೀರ್ಪಿನ ಕುರಿತು ಅವನಿಗೆ ಸಂದೇಹವಿರಲಿಲ್ಲ.

ಯೆರೆಮೀಯನು ಮಾಡಿದಂತೆ ಪೇತ್ರನು ದೂರಲಿಲ್ಲ ಬದಲಾಗಿ, ಆತನು ತನ್ನ ಓದುಗರೊಂದಿಗೆ ವಿವೇಚಿಸಿದನು. ನ್ಯಾಯತೀರ್ಪು ತಡವಾದದ್ದಕ್ಕೆ ಮತ್ತು ಅನರ್ಥವನ್ನುಂಟುಮಾಡುವ ಲೋಕದ ಕೊನೆ ಎಂದರೆ ಏನು ಅರ್ಥ? ಅದು ನಮ್ಮ ವಿರೋಧಿಗಳು "ಕರ್ತನ ದಿನ" ಇಲ್ಲ ಎಂದು ಹೇಳುವ ಹಾಗಿದೆಯೋ? ಪೇತ್ರನು "ತಡ" ಎಂಬುದು ಸಂಬಂಧಾತ್ಮಕ ಪದ ಎಂದು ಸೂಚಿಸುವದರ ಮೂಲಕ ಪ್ರತಿಕ್ರಿಯಿಸುತ್ತಾನೆ. ಜನರು "ತಡ" ಎಂದು ಸಮಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡುವಾಗ ಅದು ದೇವರು ಸಮಯವನ್ನು ಪರಿಗಣಿಸುವದರ ಸಂಬಂಧದ ಮೇಲೆ "ತಡ" ತನ್ನ ಅರ್ಥವನ್ನು ನೀಡುತ್ತದೆ. ಅಪೊಸ್ತಲನು ಈ ಮಾತುಗಳಿಂದ ತನ್ನ ವಿರೋಧಿಗಳನ್ನು ಎದುರಿಸಿದನು, **ಈ ಒಂದು ಸಂಗತಿಯು ನಿಮ್ಮ ಗಮನದಿಂದ ತಪ್ಪಿಸಿಕೊಳ್ಳುವದು ಬೇಡ.** ಅಪೊಸ್ತಲನು ಒಂದೇ ಒಂದು ಕೀರ್ತನೆಯ ಭಾಗವನ್ನು ಜ್ಞಾಪಿಸಿಕೊಳ್ಳುತ್ತಾನೆ ಅದರಲ್ಲಿ ಕೀರ್ತನೆಗಾರನು "ಸಾವಿರ ವರುಷಗಳು ನಿನ್ನ ದೃಷ್ಟಿಯಲ್ಲಿ ಗತಿಸಿಹೋದ ನಿನ್ನಿನ ದಿನದಂತೆಯೂ ರಾತ್ರಿಯ ಜಾವದಂತೆಯೂ ಅವೆ" (ಕೀರ್ತನೆ 90:4) ಇದು ಮೋಶೆಯಿಂದ ಬರೆಯಲ್ಪಟ್ಟದ್ದಾಗಿದೆ. ಈ ವಿಷಯವನ್ನು ಆಧರಿಸಿ ಪೇತ್ರನು: **ಕರ್ತನ ಎಣಿಕೆಯಲ್ಲಿ ಒಂದು ದಿನವು ಸಾವಿರ ವರ್ಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬುದನ್ನು ಮಾತ್ರ ಮರೆಯಬೇಡಿರಿ.**

ಇಸ್ರಾಯೇಲ್ಯರ ಶ್ರೇಷ್ಟನಾದ ದೇವರು ಜನಾಂಗಗಳಿಗಿಂತ ಶ್ರೇಷ್ಟನಾಗಿದ್ದಾನೆ. ಆತನು ಅಬ್ರಹಾಮ, ಯಾಕೋಬ, ಮೋಶೆ, ಸಮುವೇಲ, ದಾವೀದ, ಯೆಶಾಯ ಮತ್ತು ನಜರೇತಿನ ಯೇಸುವಿನ ದೇವರಾಗಿದ್ದಾನೆ. ಒಂದು ಕ್ರೈಸ್ತ ಸಂಗಿತವು ಪರಲೋಕವೆಂಬ ಸ್ಥಳದಲ್ಲಿ "ಸಮಯವನ್ನು ವರ್ಷಗಳಲ್ಲಿ ಅಳೆಯುವದಿಲ್ಲ" ಎಂದು ಹಾಡುತ್ತಾನೆ.[5] ಪೇತ್ರನು ಕರ್ತನು ತನ್ನ ಬರೋಣಕ್ಕೆ ಬಹಳ ತಡಮಾಡಿದ್ದಾನೆಂದು ತೋರಬಹುದು, ಆದರೆ ದೇವರು ಸಮಯವನ್ನು ನಶ್ವರರು ಎಣಿಸುವಂತೆ ಎಣಿಸುವದಿಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆತನಿಗೆ ಸಾವಿರ ವರ್ಷಗಳು, ಕೋಟಿವರ್ಷಗಳು, ಒಂದು ದಿನ ಅಥವಾ ಒಂದು ತಾಸಿಗಿಂತ ಹೆಚ್ಚೇನಲ್ಲ. ಮನುಷ್ಯರು ಮಿತಿಗೆ ಒಳಪಟ್ಟಿರುವ ಸರಿದುಹೋಗುತ್ತಿರುವ ಸಮಯವನ್ನು ದೇವರ ಸೃಷ್ಟಿಯ ಮೇಲೆ ಒತ್ತಡದಂತೆ ಹೇರಲಾಗುವದಿಲ್ಲ.

ಪೇತ್ರನು ಕರ್ತನಿಗೆ ಒಂದು ದಿನವು ಸಾವಿರ ವರ್ಷಗಳಂತೆ ಎಂಬುದನ್ನು ಅನೂಕೂಲಕರವಾದ ಉಲ್ಲೇಖದ ಅಂಶವಾಗಿದೆ ಎಂದು ಹೋಲಿಸುತ್ತಾನೆ. ಕೋಟಿ ವರ್ಷಗಳು ಅಥವಾ ಹತ್ತುಕೋಟಿ ವರ್ಷಗಳು ದೇವರಿಗೆ ಒಂದು ದಿನಕ್ಕೆ ಸಮನಾಗಿವೆ ಎಂದು ಹೇಳುತ್ತಾನೆ. ಹಾಗೂ, ಆದಿ ಕ್ರೈಸ್ತ ಶತಮಾನಗಳಲ್ಲಿ ಈ ದೃಷ್ಟಿಕೋನವು ಯೆರೂಸಲೇಮ ಪಟ್ಟಣದಿಂದ ಕ್ರೈಸ್ತರು ಕ್ರಿಸ್ತನೊಟ್ಟಿಗೆ ಸಾವಿರ ವರ್ಷಗಳ ಕಾಲ ಆಳ್ವಿಕೆಯನ್ನು ಮಾಡುವರು ಎಂಬ ವಿಚಾರವನ್ನು ಬಲಪಡಿಸಲಾಗಿದೆ. ಎರಡನೆಯ ಶತಮಾನದ ಕೊನೆಯಲ್ಲಿ

ಉದಾಹರಣೆಗೆ Irenaeus ಲೋಕವು ಏಳು ಸಾವಿರ ವರ್ಷಗಳ ವರೆಗೆ ಉಳಿಯುತ್ತದೆ, ಸೃಷ್ಟಿಯ ಪ್ರತಿಯೊಂದು ದಿನಕ್ಕೆ ಏಳು ಸಾವಿರ ವರ್ಷಗಳು, ಎಂಬ ವಾಗ್ದಾನವನ್ನು ಈ ವಾಕ್ಯಭಾಗದಲ್ಲಿ ಕಂಡುಕೊಳ್ಳುತ್ತಾರೆ.[6] ಕೊನೆಯ ಸಾವಿರ ವರ್ಷಗಳು ಕರ್ತನು ಭೂಲೋಕದಲ್ಲಿ ಪವಿತ್ರ ಜೀವಿಗಳೊಂದಿಗೆ ಆಳ್ವಿಕೆಯನ್ನು ಮಾಡುತ್ತಾನೆ. Chiliasm ಎಂದು ಕರೆಯಲ್ಪಡುವ ಸಿದ್ಧಾಂತ, ಶತಮಾನಗಳುದ್ದಕ್ಕೂ ಹಸ್ತಾಂತರಿಸಲ್ಪಟ್ಟಿತು. Bishop Ussher ರವರ ಮೇಲೆ ಪ್ರಭಾವ ಬೀರಿತು ಅವರ ಸೃಷ್ಟಿಯ ದಿನಾಂಕ ಕ್ರಿ.ಪೂ. 4004 ಅದು ಇತ್ತೀಚಿನವರೆಗೂ ಸತ್ಯವೇದದ ಅಂಚಿನಲ್ಲಿ ಮುದ್ರಿತವಾಗಿದೆ. ಇದು ಸಾವಿರ ವರ್ಷಗಳ ಆಳ್ವಿಕೆ ಮತ್ತು ದೈವೇಚ್ಛೆಯ ಮೇಲೆ ಪ್ರಭಾವವನ್ನು ಬೀರುತ್ತದೆ. ಪೇತ್ರನು ತನ್ನನ್ನು ತಾನು ನಂತರದ ವಿಶ್ವಾಸಿಗಳ ವೀಕ್ಷಣೆಗೆ ಬಿಟ್ಟುಕೊಡಲಿಲ್ಲ. ಆತನು ಕರ್ತನು ತನ್ನದೇ ಆದ ಸಮಯದಲ್ಲಿ ತಿರುಗಿ ಬರಲಿಕ್ಕಿದ್ದಾನೆ ಎಂದು ಹೇಳುವದರಲ್ಲಿ ಸಂತೃಪ್ತನಾಗಿದ್ದಾನೆ. ಆಗ ಆತನು ನ್ಯಾಯತೀರಿಸುತ್ತಾನೆ ಮತ್ತು ನ್ಯಾಯತೀರ್ಪು ಮತ್ತು ನಿತ್ಯತ್ವ ಹಿಂಬಾಲಿಸುತ್ತದೆ.

**ವಚನ 9.** ಸುಳ್ಳು ಬೋಧಕರು ಕರ್ತನ ಬರೋಣವು ತಡವಾದದ್ದನ್ನು ಆತನು ಬರುವದಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಉಪಯೋಗಿಸಿಕೊಂಡರು. ಅಪೊಸ್ತಲರು ತಡವಾದದ್ದನ್ನು ವಿವರಿಸಲು ಇನ್ನೊಂದು ಮೂಲಕಾರಣವನ್ನು ನೀಡಿದರು: ದೇವರು ನಿಮ್ಮೆಡೆಗೆ ತಾಳ್ಮೆಯಿಂದ ಇದ್ದಾನೆ. ರಕ್ಷಿಸುವ ಕಾರ್ಯದ ಅವಧಿಯಿಂದ ತಕ್ಷಣ ಹೊಸ ಒಡಂಬಡಿಕೆಯವರೆಗೆ ಮುಂದುವರೆದಿರುವದು ಕರ್ತನ ನ್ಯಾಯತೀರ್ಪು ತಡವಾಗಿರುವದು ಯೆಹೂದ್ಯರ ಮೇಲಿರುವ ಕಳಕಳಿಯಾಗಿದೆ. ಪ್ರಾಮಾಣಿಕರಾದವರು ತಮ್ಮನ್ನು ಸಮರ್ಥಿಸುವದನ್ನು ನಿರೀಕ್ಷಿಸಿದ್ದರು, ಯಾಕೆ ತಡ? ಪೇತ್ರನು ಧೈರ್ಯವಾಗಿ ಹೇಳುತ್ತಾನೆ, **ಕೆಲವರು ತಡಮಾಡಿರುವದನ್ನು ಎಣಿಸುವಂತೆ, ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುವವನಲ್ಲ.** ದೇವರು ತನ್ನ ಉದ್ದೇಶಕ್ಕಾಗಿ ಕಾರ್ಯ ಮಾಡುತ್ತಿದ್ದಾನೆ. ಆತನು, "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನವನ್ನು ಪಡೆದುಕೊಳ್ಳಬೇಕೆಂದು ಬಯಸುತ್ತಾನೆ" (1 ತಿಮೋಥೆ 2:4). ಆ ಕಾರಣದಿಂದಾಗಿ ಆತನು ನ್ಯಾಯತೀರ್ಪನ್ನು ತಡಮಾಡುತ್ತಿದ್ದೇನೆ. ದೇವರು ತಿಳಿಯದೇ ಇರುವವರಿಗೆ ಮತ್ತು ಕ್ರಾಂತಿಕಾರಿಗಳಿಗೆ ಯೇಸುವಿನ ಸಾಕ್ಷಿಯನ್ನು ಆಲಿಸಲು, ಪಶ್ಚಾತ್ತಾಪ ಪಡಲು ಅವಕಾಶವನ್ನು ಅನುಮತಿಸುತ್ತದೆ ಮತ್ತು ತಿರುಗಿಕೊಳ್ಳುವ ಸಮಯವನ್ನು ನೀಡುತ್ತದೆ.

ತನ್ನ ಮರಣದ ಪೂರ್ವದಲ್ಲಿ, ಯೇಸು ತಾನು ತಿರುಗಿ ಬರುವದರ ಕುರಿತಾಗಿ ತಾನೇ ಹೇಳಿದ್ದಾನೆ, ಆತನು ತಿರುಗಿಬರುವ ನಿರ್ದಿಷ್ಟವಾದ ದಿನ ಮತ್ತು ಸಮಯವನ್ನು ಊಹಿಸಿಕೊಳ್ಳುವದಿಲ್ಲ ಎಂದು ಎಚ್ಚರಿಕೆಯನ್ನು ನೀಡಿದ್ದಾನೆ. ಈ ಅಂಶಕ್ಕೆ ಒತ್ತು ನೀಡುವದಕ್ಕಾಗಿ ಯೇಸು ಹೇಳಿದ್ದು, "ಇದಲ್ಲದೆ ಆ ದಿನದ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು" (ಮತ್ತಾಯ 24:36). ಕೊನೆ ಸಮಯದ ವಿಧಾನದ ನಿರೀಕ್ಷೆಯ ಕುರಿತು ಯೇಸು ತನ್ನ ಶಿಷ್ಯರಿಗೆ ಎಚ್ಚರಿಕೆಯಿಂದ ಬೋಧಿಸಿದ್ದಾನೆ. ಕೊನೆಯ ಸಮಯದಲ್ಲಿ ಮತ್ತಾಯ 24ನೇ ಅಧ್ಯಾಯದಿಂದ 25ನೇ ಅಧ್ಯಾಯದುದ್ದಕ್ಕೂ ಯೇಸು ಅಸಂಖ್ಯಾತ ಸಾಮ್ಯಗಳನ್ನು ಆತನ ಬರೋಣವನ್ನು ಅದರೊಂದಿಗೆ ಬರುವ ನ್ಯಾಯತೀರ್ಪನ್ನು ವಿವರಿಸಿದ್ದಾನೆ. ಆತನ ಬರೋಣವು ತಕ್ಷಣದಲ್ಲಿ ಸಂಭವಿಸುವದಾಗಿದೆ. ಜನರು ತಮ್ಮ ಸಾಮಾನ್ಯ ಕಾರ್ಯಗಳಲ್ಲಿ ತೊಡಗಿರುತ್ತಾರೆ; ಮದುವೆ ಮಾಡಿಕೊಳ್ಳುವದರಲ್ಲಿಯೂ, ಮದುವೆ ಮಾಡಿಕೊಳ್ಳುವದರಲ್ಲಿಯೂ ಹೊಲದಲ್ಲಿ ಕೆಲಸ ಮಾಡುವದರಲ್ಲಿಯೂ, ಬೀಸುವಕಲ್ಲಿನ ಮುಂದೆ ಬೀಸುವದಲ್ಲಿಯೂ ತೊಡಗಿರುತ್ತಾರೆ (ಮತ್ತಾಯ 24:37-41).

ಯೇಸುವಿನ ಎರಡನೆಯ ಬರೋಣವು ಮತ್ತು ಮಾನವ ಕುಲಕ್ಕೆ ನ್ಯಾಯತೀರ್ಪು ತಡ

ವಾಗುತ್ತದೆಂದು ಅವರು ನಿರೀಕ್ಷಿಸುತ್ತಿರುವಾಗ ಆಶ್ಚರ್ಯಕರವಾಗಿ ಸಂಭವಿಸುತ್ತದೆ. ಅವರು ಯಜಮಾನ ಆಸ್ತಿಯ ಮೇಲ್ವಿಚಾರಣೆ ಮಾಡಲು ನೇಮಿಸಿದ ಆಳುಗಳಂತೆ ಇರುತ್ತಾರೆ. ಮೇಲ್ವಿಚಾರಕನು ತನ್ನ ಯಜಮಾನನು ತಡಮಾಡುತ್ತಾನೆ ಎಂದು ನೆನೆಸಿರುತ್ತಾನೆ; ಅವನು ತನ್ನ ಜೊತೆ ಸೇವಕರನ್ನು ದೂಷಿಸಿ ಯಜಮಾನ ಆಸ್ತಿಯನ್ನು ದೋಚಿಕೊಳ್ಳುತ್ತಾನೆ. ತಕ್ಷಣ ನಿರೀಕ್ಷಿಸದೇ ಇರುವ ಗಳಿಗೆಯಲ್ಲಿ ಯಜಮಾನನು ಪ್ರತ್ಯಕ್ಷನಾಗುತ್ತಾನೆ. ಮೇಲ್ವಿಚಾರಕನಿಗೆ "ಕಪಟಗಳಿಗೆ ಆಗ ತಕ್ಕ ಗತಿಯನ್ನು ನೀಡುತ್ತಾನೆ" (ಮತ್ತಾಯ 24:51).

ಇತರರ ನಿರೀಕ್ಷೆ ವಿಭಿನ್ನವಾಗಿರುತ್ತದೆ. ಆತನು ತಡಮಾಡಿದ್ದನ್ನು ಎಣಿಸುವದಕ್ಕೆ ಬದಲಾಗಿ, ಅವರು ಆತನ ಬರೋಣದ ಸಮಯವನ್ನು ಎಣಿಸುತ್ತಾರೆ. ಆತನು ಅವರ ವೇಳಾಪಟ್ಟಿಯನ್ನು ಅನುಸರಿಸುವದಿಲ್ಲ, ಅವರ ನಂಬಿಕೆ ಬಲಹೀನವಾಗುತ್ತದೆ. ಅವರು ಲೌಕಿಕತೆಯೆಡೆಗೆ ತಿರುಗಿಕೊಳ್ಳುತ್ತಾರೆ. ತನ್ನ ಎಚ್ಚರಿಕೆಯನ್ನು ಸ್ಪಷ್ಟಪಡಿಸುವದಕ್ಕಾಗಿ, ಯೇಸು ಮದಲಿಂಗನ ಬರೋಣಕ್ಕಾಗಿ ಕಾಯುತ್ತಿದ್ದ ಹತ್ತು ಜನ ಕನ್ನಿಕೆಯರ ಸಾಮ್ಯವನ್ನು ಹೇಳುತ್ತಾನೆ. ಅವರು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿ ಆತನು ತಡಮಾಡಿದನು, ಆದರೆ ಅವರ ನಂಬಿಕೆ ಅಷ್ಟಾಗಿರಲಿಲ್ಲ (ಮತ್ತಾಯ 25:1-13). ಕೆಲವರಿಗೆ ಕರ್ತನು ಅವರು ನಿರೀಕ್ಷಿಸಿರುವದಕ್ಕಿಂತ ಬೇಗನೇ ಬರುವಾತನಾಗಿದ್ದಾನೆ, ಕೆಲವರಿಗೆ ಅವರು ನಿರೀಕ್ಷಿಸಿರುವದಕ್ಕಿಂತ ತಡವಾಗಿ ಬರುತ್ತಾನೆ. ಯೇಸು ತನ್ನ ಹಿಂಬಾಲಕರು ಆತನು ಯಾವಾಗ ಬಂದರು ಸಿದ್ಧರಾಗಿರಬೇಕೆಂದು ಬಯಸುತ್ತಾನೆ. ಆತನು ಅವರಿಗೆ ಯಾವುದೇ ಊಹಾಪೋಹವನ್ನು ಕೈಬಿಡಬೇಕೆಂದು ಪ್ರೋತ್ಸಾಹಿಸುತ್ತಾನೆ.

ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಕರ್ತನು ತಿರುಗಿ ಬರುವ ಸಮಯದ ಕುರಿತು ಊಹಿಸಿದ್ದಾರೆ ಎಂದು ಬರೆಯಲ್ಪಟ್ಟಿಲ್ಲ. ಘಟನೆಯು ಹತ್ತಿರದಲ್ಲೇ ಇದೆ ಎಂಬ ನಿರೀಕ್ಷೆಯಲ್ಲಿ ಜೀವಿಸುತ್ತಿದ್ದಾರೆ. ವಿಶ್ವಾಸಿಗಳು ಅದೇ ರೀತಿಯಲ್ಲಿ ಆತನ ಬರೋಣಕ್ಕಾಗಿ ಸಿದ್ಧರಾಗಿರಬೇಕು ಆತನ ಬರೋಣವು ಬೇಹನೇ ಇರಲಿ ಅಥವಾ ತಡವಾಗಿರಲಿ. ಆದಾಗ್ಯೂ, ಕಲ್ಪನೆಗಳು ಎದೆಗುಂದದೆ ಸಾಗಿವೆ. ಪ್ರಾಚೀಮ ಮತ್ತು ಆಧುನಿಕ ಪಂಗಡಗಳು ದಾನಿಯೇಲನ, ಯೆಹೆಜ್ಕೇಲನ ಅಥವಾ ಪ್ರಕಟನೆಯ ದರ್ಶನಕ್ಕೆ ಕೀಲಿ ಹಾಕುವದರಲ್ಲಿ ಸೋತು ಹೋಗಿಲ್ಲ. ವ್ಯವಸ್ಥೆಗಳು ವಿಕಾಸಹೊಂದುತ್ತಿವೆ, ವೇಳಪಟ್ಟಿಯನ್ನು ಎಣಿಕೆಮಾಡಲಾಗುತ್ತಿದೆ ಮತ್ತು ಒಂದು ನಿರ್ದಿಷ್ಟವಾ ದ ದಿನದಿಲ್ಲಿ ಕರ್ತನು ತಿರುಗಿ ಬರಲಿಕ್ಕಿದ್ದಾನೆ ಎಂಬುದನ್ನು ಲೋಕಕ್ಕೆ ತಿಳಿಸಲಾಗಿದೆ. ಜನರು ಬಿಳಿಯ ಬಟ್ಟೆಯನ್ನು ಧರಿಸಿ ಮಾಳಿಗೆಯ ಮೇಲೆ ನೆರೆದು ಬಂದಿದ್ದಾರೆ, ಕಣ್ಣುಗಳು ಆಕಾಶದೆಡೆಗೆ ನೆಟ್ಟಿವೆ. ದಿವಸಗಳು ಬರುತ್ತವೆ ಮತ್ತು ಹೋಗುತ್ತವೆ, ಕರ್ತನು ತನ್ನ ಸ್ವಂತ ಉದ್ದೇಶವನ್ನು ಅನುಸರಿಸುತ್ತಿದ್ದಾನೆ.

ಪೇತ್ರನು ಕರ್ತನು ತಿರುಗಿ ಬರುತ್ತಾನೆ ಎಂದು ಹೇಳುತ್ತಾನೆ. ಕ್ರೈಸ್ತರು ಆ ನಿರೀಕ್ಷೆಯಲ್ಲಿಯೇ ಜೀವಿಸಬೇಕು, ವ್ಯತ್ಯಾಸವನ್ನು ದೇವರು ಮಾತ್ರ ತಿಳಿದಿದ್ದಾನೆ. ಆತನು ತನ್ನ ಸೃಷ್ಟಿಯೆಡೆಗೆ ಉತ್ತಮವಾದ ಇಚ್ಛೆಯಿಂದ ನಡೆಸಲ್ಪಟ್ಟವನಾಗಿದ್ದಾನೆ. **ಯಾವನಾದರೂ ನಾಶವಾ ಗುವದರಲ್ಲಿ ಆತನು ಇಷ್ಟಪಡದೆ ಎಲ್ಲರು ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಬಯಸುತ್ತಾನೆ.** ಹಾಗು, ಆತನ ಪರಿಶುದ್ಧತೆಯನ್ನು ಸಮರ್ಥಿಸುತ್ತಾನೆ ಎಂಬುದನ್ನು ಉದಾಸೀನ ಮಾಡಬಾರದು. ಅವನ ತಾಳ್ಮೆಯು ಮುಗಿಯುವಾಗ, ಮನುಷ್ಯನ ಪಾಪಗಳು ಪೂರ್ಣವಾಗುವಾಗ, ಕರ್ತನು ನ್ಯಾಯ ತೀರಿಸುತ್ತಾನೆ. "ಯಾಕಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡೆಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10).

**ವಚನ 10.** ಆದರೆ ಎಂಬ ವಿರುದ್ಧಾರ್ಥದ ಸಮುಚ್ಚಯ ಅದರೊಟ್ಟಿಗೆ ಒತ್ತು ನೀಡುವ ಗ್ರೀಕ್ ಅನುವಾದದ ಕ್ರಿಯಾಪದ "ಬರಲಿಕ್ಕಿದ್ದಾನೆ" ತಪ್ಪಿಸಲಾರದ ಎಚ್ಚರಿಕೆಯನ್ನು ಸಂದೇಹ ಪಡುವವರಿಗೆ ನೀಡುತ್ತದೆ. ಪೇತ್ರನ ಸಂದೇಶ ಸರಳವಾಗಿದೆ; ಯಾವ ತಪ್ಪನ್ನು ಮಾಡುವದಿಲ್ಲ,

**ಕರ್ತನ ದಿನವು ಬರಲಿಕ್ಕಿದೆ.** ಆತನು ಸಾವಿರ ವರ್ಷ ತಡಮಾಡಬಹುದು ಅಥವಾ ದಿನವು ಮುಗಿಯುವದರೊಳಗೆ ಬರಬಹುದು, ನ್ಯಾಯತೀರ್ಪು ಖಂಡಿತ. "ಕರ್ತನ ದಿನ" ಹಳೆ ಒಡಂಬಡಿಕೆಯ ಆಳವಾದ ಬೇರುಗಳನ್ನು ಹೊಂದಿದ ಕಲ್ಪನೆಯಾಗಿದೆ. ಪ್ರವಾದಿಗಳಿಗೆ, ದೇವರ ಭಯಂಕರವಾಗಿ ಕಾರ್ಯಪ್ರವೃತ್ತನಾಗುವ ದಿನವಾಗಿದೆ, ಇಸ್ರಾಯೇಲರನ್ನು ಬಿಡುಗಡೆ ಮಾಡಲು ಇಲ್ಲದೇ ಜನಾಂಗಗಳಿಗೆ ಶಿಕ್ಷೆಯನ್ನು ನೀಡಲು.

ದೇವರು ಆಯ್ದುಕೊಂಡ ಜನರಿಗೆ ತೊಂದರೆಯನ್ನುಂಟು ಮಾಡುವ ಜನರಿಗೆ ಅಥವಾ ಆತನಿಗೆ ಬಹಳವಾಗಿ ಅವಿಧೇಯರಾಗುವ ಜನರಿಗೆ "ಕರ್ತನ ದಿನವು" ಭಯ, ಅಂಧಕಾರ ಮತ್ತು ಕತ್ತಲೆಯ ದಿನವಾಗಿದೆ. ದೇವರ ಹಿಡಿದಿಟ್ಟ ಕೋಪವು ಹೊರಬರುತ್ತದೆ. "ಅರಚಿಕೊಳ್ಳಿರಿ, ಯೆಹೋವನ ದಿನವು ಸಮೀಪವಾಯಿತು; ಅದು ಸರ್ವಶಕ್ತನಿಂದ ನಾಶರೂಪಾಗಿ ಬರುವದು" (ಯೆಶಾಯ 13:6; ಚೆಫನ್ಯ 1:14-16 ಸಹ ನೋಡಿರಿ). ಅಮೋಸನು "ಕರ್ತನ ದಿವಸದ" ಕುರಿತು ಜನಪ್ರಿಯ ಅಭಿಪ್ರಾಯವನ್ನು ಎದುರಿಸಿದನು ಅದು ದೇವರು ಇಸ್ರಾಯೇಲ್ಯರ ವೈರಿಗಳ ವಿರುದ್ಧವಾಗಿ ತನ್ನ ಕೋಪವನ್ನು ಪ್ರಕಟಿಸಿದ ದಿನವಾಗಿರಬಹುದು. ಅದು ವಿಮೋಚನೆಯ ದಿನವಾಗಿರಬಹುದು. ಇದರ ಪರಿಣಾಮವಾಗಿ ಪ್ರವಾದಿಯು ಹೇಳುತ್ತಾನೆ, "ದೇವರು ನಿಮ್ಮ ಮೇಲೆ ಕೋಪವುಳ್ಳವನಾಗಿದ್ದಾನೆ, ನಿಮಗೇಕೆ? ಅದು ಬೆಳಕಲ್ಲ ಕತ್ತಲೆಯೇ" (ಆಮೋಸ 5:18).

ಹೊಸ ಒಡಂಬಡಿಕೆಯಲ್ಲಿ, ಹಳೆ ಒಡಂಬಡಿಕೆಗಿಂತ ಹೆಚ್ಚು ಸಕಾರಾತ್ಮಕವಾದ ವಿಚಾರಗಳು "ಕರ್ತನ ದಿವಸವು" ಎಂಬುದರೊಂದಿಗೆ ಜೊತೆಗೂಡುತ್ತವೆ. ಖಚಿತವಾಗಿ ಹೇಳಬೇಕಾದರೆ ಅದು ಇನ್ನೂ ಕೋಪ ಮತ್ತು ನ್ಯಾಯತೀರ್ಪಿನ ದಿನವಾಗಿದೆ; ಆದರೆ ಇದು ದೇವಜನರು ಎತ್ತಿಹಿಡಿಯಲ್ಪಡುವ ದಿನವು ಕೂಡಾ ಆಗಿದೆ. ಅವರಿಗೆ ಕರ್ತನ ಸನ್ನಿಧಿಯಲ್ಲಿ ಶಾಂತಿ ಮತ್ತು ವಿಶ್ರಾಂತಿ ದೊರೆಯುತ್ತದೆ, ಎಲ್ಲದಕ್ಕಿಂತಲೂ ಹೆಚ್ಚಾಗಿ "ಕರ್ತನ ದಿನವು; ಯೇಸು ಕ್ರಿಸ್ತನು ನ್ಯಾಯಾಧಿಪತಿಯಾಗಿ ಬರುವಾಗ ಆಕಾಶದಲ್ಲಿ ಕಾಣಲ್ಪಡುತ್ತಾನೆ.

ಒಂದಕ್ಕೊಂದು ಹೆಣೆದುಕೊಂಡಿರುವ ಯೆರೂಸಲೇಮಿನಲ್ಲಿ ನಡೆಯುವ ನ್ಯಾಯತೀರ್ಪನ್ನು ಮತ್ತು ಲೂಕ 17:22-37ರಲ್ಲಿ ನಡೆಯುವ ಕೊನೆಯ ನ್ಯಾಯತೀರ್ಪು ಗಲಿಬಿಲಿಯನ್ನುಂಟು ಮಾಡುತ್ತವೆ, ಆದರೆ "ಆ ದಿವಸ" ಎಂಬ ಕಲ್ಪನೆ ವಾಕ್ಯಭಾಗದುದ್ದಕ್ಕೂ ಹರಿದುಬರುತ್ತದೆ: "ಹಾಗೆಯೇ ಮನುಷ್ಯಕುಮಾರನು ತನ್ನ ದಿವಸದಲ್ಲಿರುವನು" (17:24). "ಮನುಷ್ಯಕುಮಾರನ ದಿವಸಗಳು" (17:26) "ಆ ದಿನದಲ್ಲಿ" (17:31). ಪೌಲನು "ಕರ್ತನು ತಾನೇ ಆಜ್ಞಾಘೋಷ ದೊಡನೆ ಆಕಾಶದಿಂದ ಇಳಿದುಬರುವನು" (1 ಥೆಸಲೋನಿಕ 4:16). ಪೇತ್ರನ ದೃಷ್ಟಿಕೋನದಲ್ಲಿ "ಕರ್ತನ ದಿನವು" ಭೂಲೋಕದ ಸಮಯವನ್ನು ಕೊನೆಗೊಳಿಸುವ ದಿನವಾಗಿದೆ. ಆ ದಿನದಲ್ಲಿ ಯೇಸು ಮಾನವಕುಲದ ಜನಾಂಗಗಳಿಗೆ ನ್ಯಾಯತೀರಿಸುತ್ತಾನೆ. ಕನಿಷ್ಟ ಭೂಲೋಕವು ತನ್ನ ಪ್ರಸ್ತುತ ಸ್ಥಿತಿಯಲ್ಲಿ ಸೆರೆಹಿಡಿಯಲ್ಪಡುತ್ತದೆ. **ಆ ದಿನದಲ್ಲಿ ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು. ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು.**

ಯೇಸು ಕರ್ತನು ಮತ್ತು ನ್ಯಾಯಾಧಿಪತಿಯಾಗಿ ಕಾಣಿಸಿಕೊಳ್ಳುವದು ತಕ್ಷಣದಲ್ಲೇ ನಡೆಯುತ್ತದೆ. ಯಾವುದೇ ರೀತಿಯಲ್ಲಿ ನಿರ್ಧಿಷ್ಟವಾದ ದಿವಸ ಮತ್ತು ಗಳಿಗೆಯ ಕುರಿತು ಮುಂದಾಗಿ ಎಚ್ಚರಿಕೆ ಇರುವದಿಲ್ಲ. ಯೇಸು ತನ್ನ ಶಿಷ್ಯರಿಗೆ ತಾನು ತಿರುಗಿ ಬರುವಾಗ ಕಳ್ಳನಂತೆ ಬರುತ್ತೇನೆ ಎಂದು ಹೇಳಿದ್ದಾನೆ (ಮತ್ತಾಯ 24:43). ಪೌಲನು ಸಹ 1 ಥೆಸಲೋನಿಕ 5:2ರಲ್ಲಿ ಕಳ್ಳನ ಕಲ್ಪನೆಯನ್ನು ನೀಡುತ್ತಾನೆ. ಪ್ರಕಟನೆಯಲ್ಲಿ "ಕಳ್ಳ" ಎಂಬ ರೂಪಕಾಲಂಕಾರ ಮುಂದುವರೆಯುತ್ತದೆ (ಪ್ರಕಟನೆ 3:3; 16:15). ಪೇತ್ರನ ಪ್ರಕಾರವು ಸಹ ಕರ್ತನು ಕಳ್ಳನಂತೆ ಬರುತ್ತಾನೆ. ಕಳ್ಳನು ಮನೆಯೊಳಗೆ ನುಗ್ಗುವದಕ್ಕೆ ತನ್ನ ಯೋಜನೆಯ ಕುರಿತಾಗಿ ಮುಂಚಿತವಾಗಿ ತಿಳಿಸದೆ ಇರುವಂತೆ. ಯೇಸು ಸಹ ಯಾವುದೇ

ಮುನ್‌ಸೂಚನೆಯನ್ನು ನೀಡುವದಿಲ್ಲ. ಕಳ್ಳನಿಂದ ಸುರಕ್ಷಿತತೆಯನ್ನು ಹೊಂದಬೇಕಾದರೆ ಎಲ್ಲಾ ಸಮಯದಲ್ಲಿ ಸಿದ್ಧರಾಗಿರಬೇಕು. ಕರ್ತನು ತಿರುಗಿ ಬರುವದಕ್ಕೆ ಯಾವ ಸಮಯವನ್ನು ಆಯ್ದುಕೊಂಡರು ಕ್ರೈಸ್ತರು ಕರ್ತನ ಸ್ವೀಕರಿಸಲು ಸಿದ್ಧರಾಗಿರಬೇಕು. ಹೊಸ ಒಡಂಬಡಿಕೆಯ ಉದ್ದಕ್ಕೂ ಕರ್ತನು ಯಾವಾಗ ಬರುತ್ತಾನೆ ಅಥವಾ ಆತನು ತಿರುಗಿ ಬರುವ ಸ್ವರೂಪ ಎಂಥದ್ದಾಗಿರುತ್ತದೆ ಎಂಬುದರ ಕುರಿತು ಹೆಚ್ಚಾದ ಊಹೆಯಿಲ್ಲ. ಹೊಸ ಒಡಂಬಡಿಕೆಯಲ್ಲಿ ದೈವೀಶಿಕ್ಷಗಳ ಶಾಸ್ತ್ರ ನೈತಿಕತೆಯನ್ನು ಪ್ರತಿಪಾದಿಸುತ್ತದೆ. ಆತನು ಬರುತ್ತಾನೆ ಎಂಬುದನ್ನು ತಿಳಿದಿರುವದರಿಂದ ಒಬ್ಬನು ಭಕ್ತಿಯ ಜೀವಿತವನ್ನು ನಡೆಸಲು ಎಚ್ಚರಿಕೆಯನ್ನು ಮತ್ತು ಪ್ರೇರೇಪಣೆಯನ್ನು ನೀಡಲಾಗಿದೆ.

ವಚನ 10ರ ಕೊನೆಯ ಭಾಗವು ಹೊಸ ಒಡಂಬಡಿಕೆಯಲ್ಲಿ ಒಂದು ಅತ್ಯಂತ ಕಠಿಣವಾದ ವ್ಯತ್ಯಾಸವನ್ನು ತಿಳಿಸುತ್ತದೆ. ಕೆಲವು ಪ್ರಾಚೀನ ಪ್ರತಿಗಳಲ್ಲಿ **ಲೋಕವು ಅದರ ಕಾರ್ಯಗಳು ಸುಟ್ಟು ಹೋಗುವವು** *(katakaēsetai)*. ಅದರ ಕಾರ್ಯಗಳು ಸುಟ್ಟು ಹೋಗುವವು ಎಂದು ಬರೆಯಲ್ಪಟ್ಟಿದೆ ಇತರ ಪ್ರತಿಗಳಲ್ಲಿ ವಾಸ್ತವವಾಗಿ ಅನುವಾದಿಸುವಾಗ, "ಲೋಕವು ಅದರ ಕಾರ್ಯಗಳು ಕಂಡುಬರುತ್ತವೆ" *(heurethēsetai)*. ಎಂಬುದಾಗಿದೆ. ಪಠ್ಯದ ಸಾಕ್ಷಿಯು ಸಮಾನವಾಗಿ ವಿಭಾಗಿಸಲಾಗಿದೆ. NASB ಮತ್ತು KJV ಅನುವಾದದಲ್ಲಿ, "ಸುಟ್ಟು ಹಾಕಲ್ಪಡುತ್ತವೆ" ಹೊಸ ಅನುವಾದವು "ಸಂಶೋಧಿಸಲ್ಪಡುತ್ತವೆ" (ಅದರ ಅರ್ಥ, "ಕಂಡುಕೊಳ್ಳುವದು") ಈ ಬೋಧನೆಯನ್ನು ಬೆಂಬಲಿಸುವಂತೆ, ಭವಿಷ್ಯತ್ತಿನಲ್ಲಿ ರಕ್ಷಿಸಲ್ಪಟ್ಟ ಅನೇಕರು ನೂತನ ಭಮುಯಲ್ಲಿ ವಾಸಿಸುವರು ಎಂದು ಹೇಳುತ್ತದೆ.

ನಾವು "ಸುಟ್ಟು ಹಾಕಲ್ಪಡುತ್ತದೆ" ಅಥವಾ "ಕಂಡುಬರುತ್ತವೆ" ಎಂದು ಓದಿದರೂ ಪೇತ್ರನು ಉಪಯೋಗಿಸಿದ ಈ ಪದವನ್ನು ಅರ್ಥೈಸಿಕೊಳ್ಳಲು ಸನ್ನಿವೇಶಕ್ಕೆ ಹಿಂತಿರುಗ ಬೇಕು. ಇನ್ನೊಂದು ಸನ್ನಿವೇಶದಲ್ಲಿ ತೀವ್ರವಾದ ಉಷ್ಣತೆಯ ಅಂಶಗಳಿಂದಾಗಿ ಆಕಾಶವು ಅಳಿದು ಹೋಗಬಹುದು. "ಕಂಡುಬರುತ್ತವೆ" ಎಂಬ ಪದದ ಅರ್ಥವನ್ನು ಸನ್ನಿವೇಶವು ನಿರ್ಧರಿಸುತ್ತದೆ. ಸನ್ನಿವೇಶವನ್ನು ಪರಿಗಣಿಸುವ ರೀತಿಯು ಹೀಗೆ NIV ಅನುವಾ ದಿಸುತ್ತದೆ. "ಲೋಕವು ಅದರೊಳಗಿರುವ ಎಲ್ಲವೂ ಬಟ್ಟಬಯಲಾಗಿರುತ್ತದೆ" ಒಂದು ವೇಳೆ "ಕಂಡುಬರುತ್ತದೆ" ಎಂಬುದು ಸರಿಯಾದ ಅರ್ಥವಾದರೆ, ಪೇತ್ರನು ಉಪಯೋಗಿಸಿದ "ಕಂಡುಬರುತ್ತವೆ" "ಬಟ್ಟಬಯಲಾಗುತ್ತವೆ" ಅಥವಾ "ತೆರೆದಿಡಲ್ಪಡುತ್ತವೆ" ಎಂಬುವಸರಿಯಾದ ಅರ್ಥ ಎಂಬುದರಲ್ಲಿ ಸಂದೇಹವಿಲ್ಲ. ಅಪೊಸ್ತಲನ ಅರ್ಥವು ಸ್ಪಷ್ಟವಾಗಿದೆ. ಕರ್ತನು ತಿರುಗಿ ಬರುವಾಗ ಲೋಕವು ಅದರಲ್ಲಿರುವ ಎಲ್ಲಾ ಸಂಗತಿಗಳು ನಾಶವಾಗುತ್ತವೆ.

## ಕರ್ತನ ದಿನವನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶುದ್ಧರಾಗಿ ಜೀವಿಸುವದು (3:11-13)

**11-12ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ; ಆ ದಿನದಲ್ಲಿ ಆಕಾಶಮಂಡಲವು ಬೆಂಕಿ ಹತ್ತಿಲಯವಾಗಿ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಕರಗಿ ಹೋಗುವವು. 13ಆದರೆ ನಾವು ದೇವರ ವಾಗ್ದಾನವನ್ನು ನಂಬಿ ನೂತನಾಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಎದುರು ನೋಡುತ್ತಾ ಇದ್ದೇವೆ. ಅವುಗಳಲ್ಲಿ ನೀತಿಯು ವಾಸವಾಗಿರುವದು.**

ಪೇತ್ರನು ಕರ್ತನ ಬರೋಣದ ದಿನವನ್ನು ಪ್ರಯೋಜನವಿಲ್ಲದ ಕುತೂಹಲವನ್ನು ತೃಪ್ತಿಪಡಿಸಲು ವರ್ಣಿಸಿಲ್ಲ. ಯೇಸು ಯಾವಾಗ ಬರುತ್ತಾನೆ ಎಂಬುದನ್ನು ಊಹಿಸುವದು ಅರ್ಥವಿಲ್ಲ. ಸಮಯ ಮತ್ತು ಪರಿಸ್ಥಿತಿಗಳ ಪರಿಮಿತಿಯಲ್ಲಿ ಕ್ರೈಸ್ತರು ಕರ್ತನು ತಿರುಗಿ ಬರುವದರ ಕುರಿತು ಮತ್ತು ಅದರೊಟ್ಟಿಗೆ ಬರುವ ನ್ಯಾಯತೀರ್ಪಿನ ಕುರಿತು ದೇವರು

ತಿಳಿದುಕೊಂಡಿರುವದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಆತನ ಜನರಿಗೆ ಆತನು ತಿರುಗಿ ಬರುತ್ತಾನೆ ಎಂಬುದನ್ನು ತಿಳಿದುಕೊಂಡರೆ ಸಾಕು, ಹೇಗೆ ಮತ್ತು ಯಾವಾಗ ಬರುತ್ತಾನೆ ಎಂಬುದನಲ್ಲ. ದೇವರು ಲೋಕದ ಅಂತ್ಯವನ್ನು ಹೇಗೆ ತರುತ್ತಾನೆ ಎಂದು ಕಲ್ಪಿಸುವದನ್ನು ಬಿಟ್ಟು, ಪೇತ್ರನು ಅದರ ಪರಿಣಾಮಗಳ ಕುರಿತು ಕರೆನೀಡುವದರಲ್ಲಿ ತೃಪ್ತನಾಗಿದ್ದಾನೆ. ಈ ಲೋಕವು ದೇವರ ಮಹತ್ತರವಾದ ನ್ಯಾಯತೀರ್ಪಿನ ಅಡಿಯಲ್ಲಿದ್ದಲ್ಲಿ, ಒಂದು ವೇಳೆ ಯೇಸು ಮಾನವ ಕುಲಕ್ಕೆ ನ್ಯಾಯತೀರಿಸಲು ಮತ್ತು ಲೋಕವನ್ನು ನಾಶಮಾಡಲು ತಿರುಗಿ ಬರಲಿದ್ದಲ್ಲಿ ಕ್ರೈಸ್ತರು ಬರಲಿಕ್ಕಿರುವ ಘಟನೆಗಳನ್ನು ಪರಿಗಣಿಸಿ ಜೀವಿಸುವದು ಅವಶ್ಯ. ಕರ್ತನ ಬರೋಣವನ್ನು ದೃಷ್ಟಿಯಲ್ಲಿಟ್ಟು ಜೀವಿಸುವದಾದರೆ ಜೀವಿತವು ವಿಭಿನ್ನವಾಗಿರುತ್ತದೆ. ವಿಶ್ವಾಸಿಗಳು ಆತನ ಬರೋಣವನ್ನು ಕುತೂಹಲದಿಂದ ವೀಕ್ಷಿಸುವದಾದರೆ, ಅವರು ಪರಿಶುದ್ಧವಾದ ಮತ್ತು ಉತ್ತಮವಾದ ಜೀವಿತವನ್ನು ಜೀವಿಸುತ್ತಾರೆ. ಇದು ಮುಂದಿನ ವಚನಗಳಲ್ಲಿ ಪೇತ್ರನ ಅಂಶವಾಗಿದೆ.

**ವಚನ 11.** ಅಪೊಸ್ತಲನ **ನೀವು ಯಾವ ವಿಧದ ಜನರಾಗಿರಬೇಕು** ಎಂಬ ವಾಕ್ಚತುರ್ಯದ ಪ್ರಶ್ನೆ ಈ **ಎಲ್ಲಾ ಸಂಗತಿಗಳು ನಾಶವಾಗುತ್ತವೆ** ನಿರ್ಧಾರದ ಮೇಲೆ ಅಲಂಭಿಸಿ ಕೇಳಲಾಗಿದೆ. ಅವರು ಕ್ರೈಸ್ತರಾಗಿರಲಿ ಇಲ್ಲದೇ ಇರಲಿ ಪಂಥಾಹ್ವಾನವರು ಜನರಿಗೆ ಸಮಂಜಸವಾಗಿದೆ. ಈ ಲೋಕದ ತಳಕು ತಾತ್ಕಾಲಿಕವಾದದ್ದು ಎಂದು ಅರ್ಥಮಾಡಿಕೊಳ್ಳಲು ಜ್ಞಾನಿಗಳಾಗಿರಬೇಕಾದ ಅವಶ್ಯಕತೆ ಏನೂ ಇಲ್ಲ. ಒಬ್ಬನು ಗಳಿಸಿದ ಯಾವುದೇ ಸಂಪತ್ತು ಇರಬಹುದು ಅದನ್ನು ಇಲ್ಲಿಯೇ ಬಿಟ್ಟು ಹೋಗಬೇಕು. ಯಾರು ಅನೇ ಕಟ್ಟಿದರು ಅದು ಹಲಿದುಹೋಗುತ್ತದೆ ಮತ್ತು ನಾಶವಾಗುತ್ತದೆ. ನಮಗೆ ದೇವರಲ್ಲಿ ನಂಬಿಕೆ ಇಲ್ಲದಿದ್ದರೂ ತಮ್ಮ ಜೀವಿತಕ್ಕೆ ಕೊನೆಯೇ ಇಲ್ಲ ಎಂದು ಹೇಳುವದು ಮೂರ್ಖತನವಾಗಿದೆ. ಅವಿಶ್ವಾಸಿಗಳಿಗೆ, ಮಾನವನ ಜೀವಿತವೆಂದರೆ ಕೇವಲ ಕಡುಹೀನವಾದ ಮತ್ತು ನಿರುಪಯುಕ್ತವಾದ ಓತಿಖ್ಯಾತ ತಗಣಿಗಿಂತ ಹೆಚ್ಚೇನೂ ಅಲ್ಲದ ಜೀವಿತವಾಗಿದೆ. ಒಬ್ಬನು ತಾನು ಆನಂದಿಸಬಹುದಾದ ಆನಂದಕ್ಕಾಗಿ ಜೀವಿಸುತ್ತಾನೆ ಮತ್ತು ಸಾಯುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಸತ್ಯವೇದ ಆಧಾರಿತವಾದ ಸ್ಥಿರವಾದ ಸಂದೇಶವೆಂದರೆ ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ, ಅವರು ಹೀಗೆ ಸೃಷ್ಟಿಸಲ್ಪಟ್ಟಿರುವದರಿಂದ ಅವರು ದೇವರಿಗೆ ಉತ್ತರದಾಯಿಗಳಾಗಿದ್ದಾರೆ. ಜಗತ್ತು ದೇವರ ಸೃಷ್ಟಿಯಾಗಿದ್ದಲ್ಲಿ, ದೇವರು ಅದರ ಭವಿಷ್ಯತ್ತನ್ನು ನಿರ್ಧರಿಸಲು ಸಾಧ್ಯ ಮತ್ತು ನಿರ್ಧರಿಸುತ್ತಾನೆ.

ಕೊನೆಯ ದಿವಸಗಳ ಕುರಿತಾಗಿ ದೇವರು ನೀಡಿದ ಪ್ರಕಟನೆಗಳು ಕೇವಲ ನಮ್ಮ ಕೂತುಹಲಗಳನ್ನು ತೃಪ್ತಿಪಡಿಸುವದಕ್ಕಾಗಿ ಮಾತ್ರವಲ್ಲ. ಇದು ಭಕ್ತಿಯ ಜೀವಿತವನ್ನು ಪ್ರೇರೇಪಿಸುವದಕ್ಕಾಗಿ. ದೇವರ ನೈಜ್ಯತೆಯನ್ನು ನೀಡಿ, ಆತನು ಸತ್ಯವೇದದಲ್ಲಿ ತನ್ನನ್ನು ತಾನು ಪ್ರಕಟಿಸಿಕೊಂಡಿರುವದನ್ನು ನೀಡಿ ಮನುಷ್ಯನ ನಡತೆಯು ದೇವರ ಸ್ವರೂಪದ ಪ್ರತಿರೂಪವಾಗಿರಬೇಕು ಎಂದು ಹೇಳುವದಾಗಿದೆ. ಇದರ ಕೇಂದ್ರಬಿಂದುವಾಗಿ ಕೇವಲ ಎರಡು ನೈತಿಕ ವ್ಯವಸ್ಥೆಗಳು ನಮ್ಮ ಗಮನವನ್ನು ಸೆಳೆಯುವದು ಪ್ರಾಮುಖ್ಯವಾಗಿದೆ. ಮೊದಲನೆಯದಾಗಿ ಮಾನವ ಜೀವಿಗಳು ಜಗತ್ತಿನಲ್ಲಿ ಕೇವಲ ಹೃದಯವಿಲ್ಲದೇ ಇರುವ ಉದ್ದೇಶವಿಲ್ಲದಿರುವ ಮತ್ತು ಮಾರ್ಗದರ್ಶನ ಇಲ್ಲದಿರುವ ಸಂಭವನೀಯತೆಯಾಗಿದೆ. ಇಂಥಹ ಸ್ಥಿತಿಯಲ್ಲಿ, ನೈತಿಕತೆಯು ಹಾವಿನ ವಿಷದ ಹಲ್ಲು ಮತ್ತು ಮೊನಚಾದ ಉಗುರುಗಳ ನಿಯಮವಾಗಿದೆ. ಯಾರು ದೊಡ್ಡ ದೊಣ್ಣೆಯನ್ನು ಹಿಡಿದಿರುತ್ತಾರೋ ಅವರೇ ಸರಿ.

ಅರ್ಥವನ್ನು ನೀಡುವ ದೇವರ ಅಸ್ತಿತ್ವ ಒಂದೇ ನೈತಿಕ ವ್ಯವಸ್ಥೆಯ ಅಸ್ತಿವಾರವಾಗಿದೆ. ಅದು ದೇವರು ಇರುವದರಿಂದ "ಸರಿಯಾದದ್ದನ್ನು" ಮಾಡುವದು ಅವಶ್ಯವಾಗಿದೆ ಅದು ಲೋಕದ ರಚನೆಯಲ್ಲಿ ಹಾಸಹೊಕ್ಕಾಗಿದೆ. ತಮ್ಮ ಕುರಿತು ಸಮಂಜತೆಯನ್ನು ಹೊಂದಿರುವ ಜೀವಿತವನ್ನು ಕಟ್ಟುವ ಅವಶ್ಯಕತೆಯಿದೆ. ನೈತಿಕತೆ "ದೇವರ ಕೃಪೆ ಮತ್ತು ಒಳ್ಳೇತನಕ್ಕೆ ಆತನ ಜನರ ಪ್ರತಿಕ್ರಿಯೆಯಾಗಿದೆ."[7] Robert Davidson ರವರು ಇದನ್ನು ಉತ್ತಮವಾಗಿ

ಹೇಳುತ್ತಾರೆ:

> ಇಲ್ಲಿ ಗಮನಿಸಬೇಕಾದ ಪ್ರಾಮುಖ್ಯವಾದ ಅಂಶವೆಂದರೆ, ಅವರು ದೇವರ ಕುರಿತಾಗಿ ಏನನ್ನು ತಿಳಿದಿದ್ದಾರೆ ಎಂಬ ಕಾರಣದಿಂದ ಖಚಿತವಾದ ವಿಧೇಯತೆ, ಖಚಿತವಾದ ಜೀವಿತದ ಮಾರ್ಗಗಳು ಜನರಿಂದ ಅಪೇಕ್ಷಿಸಲ್ಪಡುತ್ತವೆ. ಇನ್ನೊಂದು ರೀತಿಯಲ್ಲಿ, ನೈತಿಕ ನಿಯಮಗಳು ದೇವರ ಪ್ರಕಟಿಸಲ್ಪಟ್ಟ ಗುಣಲಕ್ಷಣಗಳ ಆತ್ಮೀಯ ಸಂಬಂಧಗಳಿಂದ ನೈತಿಕ ನಿಯಮಗಳು ಬರುತ್ತವೆ.[8]

ಕ್ರೈಸ್ತ ಜೀವಿತದ ಸಮಂಜಸವಾದ ಗುರಿಯೆಂದರೆ **ಪರಿಶುದ್ಧ ಮತ್ತು ಭಕ್ತಿಯ** ಜೀವಿತವಾಗಿದೆ. "ಗುಣಲಕ್ಷಣ" *(anastrophē)* ಎಂಬ ಪದವನ್ನು ಅನುವಾದವು ಸ್ವ-ಪ್ರಜ್ಞೆಯಿಂದ ಆಯ್ದುಕೊಂಡ ತತ್ವಗಳಿಂದ ಮಾರ್ಗದರ್ಶನ ಹೊಂದಿದ ತತ್ವಗಳು ಎಂದು ಅರ್ಥವನ್ನು ನೀಡುತ್ತದೆ. ಪೇತ್ರನಿಗೆ, ಜೀವಿತಕ್ಕೆ ಮಾರ್ಗದರ್ಶನ ನೀಡಲು ಯೋಗ್ಯವಾದ ಒಂದೇ ತತ್ವವೆಂದರೆ ಅವು ದೇವರಿಂದ ನೇಮಿಸಲ್ಪಟ್ಟವುಗಳಾಗಿವೆ. "ಪರಿಶುದ್ಧವಾದ ನಡತೆ" ಅದು ದೇವರಿಗೆ ಮಹಿಮೆ ತರುವ ಜೀವಿತವಾಗಿದೆ. ಯಾಕಂದರೆ ಅದು ದೇವರ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ. "ಒಳ್ಳೇತನ" *(eusebeia)* ಎಂಬ ಪೇತ್ರನ ಪದದ ಅನುವಾದ ಭಯ, ಮೌನ ಭಯಭೀತಿ ತುಂಬಿದ ಆಶ್ಚರ್ಯ ನಂಬಿಕೆಯ ಜೀವಿತದೊಂದಿಗೆ ಜೊತೆಯಾಗಿರುತ್ತದೆ. ಈ ಸನ್ನಿವೇಶದಲ್ಲಿ, ಇದು ನಿರ್ಧಿಷ್ಟವಾಗಿ ಇದು ತನ್ನ ವಿಶ್ವದ ಮೇಲೆ ದೇವರಿಗೆ ಇರುವ ಸಾರ್ವಭೌಮ ಆಡಳಿತ ಖಚಿತತೆಯ ಮೂಲಕ ಹರಿದು ಬರುವ ಜೀವಿತದ ಕ್ರಮಪಡಿಸುವಿಕೆಯನ್ನು ನಿರ್ಧಿಷ್ಟವಾಗಿ ಉಲ್ಲೇಖಿಸುತ್ತದೆ.

**ವಚನ 12.** ಒಂದು ವೇಳೆ ಯೇಸುವಿನ ಹಿಂಬಾಲಕರು **ಕ್ರಿಸ್ತನ ದಿವು** ಯಾವಾಗ ಬರುತ್ತದೆ ಎಂಬ ನಿರ್ಧಿಷ್ಟವಾದ ಸಮಯವನ್ನು ಎಣಿಕೆ ಮಾಡುವದರ ಕುರಿತು ಸ್ವಲ್ಪ ಆಸಕ್ತಿಯನ್ನು ತೋರಿದ್ದರು ಆತನ ಬರೋಣವು ಉದಾಸೀನತೆಯ ವಿಷಯವಾಗುತ್ತಿರಲಿಲ್ಲ. ಅದು ಭಯಕ್ಕಿಂತ ಹೆಚ್ಚಾಗಿ ಪೂರ್ವನಿರೀಕ್ಷೆಯ ವಿಷಯವಾಗುತಿತ್ತು. ಕ್ರೈಸ್ತರು **ಆ ದಿನವನ್ನು ಎದುರುನೋಡುತ್ತಿದ್ದಾರೆ** ಮತ್ತು ಆ ದಿನಕ್ಕಾಗಿ ಅವಸರಪಡುತ್ತಿದ್ದಾರೆ. ಪೇತ್ರನು ಆ ದಿನವನ್ನು ತಮ್ಮ ಮನಸ್ಸಿನಲ್ಲಿ ಹಸಿಯಾಗಿ ಇಟ್ಟುಕೊಳ್ಳಬೇಕೆಂದು ಬಯಸುತ್ತಾನೆ. ಅವರು ಅದರ ಅರ್ಥವನ್ನು ಪರಿಗಣಿಸಲು ಮತ್ತು ಅದಕ್ಕನುಗುಣವಾಗಿ ತಮ್ಮ ಜೀವಿತವನ್ನು ಕ್ರಮಪಡಿಸಲು ಅದರ ಪರ್ಯಾಲೋಚನೆಯನ್ನು ಮಾಡಬೇಕು. ಕೀರ್ತನೆಗಳು ಮತ್ತು ಪ್ರವಾದನೆಗಳಲ್ಲಿ ಜ್ಞಾನಿಗಳು ಕರ್ತನಿಗಾಗಿ ಕಾದಿರುತ್ತಾರೆ. ಅವರಿಗೆ ಆತನು ತನ್ನ ಸ್ವಂತ ಸಮಯದಲ್ಲಿ ಮತ್ತು ತನ್ನ ಸ್ವಂತ ಮಾರ್ಗದಲ್ಲಿ ಕಾರ್ಯ ಮಾಡಲು ತೊಡಗುತ್ತಾನೆಂಬುದು ತಿಳಿದದೆ. ಜ್ಞಾನಿಗಳು ಲೋಕದಲ್ಲಿರುವ ಅನ್ಯಾಯ ಮತ್ತು ಕೆಟ್ಟತನಕ್ಕೆ ಕೊನೆಯಿದೆ ಎಂದು ತಿಳಿದಿರುತ್ತಾರೆ. "ನಾನು ಯೆಹೋವನನ್ನು ಎದುರು ನೋಡುತ್ತೇನೆ; ನನ್ನ ಪ್ರಾಣವು ಆತನನ್ನು ಕಾದುಕೊಂಡಿದೆ; ಆತನ ನುಡಿಯನ್ನು ನಿರೀಕ್ಷಿಸುಕೊಂಡಿದ್ದೇನೆ. ಕಾವಲುಗಾರರು ಬೆಳಗಾಗುವದನ್ನು ಮುನ್ನೊಂಡುತ್ತಾರಲ್ಲಾ; ಕಾವಲುಗಾರರು ಬೆಳಗಾಗುವನ್ನು ಮುನ್ನೊಂಡುವದಕ್ಕಿಂತ ವಿಶೇಷವಾಗಿ ನನ್ನ ಅಂತರಾತ್ಮವು ಕರ್ತನನ್ನು ಮುನ್ನೋಡುತ್ತದೆ" (ಕೀರ್ತನೆ 130:5, 6).

ಈ ಮೊದಲು, ಪೇತ್ರನು ದೇವರು ನ್ಯಾಯತೀರಿಸುವದನ್ನು ತಡಮಾಡಿದ್ದಾನೆ ಎಂದು ಹೇಳುತ್ತಾನೆ ಯಾಕಂದರೆ ಆತನು ತಾಳ್ಮೆಯಿಂದ ಇದ್ದಾನೆ ಯಾರೊಬ್ಬರು ನಾಶವಾಗಬಾರದು ಪ್ರತಿಯೊಬ್ಬರು ಪಶ್ಚಾತ್ತಾಪಪಡಬೇಕು ಎಂದು ಬಯಸುತ್ತಾನೆ (3:9). ಪಶ್ಚಾತ್ತಾಪ ಮತ್ತು ಭಕ್ತಿಯುತ ಜೀವಿತದ ಮೂಲಕ ಕ್ರೈಸ್ತರು ತಮ್ಮನ್ನು ತಾವು ಮತ್ತು ಲೋಕವನ್ನು "ಕರ್ತನ ದಿನಕ್ಕಾಗಿ" ಸಿದ್ಧಪಡಿಸಬೇಕು. ಸಹಜವಾಗಿ, ದೇವರು ಮಾನವನ ನಡತೆಗೆ ಪ್ರತಿಕ್ರಿಯಿಸುತ್ತಾನೆ. ಕೆಲವು ಹಂತದಲ್ಲಿ ದೇವರ ನ್ಯಾಯತೀರ್ಪು ಮಾನವನು ಕಾರ್ಯರೂಪದಲ್ಲಿ ತರುವ ಸ್ವಾತಂತ್ರ್ಯವನ್ನು ಅವಲಂಭಿಸಿರುತ್ತದೆ. ಕರ್ತನು ತಿರುಗಿ

ಬರುವಾಗ, ಆತನು ತೀರ್ಪುಮಾಡುವಾಗ, ಲೋಕದ ಆತ್ಮೀಕ ಸ್ಥಿತಿಯನ್ನು ಪರಿಗಣಿಸುತ್ತಾನೆ. ಪೇತ್ರನು ಕರ್ತನು ಪಶ್ಚಾತ್ತಾಪ ಪಡುವದಕ್ಕೆ ಸಾಕಷ್ಟು ಸಮಯವನ್ನು ಒದಗಿಸಿರುವಾಗ ಮತ್ತು ಕ್ರೈಸ್ತರು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುವಾಗ ಆತನು ತಿರುಗಿಬರುತ್ತಾನೆ ಎಂಬುದನ್ನು ಸೂಚಿಸುತ್ತಾನೆ. ಈ ಮೂಲಕವಾಗಿ ವಿಶ್ವಾಸಿಗಳು ದೇವರ ಮಹಿಮೆಗೆ "ಬರಲಿಕ್ಕಿರುವ ದೇವರ ದಿನವನ್ನು ಅವಸರಪಡಿಸುವದರ ಮೂಲಕ" ಕೊಡುಗೆಯನ್ನು ನೀಡಬಹುದು.

ಪೇತ್ರನು "ದೇವರ ದಿನವನ್ನು" ಸಾಮಾನ್ಯವಾಗಿರುವ "ಕರ್ತನ ದಿನಕ್ಕೆ" ಪ್ರತಿನಿಧಿಸುವಾಗ ಇದು ಅನಿರೀಕ್ಷಿತವಾಗಿದೆ ಆದರೆ ಆತನು ಯಾವುದೇ ರೀತಿಯಲ್ಲಿ ವಿಭಿನ್ನವಾದದ್ದನ್ನು ಸೂಚಿಸುತ್ತಾನೆ ಎಂದು ತೋರಿಬರುವದಿಲ್ಲ. ಪದವು ಅನಿರೀಕ್ಷಿತವಾಗಿದೆ. ಈ ಕಾರಣದಿಂದಾಗಿ ಅದು ಹೆಚ್ಚಾಗಿ ನಮ್ಮ ಗಮನವನ್ನು ಸೆಳೆಯುತ್ತಿದೆ. "ಬರುತ್ತಾನೆ" *(parousia)* ಎಂದು ಅನುವಾದಿಸಿದ ಪದ ಸಾಮಾನ್ಯವಾಗಿ ಯೇಸುವನ್ನು ವಿಷಯವಾಗಿ ಉಪಯೋಗಿಸುತ್ತದೆ. "ಬರಲಿಕ್ಕಿರುವ ದೇವರ ದಿನವು" ಮತ್ತು 3:4ರಲ್ಲಿ "ಬರುತ್ತೇನೆ ಎಂದು ಮಾಡಿದ ವಾಗ್ದಾನ" ಎರಡು ಒಂದೇ ಘಟನೆಯನ್ನು ಉಲ್ಲೇಖಿಸುತ್ತವೆ.

ಇಲ್ಲಿ, ಸೈದ್ಧಾಂತಿಕವಾಗಿ ಲೋಕವು ಕೊನೆಗೊಳ್ಳಲು ಅನೇಕ ವಿಧಗಳಿವೆ. ದೊಡ್ಡ ನಕ್ಷತ್ರಾಕೃತಿ ಭೂಮಿಗೆ ಡಿಕ್ಕಿಹೊಡೆದು ಜೀವಿಸಿರುವ ಎಲ್ಲಾ ಪ್ರಾಣಿಗಳನ್ನು ನಾಶಪಡಿಸಬಹುದು. ಸಾಕಷ್ಟು ನ್ಯೂಕ್ಲಿಯರ್ ಆಯುಧಗಳ ಸಂಗ್ರಹವಿರುವದರಿಂದ ಮನುಷ್ಯನು ಸ್ವಯಂ ಸೃಷ್ಟಿಸಿದ ವಸ್ತು ಲೋಕವನ್ನು ಕಬಳಿಸಬಹುದು. ರೋಗಗಳು, ಪಂಥಾಹ್ವಾನ ನೀಡುವ ಹವಾಮಾನದ ಸ್ಥಿತಿಗಳು ಅಥವಾ ಅನೇಕ "ಸ್ವಾಭಾವಿಕ" ಸಂಗತಿಗಳು ಮನುಷ್ಯನ ಸಮಯದ ಅಂತ್ಯಕ್ಕೆ ಕಾರಣವಾಗಬಹುದು. ಪೇತ್ರನು ಲೋಕದ ಅಂತ್ಯವು ಹೃದಯಹೀನ ಅದೃಷ್ಟದ ಪರಿಣಾಮವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಕೊನೆಯು ಬರುವಾಗ ಅದು ವಯಕ್ತಿಕವಾದ ನ್ಯಾಯತೀರ್ಪಿನ ಕಾರ್ಯವಾಗಿರುತ್ತದೆ. ಮಾನವನ ಸಮಯದ ಕೊನೆಯು ಬರುವಾಗ ಅದು ದೇವರು ಅದಕ್ಕೆ ಕೊನೆಯನ್ನು ತಂದಿದ್ದಾನೆಂದು ಅರ್ಥವಾಗಿದೆ.

"ದೇವರ ದಿನ" ಬರುತ್ತದೆ **ಆ ದಿನದಲ್ಲಿ ಆಕಾಶಮಂಡಲವು ಬೆಂಕಿ ಹತ್ತಿಲಯವಾಗಿ ಹೋಗುವದು, ಸೂರ್ಯ ಚಂದ್ರ ನಕ್ಷತ್ರಗಳು ಕರಗಿ ಹೋಗುವವು.** 3:7ರಲ್ಲಿ ಬರುವ ಈ ವಚನದಲ್ಲಿ "ಆಕಾಶ ಮತ್ತು ಭೂಮಿ" "ಆಕಾಶಮಂಡಲ" ಮತ್ತು "ಅದರೊಳಗಿರುವ ಅಂಶಗಳಿಗೆ" ಸಮನಾಗಿದೆ. ಇಲ್ಲಿ ಪೇತ್ರನು ಒಬ್ಬನು ಪಾಪದೊಂದಿಗೆ ಲಘುವಾಗಿ ವರ್ತಿಸಬಾರದು ಎಂಬುದನ್ನು ಸೂಚಿಸುತ್ತಾನೆ. ಪಾಪದಲ್ಲಿ ಒಬ್ಬನು ಹೇಗೆ ಜೀವಿಸುತ್ತಾನೆ ಎಂಬುದು ಗಂಭೀರವಾದ ವಿಷಯವಾಗಿದೆ. ದೇವರು ಪ್ರೀತಿಯ ತಂದೆಯಾಗಿದ್ದಾನೆ, ಆತನು "ದಹಿಸುವ" ಬೆಂಕಿಸಹ ಆಗಿದ್ದಾನೆ (ಧರ್ಮೋಪದೇಶಕಾಂಡ 4:24; ಇಬ್ರಿಯ 12:29). ಅವನು ಅನ್ಯಾಯವನ್ನು, ಹಿಂಸೆಯನ್ನು, ದಬ್ಬಾಳಿಕೆಯನ್ನು ಅಥವಾ ಲೋಕದ ಯಾವುದೇ ಕೆಟ್ಟತನದೊಂದಿಗೆ ಸಂಬಂಧವನ್ನು ಹೊಂದಿಲ್ಲ ಮತ್ತು ಅದನ್ನು ಅಲಕ್ಷಿಸುವದಿಲ್ಲ.

**ವಚನ 13.** ಯೆಶಾಯನ ಮೂಲಕ, ದೇವರು ವಾಗ್ದಾನ ಮಾಡಿದ್ದಾನೆ, "ಇಗೋ ನೂತನ ಆಕಾಶಮಂಡಲವನ್ನು ನೂತನ ಭೂಮಂಡಲವನ್ನು ಸೃಷ್ಟಿಸುವೆನು; ಮೊದಲಿದ್ದದ್ದನ್ನು ಯಾರು ಜ್ಞಾಪಿಸಿಕೊಳ್ಳರು. ಅದು ನೆನಪಿಗೆ ಬಾರದು" (ಯೆಶಾಯ 65:17). ಪ್ರವಾದಿಯು ಇಸ್ರಾಯೇಲನ್ನು ತಿರುಗಿ ಕಟ್ಟುವದರ ಕುರಿತಾಗಿ ಮಾತನಾಡುತ್ತಾನೆ. ಪೇತ್ರನು ಇದನ್ನು ಎರವಲು ಪಡೆದು ಮತ್ತು ಯೆಶಾಯನ ಈ ಪದಗಳನ್ನು ಅಳವಡಿಸಿಕೊಂಡು ರಕ್ಷಣೆಹೊಂದಿದವರಿಗೆ ಇರುವ ನಿತ್ಯಜೀವದ ಕುರಿತಾಗಿ ಮಾತನಾಡಲು ಉಪಯೋಗಿಸುತ್ತಾನೆ. ಅಪೊಸ್ತಲನು **ನೂತನಾಕಾಶಮಂಡಲವನ್ನು ನೂತನಭೂಮಂಡಲವನ್ನು ಎದುರು ನೋಡುತ್ತಾ ಇದ್ದೇವೆ** ಎಂದು ಹೇಳುವದರಲ್ಲಿ ಶಕ್ತನಾಗಿದ್ದಾನೆ. ಬಹುಶಃ ಪೇತ್ರನು ಯೆಶಾಯನ ಪ್ರವಾದನೆಯ ಗ್ರಂಥದಲ್ಲಿರುವ ವಾಗ್ದಾನವನ್ನು ಉಲ್ಲೇಖಿಸುತ್ತಿರಬಹುದು. ಇನ್ನೊಂದು ಸಾಧ್ಯತೆ

ಎಂದರೆ ಯೇಸು ಅಪೊಸ್ತಲರಿಗೆ ನೀಡಿದ ತಿಳಿಯದೇ ಇರುವ ವಾಗ್ದಾನಗಳನ್ನು ಬಹುಶಃ ಉಲ್ಲೇಖಿಸಿರಬಹುದು. ಇಲ್ಲವಾದಲ್ಲಿ ಪವಿತ್ರಾತ್ಮನು ಹೊಸ ಆಕಾಶ ಮತ್ತು ಹೊಸ ಭೂಮಿಯ ವಾಗ್ದಾನವನ್ನು ಪೇತ್ರನಿಗೆ ಪ್ರಕಟಿಸಿರಬಹುದು.

ಹೊಸ ಆಕಾಶ ಮತ್ತು ಹೊಸ ಭೂಮಿ ಕೊನೆಯಿಲ್ಲದ ವೀಕ್ಷಣೆಯ ವಿಷಯವಾಗಿವೆ. ಹಿಂದೆ ಯೆಶಾಯನು ಸಮಾಧಾನದ ಚಿತ್ರದ ಒಂದು ಚಿತ್ರಣವನ್ನು ನೀಡುತ್ತಾನೆ ಅಲ್ಲಿ ತೋಳ, ಕುರಿಮರಿ, ಹುಲಿ ಮತ್ತು ಕರು ಒಟ್ಟಿಗೆ ಮಲಗುವ ಚಿತ್ರಣ (ಯೆಶಾಯ 11:6). ಇದು ಹೊಸ ಆಕಾಶ ಮತ್ತು ಹೊಸ ಭೂಮಿಯ ವಾಸ್ತವವಾದ ವರ್ಣನೆ ಎಂದು ನಾವು ತಿಳಿದುಕೊಳ್ಳಬೇಕೋ? ಪಥ್ಮೋಸ ದ್ವೀಪದಲ್ಲಿ ಯೋಹಾನನು ಸೆರೆಯಲ್ಲಿದ್ದಾಗ ಬರೆಯುತ್ತಾನೆ, "ತರುವಾಯ ನೂತನ ಆಕಾಶಮಂಡಲವನ್ನೂ ನೂತನಭೂಮಂಡಲವನ್ನೂ ಕಂಡೆನು ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು" (ಪ್ರಕಟನೆ 21:1).

ಅಪೊಸ್ತಲರು ಯಾವುದರ ಕುರಿತಾಗಿ ಮಾತನಾಡುತ್ತಿದ್ದಾರೆ? ಹೊಸ ಭೂಮಂಡಲವು ಈಗ ಜನರು ವಾಸಿಸುತ್ತಿರುವ ಇದೇ ಭೂಮಂಡಲವಾಗಿದೆಯೋ? ಈ ಗ್ರಹವು ಹಾಗೂ ದೇವರ ಜನರು ಶಾಶ್ವಾತವಾಗಿ ಜೀವಿಸುವ ಸ್ಥಳವಾಗಿ ನೂತನವಾಗಿ ಮಾರ್ಪಾಡಾಗುತ್ತದೋ? ಬಹುಶಃ ಇಲ್ಲ, ಹಾಗೂ, ಪ್ರಕಟನೆಯಲ್ಲಿರುವ ಹೊಸ ಯೆರೂಸಲೇಮು "ಪರಲೋಕದಿಂದ ದೇವರ ಬಳಿಯಿಂದ ಇಳಿದುಬರುವದು" (ಪ್ರಕಟನೆ 21:2) ಎಂಬುದು ಗಮನಿಸಲು ಯೋಗ್ಯವಾಗಿದೆ. ವಿಮೋಚನೆಹೊಂದಿದವರ ಶಾಶ್ವತವಾದ ಸ್ಥಳವಾಗಿ ಪ್ರತಿನಿಧಿಸಲ್ಪಟ್ಟಿರುವ ಹೊಸ ಯೆರೂಸಲೇಮ, ಭೂಲೋಕಕ್ಕೆ ಇಳಿದು ಬರುವಂತೆ ತೋರುತ್ತದೆ. ಹಾಗೂ, ಈ ಅಂಥವು ಖಚಿತವಾಗಿಲ್ಲ ಮತ್ತು ಪ್ರಕಟನೆಯನ್ನು ವಾಸ್ತವವಾಗಿ ನಾವು ಹೇಗೆ ಅರ್ಥೈಸುತ್ತೇವೆ ಎನ್ನುವ ವಿಷಯದಲ್ಲಿ ನಾವು ಎಚ್ಚರವಾಗಿರಬೇಕು.

ಪೇತ್ರನು ಈಗಾಗಲೇ ಪ್ರಸ್ತುತ ಕಾಲ ಮತ್ತು ಮುಂದೆ ಬರಲಿಕ್ಕಿರುವ ಕಾಲದ ಮಧ್ಯದಲ್ಲಿರುವ ಮಹತ್ವವನ್ನು ಮೂಲ ಸ್ವರೂಪದಲ್ಲಿ ನಿಲ್ಲಿಸಿಬಿಟ್ಟಿರುವದನ್ನು ದೃಢಪಡಿಸುತ್ತಾನೆ. "ಆಕಾಶಮಂಡಲವು ಮಹಾಘೋಷದಿಂದ ಇಲ್ಲದೆ ಹೋಗುವದು" (3:10). ಎಂದು ಬರೆಯುತ್ತಾನೆ ಮತ್ತು ಹೊಸದರ ಮಧ್ಯದಲ್ಲಿ ನಿರಂತರತ್ವ ಇದೆ ಎಂದು ಹೇಳುತ್ತಿದ್ದಾನೋ? ಆಕಾಶಮಂಡಲವು ಭೂಮಿಯ ಅಸ್ತಿತ್ವದಂತೆ ಆದರೆ ಪಾಪ ಮತ್ತು ಕಷ್ಟಸಂಕಟ ಸಧ್ಯದಲ್ಲಿ ಮಾನವಕುಲವನ್ನು ಪೀಡಿಸದೇ ಇರುವಂತೆ ಇರುತ್ತದೋ? ಈ ಸಾಧ್ಯತೆಯಿದೆ ಆದರೆ ಬಹುಶಃ ಪೇತ್ರನು ಇಂಥಹ ಸಂಗತಿಗಳನ್ನು ಸೂಚಿಸುತ್ತಿಲ್ಲ. ಬಹುಶಃ ಆತನು ದೇವರು ಅವರಿಗೆ ಆತನೊಂದಿಗೆ ಶಾಶ್ವಾತವಾಗಿ ವಾಸಿಸುವ ಸೌಲಭ್ಯವನ್ನು ಮಾಡಿದ್ದಾನೆ ಎಂದು ಭರವಸೆಯನ್ನು ನೀಡುತ್ತಿದ್ದಾನೆ. ಬಹುಶಃ "ನೂತನ ಆಕಾಶಮಂಡಲ ಮತ್ತು ನೂತನ ಭೂಮಂಡಲ" ಎಂದರೆ ರಕ್ಷಣೆ ಹೊಂದಿದವರು ಎಲ್ಲೋ ಒಂದು ಕಡೆ ಜೀವಿಸುತ್ತಾರೆ ಎಂದರ್ಥ. ನಿತ್ಯಜೀವವು ವಾಸಿಸುವದಕ್ಕೆ ಬೆಳಕೂ ಮತ್ತು ಸಂತೋಷವೂ ಇಲ್ಲದ ವೇದನೆಯ, ಕಷ್ಟಕರವಾದ ಸ್ಥಳವಲ್ಲ. ದೇವರು ಸೌಲಭ್ಯವನ್ನು ಸಿದ್ಧಪಡಿಸಿದ್ದಾನೆ. ಶಾಶ್ವತವಾಗಿ ಅಸ್ತಿತ್ವದಲ್ಲಿರುವ ಹೆಚ್ಚಿನ ಊಹೆಯಿಲ್ಲದ ಸ್ವರೂಪವನ್ನು ಪೇತ್ರನು ನಿತ್ಯಜೀವದ ಭರವಸೆಯೊಂದಿಗೆ ನೀಡುತ್ತಾನೆ.

## ದೃಢಪ್ರಯತ್ನಕ್ಕೆ ಕರೆ (3:14-16)

**[14]ಆದಕಾರಣ ಪ್ರಿಯರೇ, ನೀವು ಇವುಗಳನ್ನು ಎದುರುನೋಡುವವರಾಗಿರುವದರಿಂದ ಶಾಂತರಾಗಿದ್ದು ಆತನೆದುರಲ್ಲಿ ನಿರ್ಮಲರಾಗಿಯೂ ನಿರ್ದೋಷಿಗಳಾಗಿಯೂ ಕಾಣಿಸಿಕೊಳ್ಳುವದಕ್ಕೆ ಪ್ರಯಾಸ ಪಡಿರಿ. [15]ನಮ್ಮ ಕರ್ತನ ದೀರ್ಘಶಾಂತಿಯು ನಮ್ಮ ರಕ್ಷಣಾರ್ಥವಾಗಿ ಅದೇ ಎಂದು ಎಣಿಸಿಕೊಳ್ಳಿರಿ. ಇದೇ ಅಭಿಪ್ರಾಯಕ್ಕೆ ಸರಿಯಾಗಿ ನಮ್ಮ ಪ್ರಿಯ**

**ಸಹೋದರನಾದ ಪೌಲನು ಸಹ ತನಗೆ ಅನುಗ್ರಹಿಸಿರುವ ಜ್ಞಾನದ ಪ್ರಕಾರ ನಿಮಗೆ ಬರೆದನು. [16]ಅವನು ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ಈ ವಿಷಯಗಳನ್ನು ಕುರಿತು ಬರೆಯುವಾಗ ಹೀಗೆ ಬೋಧಿಸಿದ್ದಾನೆ. ಆ ಪತ್ರಿಕೆಗಳಲ್ಲಿರುವ ಕೆಲವು ಮಾತುಗಳು ತಿಳಿಯುವದಕ್ಕೆ ಕಷ್ಟವಾಗಿವೆ. ವಿದ್ಯಾಹೀನರೂ ಚಪಲಚಿತ್ತರೂ ಹೇಗೆ ನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥ ಮಾಡಿಕೊಂಡಿದ್ದಾರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥಮಾಡಿಕೊಂಡು ತಮಗೆ ನಾಶವನ್ನುಂಟು ಮಾಡಿಕೊಳ್ಳುತ್ತಾರೆ.**

ಆತನು ಈ ಪತ್ರವನ್ನು ಮುಕ್ತಾಯಗೊಳಿಸುತ್ತಿರುವ ಹಾಗೆ, ಪೇತ್ರನು ತನ್ನ ಕ್ರೈಸ್ತ ಸ್ನೇಹಿತರಿಗೆ ಸಕಲ ಪರಿಶ್ರಮದಿಂದ ಭಕ್ತಿಯ ಜೀವಿತವನ್ನು ಹೊಂದಿಕೊಳ್ಳಲು ಆಗ್ರಹಪಡಿಸುತ್ತಾನೆ. ಇದರಲ್ಲಿ ಒಂದು ವಿಷಯವೆಂದರೆ ಕ್ರಿಸ್ತನನ್ನು ಅರಿಕೆಮಾಡುವದು; ಇನ್ನೊಂದು ರೀತಿಯಲ್ಲಿ ಪ್ರಾಮಾಣಿಕರಾಗಿ ಜೀವಿಸುವದು. ಅಪೊಸ್ತಲನಿಗೆ ತನ್ನ ಓದುಗರ ಆತ್ಮೀಕ ಯುದ್ಧದ ಕುರಿತಾಗಿ ಎರಡು ವಿಧದ ಕಳಕಳಿಯಿವೆ, ಮೊದಲನೆಯದಾಗಿ, ವಿಷಯಲಂಪಟತನದಲ್ಲಿ ತೃಪ್ತಿಹೊಂದುವದು ಇಂಥಹ ಅಭ್ಯಾಸಗಳನ್ನು ನಿರಾಕರಿಸುವವರಿಗೆ ಸಹ ಬಲವಾಗಿವೆ. ಸುಳ್ಳು ಬೋಧಕರು ಸ್ವಯಂ - ತೃಪ್ತಿಪಡಿಸಿಕೊಳ್ಳುವದನ್ನು ಆತ್ಮೀಕ ಆಶೀರ್ವಾದಗಳೊಂದಿಗೆ ಗುರುತಿಸುವಾಗ ಶರೀರದ ಬೇಡಿಕೆಗಳನ್ನು ಜಯಿಸುವದು ಅಷ್ಟೇ ಕಠಿಣವಾಗಿದೆ. ಪೇತ್ರನ ಓದುಗರು, ಶರೀರದ ಆಶೆಗಳನ್ನು ತೃಪ್ತಿಪಡಿಸುವದರಿಂದ ದೇವರೊಂದಿಗಿರುವ ಒಬ್ಬನ ಸಂಬಂಧದ ಮೇಲೆ ಪರಿಣಾಮ ಬೀರುವದಿಲ್ಲ ಎಂಬುದರಿಂದ ಪ್ರಭಾವಿತರಾಗಿದ್ದರು. ಇಂಥಹ ನಡತೆಯು ದೇವರಿಂದ ಪ್ರತ್ಯೇಕಿಸುತ್ತದೆಂದು ಅಪೊಸ್ತಲನು ವಾದಿಸುತ್ತಾನೆ.

ಸಭೆಯು ಅರಿಕೆ ಮಾಡುವಂತ ಸಮುದಾಯವಾಗಿದೆ. ಕ್ರೈಸ್ತರು ಸಾಮಾನ್ಯವಾಗಿ ಹಿಡಿದುಕೊಂಡಿರುವ ನಂಬಿಕೆಯೊಂದಿಗೆ ಕಟ್ಟಲ್ಪಟ್ಟವರಾಗಿದ್ದಾರೆ. ನಡತೆಯು ನಂಬಿಕೆಯಿಂದ ರೂಪಿಸಲ್ಪಡುತ್ತದೆ. ಪೇತ್ರನ ಎರಡನೆಯ ಕಳಕಳಿ ಎಂದರೆ ಸುಳ್ಳು ಬೋಧಕರು ಕ್ರೈಸ್ತರ ನಂಬಿಕೆಯನ್ನು ಹೀನೈಸುತ್ತಿದ್ದಾರೆ. ಸಿದ್ಧಾಂತಗಳು ನಡತೆಯೊಂದಿಗೆ ಸಂಬಂಧಹೊಂದದೆ ಇರುವದಿಲ್ಲ. ಕ್ರೈಸ್ತ ಸಿದ್ಧಾಂತಗಳು ಕರ್ತನಾದ ಯೇಸು ಕ್ರಿಸ್ತನು "ರಕ್ಷಣೆಯನ್ನುಂಟು ಮಾಡುವದಕ್ಕೋಸ್ಕರ ಎರಡನೆಯ ಸಾರಿ ಕಾಣಿಸಿಕೊಳ್ಳುವನು" ಎಂಬುದನ್ನು ನಿರ್ವಹಿಸುತ್ತವೆ (ಇಬ್ರಿಯ 9:28). ಪರಿಶುದ್ಧ ಜೀವಿತವನ್ನು ಜೀವಿಸಲು ದೇವರ ಬೇಡಿಕೆ ಯೇಸು ಒಮ್ಮೆ ಮಾಂಸಾಧಾರಿಯಾಗಿ ಬಂದಿದ್ದನು, ಆತನು ಮತ್ತೆ ನ್ಯಾಯತೀರಿಸುವದಕ್ಕೆ ಬರುತ್ತಾನೆ ಎಂಬ ಭರವಸೆಗೆ ಆಧಾರವಾಗಿದೆ. ಈ ಪತ್ರವನ್ನು ಮುಕ್ತಾಯಗೊಳಿಸುತ್ತಿರುವ ಹಾಗೆ ಪೇತ್ರನು ಈ ವಿಚಾರವನ್ನು ತನ್ನ ಓದುಗರಿಗೆ ಬಿಟ್ಟುಹೋಗಲು ಬಯಸುತ್ತಾನೆ.

**ವಚನ 14.** ಅಪೊಸ್ತಲನು ತನ್ನ ಸಹ ವಿಶ್ವಾಸಿಗಳಿಗೆ ಅವರನ್ನು **ಪ್ರಿಯರೇ** ಎಂದು ಕರೆಯುವದರ ಮೂಲಕ ವ್ಯಕ್ತಪಡಿಸಲು ಬಯಸುತ್ತಾನೆ. ಈ ಅಧ್ಯಾಯದಲ್ಲಿ ನಾಲ್ಕು ಸಾರಿ ಈ ಪದವನ್ನು ಆತನು ಉಪಯೋಗಿಸುತ್ತಾನೆ (3:1, 8, 14, 17). ಪೇತ್ರನು ಈ ಪದವನ್ನು ತನ್ನ ಎಚ್ಚರಿಕೆಯು ಯಾವುದೇ ದೂರುಗಳನ್ನು ಹೊಂದಿಲ್ಲ ಎಂಬುದನ್ನು ಸೂಚಿಸಲು ಉಪಯೋಗಿಸಿದ್ದಾನೆ ಎಂದು ಕೆಲವರು ಸಂದೇಹವನ್ನು ವ್ಯಕ್ತಪಡಿಸುತ್ತಾರೆ. ಆತನು **ನಿರ್ಮಲರಾಗಿಯೂ** ಮತ್ತು **ನಿರ್ದೋಷಿಗಳಾಗಿಯೂ** ಜೀವಿಸುವದರಲ್ಲಿ ವಿಫಲರಾಗಿದ್ದಾರೆ ಎಂದು ಆಪಾಧಿಸುತ್ತಿಲ್ಲ. ಅವನು ಅವರನ್ನು ಬಲಪಡಿಸುತ್ತಿದ್ದಾನೆ ಮತ್ತು ಜ್ಞಾಪನದ ಮೂಲಕ ಅವರ ಮನಸ್ಸುಗಳನ್ನು ಬಡಿದೆಬ್ಬಿಸುತ್ತಿದ್ದಾನೆ (3:1). ಕ್ರೈಸ್ತರು ತಮ್ಮ ಕರ್ತನ ಅನುಕರುಣೆಯಲ್ಲಿ ಜೀವಿಸಬೇಕು. 1 ಪೇತ್ರ 1:19ರಲ್ಲಿ ಅಪೊಸ್ತಲನು ಯೇಸುವಿನ ರಕ್ತವನ್ನು ಪ್ರಸ್ತಾಪಿಸುತ್ತಾನೆ ನಂತರ ಆತನು ಕರ್ತನು ಕುರಿಮರಿಯಾಗಿದ್ದಾನೆ ಎಂದು ಹೇಳುತ್ತಾನೆ "ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿ" *(amōmou kai aspilou)* ಎಂದು ಹೇಳುತ್ತಾನೆ. ಅದೇ ಪದವನ್ನು ಈ ವಚನದಲ್ಲಿ ಆತನು ಪರಿಶುದ್ಧ ಜೀವಿತದವನ್ನು ಜೀವಿಸುವ ಬೇಡಿಕೆಯನ್ನು ಇಡುವಾಗ ಉಪಯೋಗಿಸುತ್ತಾನೆ.[9]

ಯಾರು ಯೇಸುವಿನ ಹೆಸರನ್ನು ಹೊಂದಿಕೊಂಡಿರುತ್ತಾರೋ ಅವರು ಭಕ್ತಿಯ ಜೀವಿತಕ್ಕೆ ಆತನ ಉದಾಹರಣೆಯ ಮೂಲಕ ಪ್ರೇರೆಪಣೆಯನ್ನು ಹೊಂದುತ್ತಾರೆ.

ಕ್ರೈಸ್ತ ತತ್ವಜ್ಞಾನಶಾಸ್ತ್ರವು ಕ್ರೈಸ್ತ ನಡತೆಯೊಂದಿಗೆ ಬಿಡಿಸಲಾರದ ಬಂಧನದಲ್ಲಿ ಕಟ್ಟಲ್ಪಟ್ಟಿದೆ. ಮಾನರೂಪ ಧರಿಸಿದ ಯೇಸುವೇ ಕ್ರಿಸ್ತನು ಎಂದು ದೃಢವಾಗಿ ಹೇಳುವದು ಮಾನವ ಜೀವಿತವು ಗೌರವ ಮತ್ತು ವೈಶಿಷ್ಟತೆಯಿಂದ ಕೂಡಿದೆ ಎಂದು ಹೇಳುವದಾಗಿದೆ. ಮೋಶೆ ಇಸ್ರಾಯೇಲಲಿಗೆ ಹೇಳಿದ ಮಾತುಗಳು ಪೇತ್ರನ ಮಾತುಗಳಿಗಿಂತ ಭಿನ್ನವಾದವುಗಳೇನಲ್ಲಾ. ಧರ್ಮಶಾಸ್ತ್ರವನ್ನು ನೀಡಿದಾತನು ಹೇಳುತ್ತಾನೆ, "ಆದುದರಿಂದ ಈ ಹೊತ್ತು ತಿಳಿದುಕೊಳ್ಳಿರಿ" ಆಕಾಶದಲ್ಲಿಯೂ ಭೂಮಿಯಲ್ಲಿಯೂ ಯೆಹೋವನೊಬ್ಬನೇ ದೇವರು, ಬೇರೆ ಯಾವ ದೇವರೂ ಇಲ್ಲವೆಂಬುದನ್ನು ಈಗ ಗ್ರಹಿಸಿಕೊಂಡು ಜ್ಞಾಪಕದಲ್ಲಿಡಬೇಕು (ಧರ್ಮೋಪದೇಶ ಕಾಂಡ 4:39).

ಮೋಶೆ ಮತ್ತು ಪೇತ್ರ ಈ ಇಬ್ಬರಿಗೂ ಮಾನವ ಇತಿಹಾಸವು ಚಕ್ರದಲ್ಲಿರುವ ಹಲ್ಲಿನಂತೆ ಕೇವಲ ಭೌದ್ಧಿಕ ಲೋಕವಲ್ಲ, ಇದರಿಂದಾಗಿ ಅದೃಷ್ಟದಿಂದಾಗಿ ಸಂಭವಿಸುವ ಆಕಸ್ಮಿಕಗಳು, ಕೊನೆಯಿಲ್ಲದ ಘಟನೆಗಳು ಸಂಭವಿಸುತ್ತವೆ. ವ್ಯಕ್ತಿಯ ನೀತಿನಿಯಮಗಳು ಗಣನೆಗೆ ಬರುತ್ತವೆ. ಇವುಗಳು ಗಣನೆಗೆ ಬರುತ್ತವೆ ಏಕೆಂದರೆ ಮೇಲೆ ಆಕಾಶದಲ್ಲಿ ಮತ್ತು ಕೆಳಗೆ ಭೂಮಿಯಲ್ಲಿ ದೇವರಾಗಿರುವಾತನು "ನೀತಿವಂತರ ವಾಸಿಸಲು ನೂತನ ಆಕಾಶಮಂಡಲವನ್ನು ಮತ್ತು ನೂತನ ಭೂಮಂಡಲವನ್ನು ಸೃಷ್ಟಿಸುತ್ತಿದ್ದಾನೆ." ನೀವು ಈ ಸಂಗತಿಗಳನ್ನು ನೋಡುವಾಗ ಪರಿಶುದ್ಧಜನರಾಗಿರಬೇಕು **ಎಂಬ ಎಚ್ಚರಿಕೆ ಪರಿಣಾಮಕಾರಿಯಾಗಿದೆ.** ದೈವಶಿಕ್ಷೆಗಳ ಶಾಸ್ತ್ರ ಸಿದ್ಧಾಂತಗಳ ಪ್ರಾಮುಖ್ಯವಾದ ಅಂಶವಾಗಿದೆ. ಇತಿಹಾಸ ಮತ್ತು ಸಮಯವು ಅತ್ಯುತ್ಕೃತಸ್ಥಿತಿಗೆ ಏರುವತ್ತ ನಡೆಯುತ್ತಿವೆ. ಯೇಸುವನ್ನು ಕ್ರಿಸ್ತನೆಂದು ಅರಿಕೆ ಮಾಡುವ ಯಾವನೂ ತನ್ನ ನೈತಿಕ ಆಯ್ಕೆಯನ್ನು ಲಘುವಾಗಿ ಮಾಡಲು ಸಾಧ್ಯವಿಲ್ಲ. ಆ ಕಾರಣದಿಂದಾಗಿ, ಪೇತ್ರನು **ಆತನ ಎದುರಿನಲ್ಲಿ ಶಾಂತರಾಗಿ ಕಾಣಲ್ಪಡುವಂತೆ ಪ್ರಯಾಸಪಡಿಸಿ** ಎಂದು ಸೂಚಿಸುತ್ತಾನೆ.

"ಶಾಂತರಾಗಿ" ಎಂಬ ಹೆಚ್ಚಿನ ಈ ವಾಕ್ಯಭಾಗವು ಆಕಸ್ಮಿಕವೇನಲ್ಲ. ಈ ಚಿಕ್ಕ ಪತ್ರದಲ್ಲಿ ಈ ಪದವನ್ನು ಒಂದೇ ಸಾರಿ ಉಪಯೋಗಿಸಲಾಗಿದೆ. ಕರ್ತನು ತಿರುಗಿ ಬರುವಾಗ ಪೇತ್ರನು ಬಯಸುವದೇನೆಂದರೆ ತಾನು ಮತ್ತು ತನ್ನ ಓದುಗರು ಪಾಪದ ಅಪರಾಧದಿಂದ ಮುಕ್ತರಾಗಿ ನಿಲ್ಲಬೇಕು ಎಂಬುದಾಗಿದೆ. "ಶಾಂತರಾಗಿ" ಎಂದರೆ "ರಕ್ಷಣೆಹೊಂದಿ" ಎಂದರ್ಥ ಆದರೆ ಇದು ಇನ್ನೂ ಹೆಚ್ಚಿನದನ್ನು ಸೂಚಿಸುವ ಸಾಧ್ಯತೆಯಿದೆ. ದೇವರೊಂದಿಗೆ ಸಮಾಧಾನದಿಂದ ಇರುವದರ ಪರಿಣಾಮವಾಗಿ ನಮ್ಮ ಸಹೋದರ ಮತ್ತು ಸಹೋದರಿಯರೊಂದಿಗೆ ಸಮಾಧಾನದಿಂದ ಇರುವ ಗುಣಲಕ್ಷಣವನ್ನು ಹೊಂದಿದ ಜೀವಿತವಾಗಿರುತ್ತದೆ. ಕ್ರಿಸ್ತನಲ್ಲಿ ಇಂಥಹ ವ್ಯಕ್ತಿ ಸಮಾಧಾನದ ಆಶೀರ್ವಾದದ ತಿಳುವಳಿಕೆಯೊಂದಿಗೆ ಸಭೆಯಲ್ಲಿ, ಭೂಮಿಯಲ್ಲಿ ಆತನ ರಾಜ್ಯದಲ್ಲಿ, ಇನ್ನೂ ಅರಿತುಕೊಳ್ಳಬಹುದಾದ ನೂತನ ಆಕಾಶಮಂಡಲ ಮತ್ತು ನೂತನ ಭೂಮಿಯಲ್ಲಿ ನಡೆಯುತ್ತಾನೆ.

**ವಚನ 15.** ದೇವರಲ್ಲಿ ಭರವಸವಿಡುವವರು ಸಹ ಆತನು ಹೇಳಿದ್ದನ್ನು ಮಾಡುತ್ತಾನೆ ಎಂದು ಕಾಯ್ದುಕೊಂಡಿರುವದರಲ್ಲಿ ಕಠಿಣತೆಯನ್ನು ಅನುಭವಿಸುತ್ತಾರೆ, ಆತನು ತಕ್ಕ ಸಮಯದಲ್ಲಿ ಅದನ್ನು ಮಾಡುತ್ತಾನೆ. ಸುಳ್ಳು ಬೋಧಕರು ಇದನ್ನು ಬಂಡವಾಳವಾಗಿ ಉಪಯೋಗಿಸಿಕೊಂಡರು, "ಆತನ ಪ್ರತ್ಯಕ್ಷತೆಯ ವಾಗ್ದಾನವು ಏನಾಯಿತು?" ಎಂದು ಕೇಳಿದರು (3:4). ಸುಳ್ಳು ಬೋಧಕರ ವಿವರಣೆ ಏನೆಂದರೆ ಅಪೊಸ್ತಲರು ಸುಳ್ಳು ಹೇಳಿದ್ದಾರೆ. ಬರುವಂತದ್ದು ಇಲ್ಲವೇ ಇಲ್ಲ, ವಾಸ್ತವವಾಗಿ ಬರುವಂತದ್ದು. ಪೇತ್ರನ ವಿವರಣೆ ಭಿನ್ನವಾಗಿದೆ, ಒಂದು ವೇಳೆ ದೇವರು ತಡಮಾಡುವದಾದರೆ ಆತನು "ಆತನು ನಿಮ್ಮ ವಿಷಯದಲ್ಲಿ ತಾಳ್ಮೆ ಯುಳ್ಳವನಾಗಿದ್ದಾನೆ ಒಬ್ಬರಾದರೂ ನಾಶವಾಗದೆ ಎಲ್ಲರು ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಬಯಸುವವನಾಗಿದ್ದಾನೆ" (3:9). ವಚನ 14ರಲ್ಲಿ ಆತನು ಈ ವಿಚಾರಕ್ಕೆ ಸೇರಿಸುತ್ತಾನೆ. ಪೇತ್ರನು ಕರ್ತನ ಬರೋಣವಿಲ್ಲದೇ ಗತಿಸಿಹೋಗುವ

ಪ್ರತಿಯೊಂದು ದಿನಕ್ಕೆ ಕ್ರೈಸ್ತರು ದೇವರಿಗೆ ಕೃತಜ್ಞತೆಯುಳ್ಳವರಾಗಿರಬೇಕು. ನ್ಯಾಯತೀರ್ಪು ಮತ್ತು ನಿತ್ಯಜೀವ ತಡವಾದರೂ ಅವರು ಕೃತಜ್ಞತೆಯೊಂದಿಗೆ ನೋಡುವವರಾಗಿರಬೇಕು. ಆತನು ತಡಮಾಡುತ್ತಿದ್ದಾನೆಂದರೆ ಆತನ ತಾಳ್ಮೆ ಇನ್ನೂ ಕಾರ್ಯಮಾಡುತ್ತಿದೆ ಎಂದರ್ಥ. **ವಿಶ್ವಾಸಿಗಳು ಕರ್ತನ ತಾಳ್ಮೆಯನ್ನು ರಕ್ಷಣೆಯೆಂದು ಗೌರವಿಸಬೇಕು.** ಇದರ ಅರ್ಥ ದೇವರು ಅವರಿಗೆ ಒದಗಿಸುವ ಹಾಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಪಶ್ಚಾತ್ತಾಪಪಡಲು ಅವಕಾಶ ಎಂದರ್ಥ. "ಆತನ ಬರೋಣವು" ತೋರಿಬರುವಾಗ "ರಕ್ಷಣೆಯ" ಬಾಗಿಲು ಮುಚ್ಚಲ್ಪಡುತ್ತದೆ.

ಈ ಸನ್ನಿವೇಶದಲ್ಲಿ ಪೌಲನು ಬರೆದ ಎರಡು ಪತ್ರಗಳನ್ನು ಪ್ರಸ್ತಾಪಿಸುತ್ತಾನೆ. ಪೌಲನು ಬರೆದಿರುವ ಪ್ರಸ್ತಾಪಗಳನ್ನು ಹೊರತುಪಡಿಸಿ ಪೌಲನು ಲೇಖಕನು ಎಂಬುದಕ್ಕೆ ಇದೊಂದೆ ಹೊಸ ಒಡಂಬಡಿಕೆಯ ಉಲ್ಲೇಖವಾಗಿದೆ. ಅಪೊಸ್ತಲರ ಕೃತ್ಯಗಳಲ್ಲಿ ಇಂತಹ ಯಾವುದೇ ಉಲ್ಲೇಖಗಳಿಲ್ಲ ಎಂಬುದು ನಿರ್ದಿಷ್ಟವಾಗಿ ಗಮನಿಸಬಹುದಾದ ಅಂಶವಾಗಿದೆ. ಪೌಲನ ಪತ್ರಗಳು ಸಭೆಯ ಇತಿಹಾಸದಲ್ಲಿ ಎಷ್ಟು ವಿಶಾಲವಾಗಿ ನೇಯಲ್ಪಟ್ಟಿವೆ ಎಂದರೆ ಲೂಕನು ಇದನ್ನು ಹೇಗೆ ಗಮನಿಸದೇ ಹೋದನು ಎಂಬುದನ್ನು ಊಹಿಸುವದು ಕಠಿಣವಾಗಿದೆ. ಯಾವುದೇ ಕಾರಣವಿರಲಿ, ಅದು ಇಲ್ಲಿ ಪೇತ್ರನ ಎರಡನೆಯ ಪತ್ರದಲ್ಲಿದೆ, ಹೊಸ ಒಡಂಬಡಿಕೆಯಲ್ಲಿ ಪೌಲನ ಪತ್ರಗಳಲ್ಲಿ ಪೌಲನದಲ್ಲದ ಒಂದೇ ಉಲ್ಲೇಖವನ್ನು ನಾವು ಹೊಂದಿದ್ದೇವೆ.

ಇಲ್ಲಿಯೂ ಸಹ ಮುಖ್ಯವಿಚಾರದಲ್ಲಿ ಪೌಲನ ಪತ್ರಗಳ ಪ್ರಸ್ತಾಪ ಆಕಸ್ಮಿಕವಾಗಿದೆ. ಅವನು ಇದರಲ್ಲಿ ಆಸಕ್ತಿ ತೋರಿಸಿದ್ದಾನೆ ಏಕೆಂದರೆ ಸುಳ್ಳು ಬೋಧಕರು ಪೌಲನ ಸಂದೇಶಗಳನ್ನು ವಿಕಾರಗೊಳಿಸುತ್ತಿದ್ದಾರೆ. ಆತನು ತಾನು ಮತ್ತು ಪೌಲನು ಒಂದೇ ಸಂದೇಶವನ್ನು ಬೋಧಿಸಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಲು ಬಯಸುತ್ತಾನೆ. ಬಹುಶಃ ಪೇತ್ರನ ಮಾತುಗಳಿಂದ ಪವಿತ್ರಗ್ರಂಥದ ಮೇಲೆ ಉದ್ಭವಿಸುವ ಪ್ರಶ್ನೆಗಳಿಗೆ ನ್ಯಾಯಸಮ್ಮತವಾದ ಕಲ್ಪನೆಯನ್ನು ಮಾಡಿಕೊಳ್ಳಬಹುದು, ಆದರೆ ಪೇತ್ರನ ಮುಖ್ಯ ಆಸಕ್ತಿಗೆ ಇಂಥಹ ಸಂಗತಿಗಳು ಆಕಸ್ಮಿಕವಾಗಿವೆ.

ಪೇತ್ರನು ಸಹಜವಾಗಿ ಪೌಲನ ಪತ್ರಗಳನ್ನು ಒಂದು ಕಾರಣದಿಂದ ಉಲ್ಲೇಖಿಸುತ್ತಾನೆ: ಅದರಲ್ಲಿ ಆತನು ಕ್ರೈಸ್ತರಿಗೆ ಅದೇ ರೀತಿಯ ಬೋಧನೆಯನ್ನು ನೀಡಿದ್ದಾನೆ, ವಿಶೇಷವಾಗಿ "ಅವರು ಕರ್ತನ ತಾಳ್ಮೆಯನ್ನು ರಕ್ಷಣೆ ಎಂಬುದಾಗಿ ಗೌರವಿಸಬೇಕು" ಎಂದು ಹೇಳುತ್ತಾನೆ. ಪೌಲನು, **ತನಗೆ ಕೊಟ್ಟಿರುವ ಜ್ಞಾನಕ್ಕೆ ಅನುಸಾರವಾಗಿ** ಪೇತ್ರನು ಬೋಧಿಸಿದ ಇದೇ ಸಂದೇಶ ವನ್ನು ಬೋಧಿಸಿದನು. ಸಭೆಯ ಈ ಎರಡು ಸ್ತಂಭಗಳ ಮಧ್ಯದಲ್ಲಿ ವೈರತ್ವದ ಅಥವಾ ವಿರೋಧದ ಸುಳಿವು ಸಹ ಇಲ್ಲ.

ಓದುಗರು ಪೌಲನ ಪತ್ರದ ಯಾವ ಭಾಗವು ತನ್ನ ಅಂಶವನ್ನು ಬೆಂಬಲಿಸುತ್ತದೆ ಪೇತ್ರನು ಮನಸ್ಸಿನಲ್ಲಿ ತಿಳಿದಿರಬಹುದು ಎಂದು ಆಶ್ಚರ್ಯಪಡುತ್ತಾರೆ. ಅದು ಸರಳವಾದ ಪ್ರಶ್ನೆಯೇನಲ್ಲ. ಒಂದು ವೇಳೆ ಪೇತ್ರನ ಎರಡನೆಯ ಪತ್ರ 60ರ ದಶಕದ ಮಧ್ಯದಲ್ಲಿ ಬರೆಯಲ್ಪಟ್ಟಿದ್ದಲ್ಲಿ ಪೌಲನ ಅನೇಕ ಪತ್ರಗಳು ಆಗಲೇ ಅಸ್ತಿತ್ವದಲ್ಲಿದ್ದವು. ಹಾಗೂ, ಪೇತ್ರನು ಮತ್ತು ಆತನ ಓದುಗರಿಗೆ ಇವುಗಳಲ್ಲಿ ಯಾವ ಬರಹಗಳು ಚಿರಪರಿಚಿತವಾಗಿದ್ದವು ಎಂಬುದು ನಮಗೆ ಗೊತ್ತಿಲ್ಲ. ಒಂದು ಸಾಧ್ಯತೆ ಎಂದರೆ ರೋಮಾಪುರದವರಿಗೆ ಬರೆದ ಪತ್ರ ಪೇತ್ರನ ಭಾವನೆಗಳಂತೆಯೇ ಇವೆ. "ಆತನ ಅಪಾರವಾದ ದಯಾ ಸಹನ ಧೀರ್ಘಶಾಂತಿಗಳನ್ನು ಅಸಡ್ಡೆಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೇ?" (ರೋಮಾಪುರ 2:4).

ಒಂದು ವೇಳೆ ಪೇತ್ರನ ಎರಡನೆಯ ಪತ್ರಿಕೆ ಪ್ರಸ್ತಾವನೆಯಲ್ಲಿ ಸೂಚಿಸಿದ ಪ್ರಕಾರ 40ರ ಕೊನೆಯಲ್ಲಿ ಬರೆದಿದ್ದಲ್ಲಿ ಪೇತ್ರನು ಉಲ್ಲೇಖಿಸಿದೆ. ಪೌಲನ ಕೆಲವು ಪತ್ರಗಳು ಹೊಸ ಒಡಂಬಡಿಕೆಯಲ್ಲಿ ಸೇರಿಸಿರುವವುಗಳನ್ನು ಹೊರತು ಪಡಿಸಿದವುಗಳಾಗಿರಬಹುದು. ಇದು ವಿಷಯವಾಗಿದ್ದಲ್ಲಿ, ಪೇತ್ರನು ಹೇಳಲಿಚ್ಛಿಸಿದ ಕೆಲವೊಂದು ಹೇಳಿಕೆಗಳು ಪೌಲನ ಪತ್ರದಲ್ಲಿ ಕಾಣದೇ ಹೋಗಿರುವದಕ್ಕೆ ಇದೊಂದು ಕಾರಣವಾಗಿರಬಹುದು.

**ವಚನ 16.** ಇಷ್ಟಂತು ಖಂಡಿತ: ಪೇತ್ರನು ಮತ್ತು ಆತನ ಓದುಗರಿಗೆ ಪೌಲನು ಬರೆದ ಪತ್ರಗಳಿವೆ ಎಂಬುದು ಪರಸ್ಪರರಿಗೆ ತಿಳಿದದೆ. ಪೇತ್ರನು ಪೌಲನನ್ನು ಮಿತ್ರನು ಎಂಬುದಾಗಿ ಪರಿಗಣಿಸಿದ್ದಾನೆ. **ಎಲ್ಲಾ ಪತ್ರಿಕಗಳಲ್ಲಿಯೂ** ಪೌಲನು ಪೇತ್ರನು ಸಂಬೋಧಿಸಿದ ಅದೇ ಸಭೆಗಳಿಗೆ **ಈ ಸಂಗತಿಗಳನ್ನು** ಬರೆದಿದ್ದಾನೆ. ಸಭೆಗಳ ಮೇಲೆ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿದ್ದ ಸುಳ್ಳು ಬೋಧಕರನ್ನು ಎದುರಿಸುವಲ್ಲಿ ಪೇತ್ರ ಮತ್ತು ಪೌಲ ಜೊತೆಯಾಗಿ ನಿಂತುಕೊಂಡಿದ್ದಾರೆ. ನಿರ್ಧಿಷ್ಟವಾಗಿ ಕರ್ತನ ಬರೋಣದ ವಿಳಂಬದ ವಿಷಯದಲ್ಲಿ ಜೊತೆಯಾಗಿದ್ದಾರೆ. ಇಬ್ಬರು ವಿಳಂಬ ಎಂದರೆ ಇನ್ನೂ ಪಶ್ಚಾತ್ತಾಪ ಪಡದೆ ಇರುವವರ "ರಕ್ಷಣೆ" ಎಂದು ಬೋಧಿಸಿದ್ದಾರೆ.

ಸುಳ್ಳು ಬೋಧಕರು, ತಮ್ಮ ಶ್ರೇಷ್ಟಜ್ಞಾನದೊಂದಿಗೂ **ಬೋಧಿಸದೆ ಮತ್ತು ಅಸ್ಥಿರವಾಗಿರುವವರು ಆಗಿದ್ದಾರೆ.** ಅವರು ಸಂಗತಿಗಳನ್ನು ತಿಳಿದುಕೊಳ್ಳುವಲ್ಲಿ ಕಷ್ಟಪಡುತ್ತಾರೆ ಮತ್ತು ಅವರು ಬೇರೆ ವಾಕ್ಯಭಾಗಗಳಿಗೆ ಮಾಡಿದಂತೆ ಪೌಲನ ಪತ್ರಗಳಿಗೆ ವಿಕಾರರೂಪವನ್ನು ನೀಡಿದ್ದಾರೆ. "ತಿಳಿದುಕೊಳ್ಳಲು ಕಠಿಣವಾಗಿರುವದು" *(dusnoētos)* ಇದರ ಅನುವಾದ ಹೊಸ ಒಡಂಬಡಿಕೆಯಲ್ಲಿ ಮಾತ್ರ ಕಂಡುಬರುತ್ತದೆ. ಹೊಸ ಒಡಂಬಡಿಕೆಯ ಹೊರಗೆ ಸಹ ಇದು ವಿರಳವಾದ ಪದವಾಗಿದೆ: ಆದರೆ ಎರಡನೆಯ ಶತಮಾನದ *Shepherd of Hermas* ಕೃತಿಯಲ್ಲಿ ಇದನ್ನು ಲೇಖಕನ ದರ್ಶನವನ್ನು ತಿಳಿದುಕೊಳ್ಳುವದು ಮತ್ತು ವಿವರಿಸುವದು ಕಠಿಣವಾಗಿದೆ ಎಂದು ಹೇಳುವಲ್ಲಿ ಉಪಯೋಗಿಸಲಾಗಿದೆ.[10] ಪೇತ್ರನು, ಬಹುಶಃ ಯಾವುದೇ ದರ್ಶನವನ್ನು ಉಲ್ಲೇಖಿಸಿಲ್ಲ, ಆದರೆ ಆತನು ಪೌಲನು ಬರೆದ ಕೆಲವು ಸಂಗತಿಗಳು ಅರ್ಥಮಾಡಿಕೊಳ್ಳಲು ಕಠಿಣವಾಗಿವೆ ಮತ್ತು ಪರಿಣಾಮಕಾರಿಯಾಗಿ ವಿರೂಪಗೊಳಿಸಲಾಗಿವೆ ಎಂದು ದೃಢಪಡಿಸುತ್ತಾನೆ. ಪೌಲನ ಬರಹಗಳಲ್ಲಿ "ಉಳಿದ ವಾಕ್ಯಭಾಗಗಳಲ್ಲಿ" ತಿಳಿದುಕೊಳ್ಳಲು ಕಠಿಣವಾದ ಸಂಗತಿಗಳು ಭಾಷೆಯ ಕ್ಲಿಷ್ಟತೆಗೆ ಸಾಕ್ಷಿಯಾಗಿವೆ.

ಸೈದ್ಧಾಂತಿಕವಾಗಿ, ದೇವರು ತನ್ನ ಸೃಷ್ಟಿಯೊಂದಿಗೆ ಸಂಪರ್ಕಿಸಲು ಭಾಷೆಯನ್ನು ಬಿಟ್ಟು ಬೇರೆ ವಿಧಾನವನ್ನು ಉಪಯೋಗಿಸಬಹುದಿತ್ತು. ಆತನು ನೇರವಾಗಿ ಮಾನವರ ಹೃದಯದಲ್ಲಿ ಪ್ರಕಟನೆಗಳನ್ನು ಹಾಕಬಹುದಿತ್ತು. ಆತನು ನಮ್ಮನ್ನು ಆತನು ಯಾರಾಗಿದ್ದಾನೆ, ಆತನು ತನ್ನ ಜನರಿಂದ ಏನನ್ನು ಅಪೇಕ್ಷಿಸುತ್ತಾನೆ, ಕ್ರಿಸ್ತನ ವಿಶಿಷ್ಟತೆ ಮತ್ತು ಇನ್ನೂ ಅನೇಕ ಸಂಗತಿಗಳಿಂದ ತಪ್ಪಿಸಿಕೊಳ್ಳಲಾರದ ಭಾವನೆಯನ್ನು ನಮ್ಮಲ್ಲಿ ಹಾಕಬಹುದಿತ್ತು. ಆತನು ತನ್ನನ್ನು ತಾನು ಈ ರೀತಿಯಾಗಿ ಪ್ರಕಟಿಸಿಕೊಳ್ಳಬಹುದಿತ್ತು, ಆದರೆ ಬದಲಾಗಿ ಆತನು ಬೇರೆ ಮಾರ್ಗವನ್ನು ಆಯ್ದುಕೊಂಡಿದ್ದಾನೆ. ದೇವರು ತನ್ನನ್ನು ತಾನು ತನ್ನ ಜನರಿಗೆ ಪ್ರಕಟಿಸಿಕೊಳ್ಳಲು ಭಾಷೆಯನ್ನು ಆಯ್ದುಕೊಂಡಿದ್ದಾನೆ. ಭಾಷೆಯು ಮಾಧ್ಯಮವಾಗಿರುವಾಗ, ಅದು ತಪ್ಪು ಅಭಿಪ್ರಾಯವನ್ನು ನೀಡುವ ಅಥವಾ ನೀಡಬಹುದಾದ ಸಾಧ್ಯತೆ ಇದೆ. ಅದರೊಟ್ಟಿದೆ ಕೆಲವರು ಅದನ್ನು ವಿಕಾರಗೊಳಿಸುವ ಒಲವನ್ನು ಹೊಂದಿರುವರು ಇದ್ದಾರೆ.

ಭಾಷೆಯ ಕ್ಲಿಷ್ಟತೆಯಲ್ಲಿ, ಕೆಲವರು ಸತ್ಯವನ್ನು ತಿಳಿದುಕೊಳ್ಳುವದನ್ನು ಕೈ ಬಿಡುತ್ತಾರೆ. ಯಾರಿಗೆ ಸಿದ್ಧಾಂತಗಳು ಅನುಕೂಲಕರವಾಗಿಲ್ಲವೋ ಅವರು ಕ್ರೈಸ್ತ ನಂಬಿಕೆಯ ಅರಿಕೆಯ ಸ್ವರೂಪದ ಮೇಲೆ ಪರ್ಯಾಲೋಚನೆ ಮಾಡುತ್ತಾರೆ. ಕ್ರೈಸ್ತತ್ವ ಖಂಡಿತವಾದ ಮಾತುಗಳಿಂದ ಪ್ರಾರಂಭವಾಗುತ್ತದೆ ಮತ್ತು ಕೊನೆಗೊಳ್ಳುತ್ತದೆ: ದೇವರು ಸೃಷ್ಟಿ ಕರ್ತನಾಗಿದ್ದಾನೆ, ಯೇಸು ಕ್ರಿಸ್ತನ ಮೆಸ್ಸೀಯನಾಗಿದ್ದಾನೆ. ಯೇಸು ನಮ್ಮ ಬದಲಾಗಿ ಕ್ರೂಜೆಯ ಮೇಲೆ ತನ್ನ ಪ್ರಾಣವನ್ನು ನೀಡಿದನು. ಅವನು ನಿರಾಶಾದಾಯಕವಾಗಿ ಕ್ಲಿಷ್ಟವಾಗಿಲ್ಲ. "ಸಂಗತಿಗಳು ತಿಳಿದುಕೊಳ್ಳಲು ಕಠಿಣವಾಗಿವೆ" ಈ ಹೇಳಿಕೆಯು ಕ್ಷುಲಕವಾಗಿದೆ ಎಂದು ಸರಳವಾಗಿ ಅಲಕ್ಷಿಸಬಹುದಾಗಿದೆ. ಪೇತ್ರನ ಮಾತುಗಳಲ್ಲಿ, ಪರ್ಯಾಯದ ವಿಧದಲ್ಲಿ, ವಿಶ್ವಾಸಿಗಳನ್ನು ವಿದ್ಯಾರ್ಥಿಗಳು ಎಂದು ಕರೆನೀಡುತ್ತಾನೆ. ಪ್ರಾಮಾಣಿಕ ಕ್ರೈಸ್ತರು "ತಿಳಿದುಕೊಳ್ಳಲು ಕಠಿಣವಾದವುಗಳನ್ನು" "ಬೋಧಿಸದವುಗಳನ್ನು ಮತ್ತು ಅಸ್ಥಿರವಾಗಿರುವವುಗಳನ್ನು" ಬದಿಗಿರಿಸುವ ಮಟ್ಟಿಗೆ ಇರುತ್ತಾರೆ

**ಅಲ್ಲದೆ ತಮ್ಮ ಸ್ವನಾಶಕ್ಕೆ** "ವಿರೂಪ" ಗೊಳಿಸುತ್ತಾರೆ ಎಂದು ಹೇಳಬಹುದು.

ಸುಳ್ಳು ಬೋಧಕರು "ವಿರೂಪಗೊಳಿಸುತ್ತಾರೆ" ಎಂಬ ಪೇತ್ರನ ಹೇಳಿಕೆ, "ಅವರು ಉಳಿದ ವಾಕ್ಯಭಾಗಗಳಿಗೆ ಮಾಡುವಂತೆ" ಎಂದು ಪೌಲನ ಪತ್ರಗಳಲ್ಲಿ ಪ್ರಾಮುಖ್ಯವಾದ ಪ್ರಶ್ನೆಯನ್ನು ಉದ್ಭವಿಸುತ್ತದೆ. ವಾಕ್ಯಭಾಗ *(graphē)* ಎಂಬುದಕ್ಕೆ ಗ್ರೀಕ್ ಪದ ವಿಶಿಷ್ಟವಾಗಿಲ್ಲ; ಅದು ಯಾವುದೇ ಬರಹದಲ್ಲಿ ಉಲ್ಲೇಖಿಸಬಹುದಾಗಿದೆ. ಸಮಯವು ಕಳೆದ ಹಾಗೆ ಅದು ತಾಂತ್ರಿಕ ಪದವಾಯಿತು. ಮೊದಲು ಯೆಹೂದ್ಯರು ನಂತರ ಕ್ರೈಸ್ತರು ತಮ್ಮ ಕೆಲವು ಪ್ರಾಚೀನ ದಾಖಲೆಗಳನ್ನು ಮಾನವನ ಉತ್ಪಾದನೆಗಿಂತ ಹೆಚ್ಚಿನವು ಯೋಚಿಸಲು ಪ್ರಾರಂಭಿಸಿದರು. ಅವರು ದೇವರಾತ್ಮನು ದೇವರು ಆಯ್ದುಕೊಂಡ ಜನರ ಮೂಲಕ ಕಾರ್ಯಮಾಡಿದನು ಇದರಿಂದಾಗಿ ಅವರು ದೇವರ ವಾಕ್ಯವನ್ನು ಬರೆದರು ಇದನ್ನು ಹೀಗೂ ಹೇಳಬಹುದು ಲೇಖಕರು ದೇವರಿಂದ ಪ್ರೇರೇಪಿಸಲ್ಪಟ್ಟರು. ಪ್ರೇರೇಪಣೆ ಎಂದರೆ ಬರಹಗಳು ಪವಿತ್ರಾತ್ಮನ ಬಲದಿಂದ ತುಂಬಿದ್ದವು ಇದರಿಂದಾಗಿ ವಾಕ್ಯಗಳು ಜನರಲ್ಲಿ ಕಾರ್ಯಮಾಡುವಾಗ ದೈವೀಕ ಫಲಗಳನ್ನು ನೀಡುತ್ತಿದ್ದವು. "ಬರಹಗಳು" ಅಥವಾ "ವಾಕ್ಯಭಾಗಗಳು" ಪ್ರೇರೇಪಣೆ ಹೊಂದಿದ ಬರಹಗಳಿಗೆ ನೀಡುವ ತಾಂತ್ರಿಕ ಪದನಾಮಗಳಾದವು. ದೈವಿಕ ಜನರು ಇದಕ್ಕೆ ಹೆಚ್ಚಿನ ಗೌರವವನ್ನು ನೀಡುತ್ತಿದ್ದರು. ಅವರು ದೇವರಿಂದ ಬಂದವುಗಳು ಎಂದು ಪರಿಗಣಿಸುತ್ತಿದ್ದರು ಮತ್ತು ವಿಚಿತ್ರವೇನೆಂದರೆ ಅವು ಆತನ ಪದಗಳು ಮತ್ತು ಮಾನವರಾದ ಲೇಖಕರ ಪದಗಳು.

ಹೊಸ ಒಡಂಬಡಿಕೆಯು ಅಸ್ತಿತ್ವದಲ್ಲಿ ಬರುವಾಗ "ವಾಕ್ಯಭಾಗ" ಎಂಬುದು ಇಂದಿನ ಕ್ರೈಸ್ತರಿಗಿಂತ ಆಗ ಹೆಚ್ಚು ಸಮಂಜಸವಾದ ಪದವಾಗಿತ್ತು. "ವಾಕ್ಯಭಾಗಗಳು" ದೇವಾಲಯದ ಸಭೆಯಲ್ಲಿ ಓದುವದಕ್ಕೆ ಯೋಗ್ಯವಾದ ಬರಹಗಳಾಗಿದ್ದವು. ನಿರ್ದಿಷ್ಟವಾಗಿ ಈ ವರ್ಗಕ್ಕೆ ಸೇರಿದ "ವಾಕ್ಯಭಾಗಗಳು" ಮತ್ತು ಈ ವರ್ಗಕ್ಕೆ ಸೇರದವುಗಳು ಎಂಬುದು ಖಚಿತವಾಗಿರಲಿಲ್ಲ. ಹಾಗೂ ಖಚಿತವಾಗಿರದೇ ಇರುವ ಪ್ರೆರೆಪಿಸಲ್ಪಟ್ಟ ಪುಸ್ತಕಗಳ ಕೃತಿಗಳು ಸಮಸ್ಯೆಗೆ ಕಾರಣವಾದವು. ಪ್ರಾಚೀನ ದಾಖಲೆಗಳಲ್ಲಿ ಯಾವ ಕೃತಿಗಳು ವಾಕ್ಯಭಾಗದಲ್ಲಿ ಬರಬೇಕು ಎಂಬುದನ್ನು ನಿರ್ಧರಿಸುವವರು ಯಾರು? ಯಾವ ಪುಸ್ತಕಗಳು ಪ್ರೇರೆಪಿಸಿದ ಅದೇ ದೇವರು ತನ್ನ ಜನರ ಮೂಲಕ ದೇವರಿಂದ ಬಂದ ಪುಸಕ್ತಗಳೆಂದು ನಿರ್ಧಿಷ್ಟವಾದ ಸಂಖ್ಯೆಯ ಪುಸ್ತಕಗಳನ್ನು ನೀಡಿದನು ಎಂದು ಕ್ರೈಸ್ತರ ನಂಬಿಕೆಯಾಗಿದೆ. ಈ ಪುಸ್ತಕಗಳನ್ನು ಅಳತೆಮಾಡಿ ದೇವರ ಒದಗಿಸುವಿಕೆಯ ಇರುವವುಗಳನ್ನು ಪ್ರೇರೇಪಿಸಲ್ಪಟ್ಟವುಗಳು ಎಂದು ನಿರ್ಧರಿಸಿ "ಪವಿತ್ರ ಗ್ರಂಥ" ಎಂದು ಕರೆಯಲ್ಪಟ್ಟವು.

ಯೇಸುವಿನ ಸಮಯದಲ್ಲಿ ಇಬ್ರಿಯ ಸತ್ಯವೇದದ ಸಾಮಾನ್ಯ ನಿಯಮ ನಿರ್ಧಿಷ್ಟಪಡಿಸಲಾಗಿತ್ತು ಎಂದು ತೋರುತ್ತದೆ (ಲೂಕ 24:44). ಕ್ರಮಪಡಿಸಿ ಮತ್ತು ವಿಭಿನ್ನವಾಗಿ ಎಣಿಕೆ ಮಾಡಿದ್ದಾಗ್ಯೂ, ಅದರ ಪುಸ್ತಕಗಳು ಹಳೆ ಒಡಂಬಡಿಕೆಯಲ್ಲಿ ಮೂತ್ತೊಂಬತ್ತು. ಇದಕ್ಕೆ ವ್ಯತಿರಿಕ್ತವಾಗಿ, ಸಭೆಯ ಪ್ರಾರಂಭದ ದಿನಗಳಲ್ಲಿ, ಹೊ, ಒಡಂಬಡಿಕೆಯ ಪುಸ್ತಕಗಳು ಬರೆಯುವ ಪ್ರಕ್ರಿಯೆಯ ಹಂತದಲ್ಲಿ ಮತ್ತು ಸಂಗ್ರಹಿಸುವ ಹಂತದಲ್ಲಿದ್ದವು. ಪೇತ್ರನು ಪೌಲನ ಪತ್ರವನ್ನು "ಉಳಿದ ವಾಕ್ಯಭಾಗಗಳ" ಅದೇ ವರ್ಗದಲ್ಲಿಡುವಾಗ ಅವನು ಬಹುಶಃ ಹಳೆ ಒಡಂಬಡಿಕೆ ಎಂದು ತಿಳಿದಿರಬಹುದು. ಆತನು ಮನಸ್ಸಿನಲ್ಲಿ ಅಪೊಸ್ತಲರ ಇತರ ದಾಖಲೆಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೋ ಏನೋ ಎಂಬುದು ಖಚಿತವಾಗಿಲ್ಲ.

ಪೇತ್ರನು ಪೌಲನ ಪತ್ರಗಳು ಪ್ರೇರೇಪಣೆಹೊಂದಿದವುಗಳು ಎಂದು ಸೂಚಿಸುತ್ತಾನೆ. ಅವರು ಸಭೆಗಳಿಗೆ ಅಧಿಕಾರಯುತವಾಗಿದ್ದವು. ಪೇತ್ರನ ಮರಣಾ ನಂತರ ಒಂದು ಅಥವಾ ಎರಡು ಶತಮಾನಗಳಲ್ಲಿ, ದೇವರಾತ್ಮನು ತನ್ನ ಸಭೆಗಳಲ್ಲಿ ಪೌಲನ ಹದಿಮೂರು ಪತ್ರಗಳು ಮತ್ತು ಪೇತ್ರನ ಎರಡು ಪತ್ರಗಳನ್ನು ಒಳಗೊಂಡು ನಿರ್ಧಿಷ್ಟ ಸಂಖ್ಯೆಯ ಪುಸ್ತಕಗಳನ್ನು ಹೊರತರಲು ಕಾರ್ಯಮಾಡಿದನು. ಅದು ಪವಿತ್ರಗ್ರಂಥದ ಅನುಕ್ರಮವಾಯಿತು ಸಭೆಯು ಏನನ್ನು ನಂಬಬೇಕು, ಅದು ಹೇಗೆ ಜೀವಿಸಬೇಕು ಮತ್ತು ಅದು ಏನಾಗಬೇಕು ಎಂಬುದಕ್ಕೆ

ಈ ಪುಸ್ತಕಗಳು ನಿಯಮಗಳಾದವು. ಆ ಸಮಯದಲ್ಲಿ ಈ ಇಪ್ಪತ್ತೇಳು ಪುಸ್ತಕಗಳು ಹೊಸ ಒಡಂಬಡಿಕೆಯ ಅರವತ್ತಾರು ಪುಸ್ತಕಗಳು ಎಂಬುದು ಉತ್ತಮವಾದ ಕಾರಣವಾಯಿತು.

## ಅಳವಡಿಸುವಿಕೆ

### ಕರ್ತನ ದಿನಕ್ಕಾಗಿ ಆತುರಪಡುವದು (3:1-16)

ಸತ್ಯವೇದವು ಕೆಳಗಿನ ಅಂಶಗಳ ಸಾರಾಂಶವಾಗಿದೆ ಎಂದು ಹೇಳಲಾಗುತ್ತದೆ: (1) ಹಳೆ ಒಡಂಬಡಿಕೆಯ ಮುಖ್ಯ ವಿಷಯ "ವಿಶಿಷ್ಟವ್ಯಕ್ತಿ ಬರಲಿಕ್ಕಿದ್ದಾನೆ." (2) ನಾಲ್ಕು ಸುವಾರ್ತೆಗಳ ಮುಖ್ಯ ವಿಷಯ "ವಿಶಿಷ್ಟವ್ಯಕ್ತಿ ಇಲ್ಲಿದ್ದಾನೆ." (3) ಹೊಸ ಒಡಂಬಡಿಕೆಯ ಉಳಿದ ಭಾಗದ ಮುಖ್ಯವಿಷಯ "ವಿಶಿಷ್ಟವ್ಯಕ್ತಿ ತಿರುಗಿ ಬರಲಿಕ್ಕಿದ್ದಾನೆ" ಪೇತ್ರನು ತನ್ನ ಎರಡನೆಯ ಪತ್ರವನ್ನು ಬರೆದಾಗ ಆತನು ದಶಕ ಅಥವಾ ಇನ್ನೂ ಹೆಚ್ಚು ಕಾಲ ಕ್ರೈಸ್ತರಾಗಿರುವವರನ್ನು ಸಂಬೋಧಿಸುತ್ತಾನೆ. ಅವರು ಕರ್ತನು ತಿರುಗಿ ಬರುತ್ತಾನೆ ಎಂಬುದನ್ನು ತಿಳಿದುಕೊಂಡಿದ್ದರು. ವರ್ಷಗಳು ಉರುಳಿದವು ಜೀವನವು ಹೇಗಿತ್ತೋ ಹಾಗೆಯೇ ಸಾಗಿತ್ತು. ಪೇತ್ರನು ತನ್ನ ಓದುಗರಿಗೆ ತಾವು ಆಲಿಸಿರುವದು ಸತ್ಯ ಎಂಬ ಮರುಭರವಸೆಯನ್ನು ನೀಡುವದರ ಮೂಲಕ ಈ ಪತ್ರವನ್ನು ಮುಕ್ತಾಯಗೊಳಿಸುತ್ತಾನೆ: ಕರ್ತನು ತಿರುಗಿ ಬರುತ್ತಾನೆ, ಅವರು ಈ ತತ್ವಗಳನ್ನು ಅರಿತುಕೊಂಡಿದ್ದಾರೆ ಎಂಬುದನ್ನು ಪೇತ್ರನು ಖಚಿತಪಡಿಸಿಕೊಳ್ಳಲು ಇಚ್ಛಿಸಿದ್ದನು.

(1) *ಲೋಕವು ದೇವರು ನೇಮಿಸಿದ ಅಂತ್ಯದೆಡೆಗೆ ಚಲಿಸುತ್ತಿದೆ ಎಂದು ನಂಬುವವರನ್ನು ಯಾವಾಗಲೂ ಹಾಸ್ಯಮಾಡುವ ಸಂದೇಹವಾದಿಗಳು ಇದ್ದಾರೆ.* ಕ್ರೈಸ್ತರ ಮತ್ತು ಅವಿಶ್ವಾಸಿಗಳ ಜಾಗತಿಕ ದೃಷ್ಟಿಕೋನದಲ್ಲಿ ಇರುವ ಒಂದು ವ್ಯತ್ಯಾಸವೆಂದರೆ, ಕ್ರೈಸ್ತರು ಲೋಕವೂ ಎಲ್ಲೋ ಒಂದೆಡೆಗೆ ಚಲಿಸುತ್ತಿದೆ, ಇದು ಅಂತ್ಯದೆಡೆಗೆ ಅವಸರದಿಂದ ಹೋಗುತ್ತಿದೆ, ಆ ಸಮಯದಲ್ಲಿ ನಾವೆಲ್ಲರೂ ನ್ಯಾಯಾಸನದ ಮುಂದೆ ನಿಂತುಕೊಳ್ಳುತ್ತೇವೆ ಮತ್ತು ಲೆಕ್ಕವನ್ನು ಕೊಡುತ್ತೇವೆ (2 ಕೊರಿಂಥ 5:10). ಅವಿಶ್ವಾಸಿಗಳು ತಾವು ನೋಡುತ್ತಿರುವ ನಿಸರ್ಗದ ಭೌದ್ಧಿಕ ಪ್ರಕ್ರಿಯೆಯಿಂದಾಚೆಗೆ ಏನೂ ಇಲ್ಲ ಎಂದು ನಂಬುತ್ತಾರೆ, ಇವೆಲ್ಲವೂ ಸಂಭವಿಸುವಂತವುಗಳಾಗಿವೆ. ಲೋಕವು ಬಲವಾದ ಹೊಡೆತ ಅಥವಾ ರೋಧನದೊಂದಿಗೆ ಅಂತ್ಯವಾಗುತ್ತದೆ; ಹಾಗಾಗುವಾಗ ಅದು ಏನು ಇಲ್ಲದಂತಾಗುತ್ತದೆ. ಅವಿಶ್ವಾಸಿಗಳಿಗೆ, ಮಾನವ ಜೀವಿತ ಮತ್ತು ಭೌದ್ಧಿಕ ಲೋಕ ಒಂದು ರೀತಿಯಲ್ಲಿ ಸೃಷ್ಟಿಯ ಆಕಸ್ಮಿಕಗಳಾಗಿವೆ. ಅದಕ್ಕೆ ಯಾವುದೇ ರಚನೆ ಅಥವಾ ಯೋಜನೆಯಿಲ್ಲ. ಅವರಿಗೆ, ಪೌಲನು ಹೇಳುವಂತೆ "ತಿನ್ನೋಣ ಕುಡಿಯೋಣ, ನಾಳೆ ಸಾಯುತ್ತೇವಲ್ಲಾ" ಎಂದು ಜನರು ಮೋಸಹೋಗುತ್ತಾರೆ (1 ಕೊರಿಂಥ 15:32). ಆದಾಗ್ಯೂ ಯಾವ ತಪ್ಪನ್ನು ಮಾಡುವದಿಲ್ಲ. ಕ್ರೈಸ್ತರಿಗೆ "ಕುರುಡು ನಂಬಿಕೆಯಿದೆ" ಮತ್ತು ಸಂದೇಹವಾದಿಗಳಿಗೆ ನಂಬಿಕೆಯಿಲ್ಲ ಎಂದು ಅರ್ಥವಲ್ಲ. ವಿಶ್ವಾಸಿಗಳು ತಮ್ಮ ಸಂದೇಹದೊಂದಿಗೆ ತಮ್ಮ ನಿತ್ಯತ್ವವನ್ನು ಹೊಂದಿಕೊಳ್ಳುತ್ತಾರೆ. ಕ್ರೈಸ್ತರು ದೇವರು ತನ್ನನ್ನು ಪ್ರಕಟಿಸಿಕೊಂಡಿದ್ದಾನೆ ಎಂಬುದನ್ನು ನಂಬುತ್ತಾರೆ. ಇದಷ್ಟೆ ಅಲ್ಲ, ದೇವರು ಈ ಲೋಕಕ್ಕೆ ಯೇಸು ಕ್ರಿಸ್ತನಲ್ಲಿ ವಿಮೋಚಕನಾಗಿ ಬಂದಿದ್ದಾನೆ ಎಂದು ನಂಬುವದಕ್ಕೆ ಕಾರಣಗಳಿವೆ. ಹಾಸ್ಯಮಾಡುವ ಸಂದೇಹ ವಾದಿಗಳು ಯಾವಾಗಲೂ ಇದ್ದಾರೆ. ಪೇತ್ರನು ತನ್ನ ಓದುಗರು ಇದನ್ನು ನಿರೀಕ್ಷಿಸಬೇಕು ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಬಯಸುತ್ತಾನೆ. ಸಂದೇಹ ಮತ್ತು ಹಾಸ್ಯ ಯೇಸು ಸತ್ತವರೊಳಗಿಂದ ಎದ್ದು ಬಂದನು ಮತ್ತು ದೇವರ ಬಲಗಡೆಯಲ್ಲಿ ಕುಳಿತು ಆಳುತ್ತಿದ್ದಾನೆ ಎಂಬ ಸತ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ಆತನು ತಿರುಗಿ ಬರಲಿಕ್ಕಿದ್ದಾನೆ ಎಂಬ ಭರವಸೆಯನ್ನು ಬದಲಾಯಿಸಲು ಸಾಧ್ಯವಿಲ್ಲ.

(2) *ದೇವರು ದೀರ್ಘಕಾಲದ ಕಷ್ಟ ಮತ್ತು ತಾಳ್ಮೆಯ ಇತಿಹಾಸವನ್ನು ಹೊಂದಿದ್ದಾನೆ; ಆದರೆ ಅಂತ್ಯದಲ್ಲಿ ಆತನು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಾನೆ.* ಪೇತ್ರನು ಜಲಪ್ರಳಯದ

ಕಾಲದಲ್ಲಿದ್ದ ಕ್ರೈಸ್ತರನ್ನು ಸೂಚಿಸುತ್ತಾನೆ. ಪೇತ್ರನು ತನ್ನ ಚಿಕ್ಕ ಪತ್ರಗಳಲ್ಲಿ ನೋಹನನ್ನು ಮೂರು ಸಾರಿ ಮರುಜ್ಞಾಪಿಸಿಕೊಳ್ಳುತ್ತಾನೆ (1 ಪೇತ್ರ 3:20; 2 ಪೇತ್ರ 2:5; 3:5, 6). ಪ್ರತಿಯೊಂದು ಘಟನೆಗಳಲ್ಲಿ ದೇವರು ಪಾಪಕ್ಕೆ ಲೋಕವನ್ನು ಜವಾಬ್ದಾರರನ್ನಾಗಿ ಮಾಡುತ್ತಾನೆ ಎಂಬುದನ್ನು ಉಲ್ಲೇಖಿಸುತ್ತಾನೆ. ಕೊನೆಯ ಉದಾಹರಣೆಯಲ್ಲಿ (3:5, 6) ಆತನು ವಿಶ್ವಾಸಿಗಳಿಗೆ ದೇವರು ನ್ಯಾಯತೀರ್ಪಿನ ದಿನ ಇಂಥದೆಂದು ಪ್ರಕಟಿಸಿ ಮುಂದೆ ಅದನ್ನು ನಡೆಸುವದಿಲ್ಲ ಎಂಬುದನ್ನು ಜ್ಞಾಪಿಸುತ್ತಿದ್ದಾನೆ. ನೋಹನು "ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು" (ಇಬ್ರಿಯ 11:7). ಲೋಕವು ಅವನೆಡೆಗೆ ಲಕ್ಷ್ಯಕೊಡಲಿಲ್ಲ. ವರ್ಷಗಳು ಗತಿಸಿದವು, ಆದರೆ ಕೊನೆಯಲ್ಲಿ ದೇವರು ತಾನು ಪ್ರಕಟಿಸಿದ ನ್ಯಾಯತೀರ್ಪನ್ನು ಲೋಕಕ್ಕೆ ತಂದನು.

ಪೇತ್ರನು ಇನ್ನೂ ಅನೇಕ ಉದಾಹರಣೆಗಳನ್ನು ನೀಡಬಹುದಿತ್ತು. ಯೆರೆಮೀಯನು ದೇವರು ಜನಾಂಗಗಳಿಗೆ ನ್ಯಾಯ ತೀರಿಸುವನು ಎಂದು ಯೂದಾಯ ಮತ್ತು ಯೆರೂಸಲೇಮಿನ ಜನರನ್ನು ಎಚ್ಚರಿಸಿದನು. ಕೆಲವರು ಆಲಿಸಿದನು. ಜನರಿಗೆ ಪಶ್ಚಾತ್ತಾಪಪಡಲು ಸಾಕಷ್ಟು ಸಮಯವಿತ್ತು. ಬದಲಾಗಿ ಅವರು ಪ್ರವಾದಿಯನ್ನು ಹಾಸ್ಯಮಾಡಿದನು. ಯೆರೆಮೀಯನು ನಿರಾಶೆಯಿಂದ ಹೊರಟುಹೋಗಬೇಕೆಂದಿದ್ದನು (ಯೆರಮೀಯ 20:7), ಕೊನೆಗೆ, ದೇವರಿಗೆ ನ್ಯಾಯತೀರಿಸಿದನು. ಯೆರೂಸಲೇಮ ನಾಶವಾಯಿತು; ಜನರೊಂದಿಗೆ ತಾಳ್ಮೆ ಯಿಂದ ವರ್ತಿಸುತ್ತಾನೆ, ಆದರೆ ಆತನ ವಾಗ್ದಾನಗಳು ಖಂಡಿತವಾಗಿ ನೆರವೇರುತ್ತವೆ.

(3) *ದೇವರ ನ್ಯಾಯತೀರ್ಪಿನ ದಿನದಂದು ಮಾನವನ ಎಲ್ಲಾ ಆಡಂಬರ ಮತ್ತು ವೈಭವ ಬಿದ್ದು ಹೋಗುತ್ತದೆ.* ಅವಿಶ್ವಾಸಿಗಳಿಗೆ ಅನೇಕಾವರ್ತಿ ಈ ವಿಚಿತ್ರವಾದ ಅಸ್ಥಿರತೆ ಇರುತ್ತದೆ. ಮೊದಲನೆಯದಾಗಿ ಅವರು ಮಾನವ ಜೀವಿತವು ಜೀವಶಾಸ್ತ್ರವು ವಿಕಾಸನದ ಸರಣಿಯ ಅಂತ್ಯವಾಗಿದೆ ಅದಕ್ಕಿಂತ ಹೆಚ್ಚಿನದೇನು ಇಲ್ಲ ಎಂದು ಭಾವಿಸುತ್ತಾರೆ. ಮಾನವನಾಗಿರುವದು ಒಂದು ಮಿಡತೆ ಒಂದು ದೊಡ್ಡ ವಾನಾರಕ್ಕಿಂತ ವಿಭಿನ್ನವೇನಲ್ಲ. ತರ್ಕಬದ್ಧವಾಗಿ, ವ್ಯಕ್ತಿಯ ಮರಣವು ಹೊಲದಲ್ಲಿರುವ ಇಲ್ಯ ಮರಣಕ್ಕಿಂತ ಹೆಚ್ಚಿನದೇನಲ್ಲ. ಒಬ್ಬ ವಾಸ್ತವವಾದಿ ವೀಕ್ಷಕ ಹೀಗೆ ವಾದಿಸುತ್ತಾನೆ, ಅವಿಶ್ವಾಸಿಗಳ ಪೂರ್ವಕಲ್ಪನೆಯಲ್ಲಿ ಮಾನವ ಜೀವಿತವು ಭೂಮಿಯ ಮೇಲೆ ಒಂದು ರೇಗವಿದ್ದಂತೆ ವಾತಾವರಣವನ್ನು ಏರುಪೇಕರು ಮಾಡುತ್ತದೆ ಮತ್ತು ಇತರ ಜೀವಿತಗಳನ್ನು ನಾಶಮಾಡುತ್ತದೆ. ಅವರಿಲ್ಲದೇ ಇದ್ದರೆ ಭೂಮಿಯು ಉತ್ತಮವಾಗಿರುತಿತ್ತು.

ಒಂದು ವೇಳೆ ಅವಿಶ್ವಾಸಿಗಳು ಸರಿಯಾಗಿದ್ದಲ್ಲಿ ಅವರು ಈ ನಿರ್ಧಾರಕ್ಕೆ ಹೇಗೆ ಬಂದರು ಎಂಬುದನ್ನು ತಿಳಿದುಕೊಳ್ಳಬಹುದು. ಆದಾಗ್ಯೂ ಅದೇ ವಿಶ್ವಾಸಿಗಳು ಮಾನವ ಜೀವಿತ ಎಂದರೆ ಏನೂ ಇಲ್ಲ ಎಂಬ ನಿರ್ಧಾರಕ್ಕೆ ಬರುವಾಗ, ಮಾನ ಜೀವಿತ ಎಲ್ಲವೂ ಆಗಿದೆ ಎಂದು ಮಾಡಲು ಬಯಸುತ್ತಾರೆ. ಜನರು ಇನ್ನೂ ತಾವು ಆಕಾಶಕ್ಕೆ ಗೋಪುರ ಕಟ್ಟಿದ್ದರ ಕಡೆಗೆ ದೃಷ್ಟಿಸುತ್ತಾರೆ. ಮತ್ತು ತನ್ನ ಸಾಧನೆಯನ್ನು ನೋಡಿ ಆಶ್ಚರ್ಯಪಡುತ್ತಾರೆ. "ನಮ್ಮ ಗಗನಚುಂಬಿ ಕಟ್ಟಡಗಳನ್ನು ನೋಡಿರಿ, ನಮ್ಮ ತೈಲವಾಹಕ ಹಡಗುಗಳನ್ನು, ನಮ್ಮ ಅಂತರಿಕ್ಷಯಾನಗಳನ್ನು, ನಮ್ಮ ಶ್ರೇಷ್ಟ ಜಲವಾಹಕಗಳನ್ನು, ನಮ್ಮ ರಸ್ತೆ ಹಾಗೂ ಸೇತುವೆಗಳನ್ನು ನೋಡಿರಿ. ನಾವು ನೆರವೇರಿಸದೇ ಇರುವ ಕಾರ್ಯಗಳು ಯಾವು ಇಲ್ಲ" ಎಂದು ಹೇಳಿಕೊಳ್ಳುತ್ತಾರೆ.

ಮನುಷ್ಯರು ತಮ್ಮನ್ನು ತಾವು ತಮ್ಮ ದೇವರಾಗಿ ಮಾಡಿಕೊಳ್ಳುತ್ತಾರೆ. ಯಾರು ಮಾನವ ಸಾಧನೆಗಳಲ್ಲಿ ಮಹಿಮೆಯನ್ನು ಕಾಣುತ್ತಾರೋ ಅವರಿಗೆ ಮಾನವಕುಲವು ಏನನ್ನು ಮಾಡಲು ಸಾಧ್ಯವಾಗಿಲ್ಲವೋ ಅದನ್ನು ಅವರಿಗೆ ಜ್ಞಾಪಕ ಮಾಡಿಕೊಡಬೇಕು. ನಾವು ಒಬ್ಬರನ್ನೊಬ್ಬರು ಕೊಲ್ಲುವದನ್ನು ನಿಲ್ಲಿಸಲು ಸಾಧ್ಯವಾಗಿಲ್ಲ. ನಾವು ಹಗೆತನದ ಸೊಂಕನ್ನು ಓಣಿಗಳು ಮತ್ತು ಕುಟುಂಬಗಳಲ್ಲಿ ಹರಡುವದರಲ್ಲಿ ಮುಂದುವರೆಸಿದ್ದೇವೆ. ಮಕ್ಕಳು ಮಾದಕ ದ್ರವ್ಯಗಳಿಗೆ ತತ್ತಾಗುತ್ತಾ ಇದ್ದಾರೆ, ಗಂಡ ಹೆಂಡತಿ ಒಟ್ಟಾಗಿಯಿರಲು ಯಾವುದೇ ಮೂಲಗಳನ್ನು ಕಂಡುಕೊಳ್ಳುತ್ತಿಲ್ಲ. ವಶಪಡಿಸಿಕೊಳ್ಳುವ ಸತ್ಯತೆ ಅದು

ಎಂದಿಗೂ ಹೋಗುವದಿಲ್ಲ; ಒಂದು ಹಳೆ ಸಂಗೀತದ ಪದಗಳಲ್ಲಿ "ನಾವು ಒಬ್ಬೊಬ್ಬರಾಗಿ ಕಂದಕದಲ್ಲಿ ಬಿದ್ದುಹೋಗುತ್ತಲಿದ್ದೇವೆ."[11] ನಾನು ಏನನ್ನಾದರೂ ಸಾಧಿಸಬಲ್ಲೆ ಎನ್ನುವರನ್ನೂ ಸಹ ಮರಣವು ಜಯಿಸುತ್ತಿದೆ. ಪೇತ್ರನ ಎಚ್ಚರಿಕೆಯನ್ನು ಅಲಕ್ಷಿಸಲು ಸಾಧ್ಯವಿಲ್ಲ. ಭೂಮಿ ಮತ್ತು ಆಕಾಶ, ಮಾನವನ ಎಲ್ಲಾ ವೈಭವ ಮತ್ತು ಆಡಂಬರ, ನಾಶವಾಗುತ್ತದೆ, ದೇವರು ಈ ಲೋಕಕಕ್ಕೆ ಅಂತ್ಯವನ್ನು ತರುತ್ತಿದ್ದಾನೆ. ಜ್ಞಾನಿಗಳಾದ ಪುರುಷ ಮತ್ತು ಸ್ತ್ರೀಯರು ಭಕ್ತಿಯ ಜೀವಿತವನ್ನು ಜೀವಿಸಬೇಕು. ಪೇತ್ರನು "ಇವೆಲ್ಲವುಗಳು ಹೀಗೆ ಲಯವಾಗಿ ಹೋಗುವದರಿಂದ ನೀವು ದೇವರ ದಿನದ ಪ್ರತ್ಯಕ್ಷತೆಯನ್ನು ಎದುರುನೋಡುತ್ತಾ ಹಾರೈಸುತ್ತಾ ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲ" (2 ಪೇತ್ರ 3:11).

*ಮುಕ್ತಾಯ.* ಪೇತ್ರನ ಎಚ್ಚರಿಕೆಗಳು ನಿಷ್ಟುರವಾಗಿದೆ ಅದೇ ಸಮಯದಲ್ಲಿ ಆತನು ನಿರೀಕ್ಷೆಯನ್ನು ಹಿಡಿದುಕೊಂಡಿದ್ದಾನೆ. ಆತನು ತನ್ನ ಜನರಿಗೆ, ಈ ಲೋಕವು ಅಂತ್ಯವಾಗುವಾಗ, ದೇವರು ಹೊಸ ಭೂಮಿ ಹೊಸ ಆಕಾಶವನ್ನು ಉಂಟುಮಾಡುತ್ತಾನೆ. ಅಲ್ಲಿ ನೀತಿವಂತಿಕೆ ವಾಸವಾಗಿರುತ್ತದೆ (2 ಪೇತ್ರ 3:13). ಪೇತ್ರನಾಗಲಿ ಹೊಸ ಒಡಂಬಡಿಕೆಯ ಯಾವುದೇ ಲೇಖಕನಾಗಲಿ ಹೊಸ ಲೋಕವು ಹೇಗಿರುತ್ತದೆ ಎಂಬುದರ ಕುರಿತು ಅನಾವಶ್ಯಕ ಕಲ್ಪನೆಗಳನ್ನು ಮಾಡುವದನ್ನು ಪ್ರೋತ್ಸಾಹಿಸುವದಿಲ್ಲ. ದೇವರು ತನ್ನ ಜನರಿಗೆ ಒದಗಿಸುವದರ ಮೇಲೆ ನಾವು ಭರವಸೆಯನ್ನು ಇಟ್ಟಿದ್ದೇವೆ.

### "ವಾಗ್ದಾನ ಎಲ್ಲಿದೆ?" (3:4)

ಕ್ರೈಸ್ತ ನಂಬಿಕೆಯ ಆರಂಭದ ದಿನಗಳಿಂದ ಕುಚೋದ್ಯ ಮಾಡುವವರು ಕರ್ತನ ಬರೋಣದ ಸಮಯದ ಕುರಿತು ವಿಶ್ವಾಸಿಗಳನ್ನು ಮೂಡಲಿಸುತ್ತಿದ್ದಾರೆ. "ನೀವು ಇದನ್ನು ಏಕೆ ಕೈಬಿಡಬಾರದು?" ಎಂದು ಹೇಳುತ್ತಿದ್ದಾರೆ. ಕ್ರೈಸ್ತರು ಶತಮಾನಗಳಿಂದ ಈ ನಿರೀಕ್ಷೆಯನ್ನು ಜೀವಂತವಾಗಿಟ್ಟಿದ್ದಾರೆ. ಒಂದು ಪ್ರಾಚೀನ ಉಪದೇಶದಲ್ಲಿ ಸಹಜವಾಗಿ ಎರಡನೆಯ ಶತಮಾನದ ಮಧ್ಯದಲ್ಲಿ ಅದರ ಹೆಸರು "ಕ್ಲೇಮೆಂಟ" ಇದನ್ನು ಯಾರು ಬರೆದಿದ್ದಾರೆ ಎಂಬುದು ಖಚಿತವಾಗಿಲ್ಲದಿದ್ದರೂ. ಅದು ಕ್ರಿಸ್ತನ ಬರೋಣದ ವಿಳಂಬದ ಕುರಿತು ಬರೆದಿರುವ ದಾಖಲೆಗಳಲ್ಲಿ ಸುವ್ಯವಸ್ಥಿತವಾಗಿ ಬರೆದಿರುವ ದಾಖಲೆಯಾಗಿದೆ. ಅದು ಹೀಗೆ ಹೇಳುತ್ತದೆ,

> ತಮ್ಮ ಹೃದಯದಲ್ಲಿ ಸಂದೇಹವನ್ನು ಇಟ್ಟುಕೊಳ್ಳುವ ಎರಡು ಮನಸ್ಸುಳ್ಳವರು ನಿರ್ಗತಿಕರು, ಅವರು ಹೀಗೆ ಹೇಳುತ್ತಾರೆ, ನಾವು ಈ ಸಂಗತಿಗಳನ್ನು ಬಹಳ ಹಿಂದೆಯೇ ಕೇಳಿದ್ದೇವೆ ಮತ್ತು ನಮ್ಮ ತಂದೆಗಳ ಕಾಲದಲ್ಲಿ, ಆದರೆ ನಾವು ದಿನ ಬಿಟ್ಟು ದಿನ ಕಾದಿದ್ದೇವೆ ಮತ್ತು ಅವುಗಳಲ್ಲಿ ಯಾವುದನ್ನು ಕಾಣಲಿಲ್ಲ. ಓ ಮೂರ್ಖರಾದ ಜನರೇ, ನಿಮ್ಮನ್ನು ನೀವು ಮರಕ್ಕೆ ಹೋಲಿಸಿಕೊಳ್ಳಿರಿ; ದ್ರಾಕ್ಷೆಬಳ್ಳಿಯನ್ನು ತೆಗೆದುಕೊಳ್ಳಿರಿ; ಅದು ಮೊದಲು ಎಲೆಗಳನ್ನು ಬಿಡುತ್ತದೆ, ನಂತರ ಅದರಲ್ಲಿ ಮೊಗ್ಗೆಗಳಾಗುತ್ತವೆ, ನಂತರ ಮಾಗದೆ ಇರುವ ದ್ರಾಕ್ಷೆಗಳು, ನಂತರ ಸಂಪೂರ್ಣ ಗೊಂಚಲು. ಅದೇ ರೀತಿಯಲ್ಲಿ ನನ್ನ ಜನರು ಮಾನಸಿಕ ಕ್ಷೋಭೆ ಮತ್ತು ವೇದನೆಗಳನ್ನು ಹೊಂದಿದ್ದಾರೆ; ನಂತರ ಅದು ಉತ್ತಮ ಸಂಗತಿಗಳನ್ನು ಹೊಂದಿಕೊಳ್ಳುತ್ತಾರೆ. ಆದುದರಿಂದ, ನನ್ನ ಸಹೋದರರೇ, ನಾವು ಎರಡು ಮನಸ್ಸುಳ್ಳವರಾಗುವದು ಬೇಡ, ಆದರೆ ನಾವು ಸಹ ಪ್ರತಿಫಲವನ್ನು ಹೊಂದುವಂತೆ ನಿರೀಕ್ಷೆಯಲ್ಲಿ ತಾಳ್ಮೆಯಿಂದಿರೋಣ.[12]

ಪೇತ್ರನ ಸಮಯದಲ್ಲಿಯಾಗಲಿ ಅಥವಾ ಕ್ಲೇಮೆಂಟನ ಸಮಯದಲ್ಲಾಗಲಿ ಅಥವಾ ಪ್ರಸ್ತುತ ಜನಾಂಗದಲ್ಲಿ, ಸಂದೇಹ ಪಡುವ ಶೋಧನೆ ಕರ್ತನ ಬರೋಣವನ್ನು ಅಲ್ಲಗಳೆಯುವ ಪ್ರವೃತ್ತಿ ಯಾವಾಗಲೂ ಕಂಡುಬರುತ್ತದೆ. ಅದಾಗ್ಯೂ, ಕರ್ತನ ತಿರುಗಿ ಬರುತ್ತಾನೆಂಬ ವಾಗ್ದಾನ ಮತ್ತು ಆ ದಿನಗಳಲ್ಲಿ ವಾಗ್ದಾನಗಳ ನೆರವೇರಿಕೆ ಕ್ರೈಸ್ತ ಸಂದೇಶದ ಕೇಂದ್ರಭಾಗಕ್ಕೆ ಸಮೀಪವಾಗಿದೆ. ಆತನು ಒಮ್ಮೆ ನಜರೇತಿನಲ್ಲಿ ಸೇವಕನಾಗಿ ಬಂದನು; ಆತನು ಮತ್ತೊಮ್ಮೆ

ಕರ್ತರ ಕರ್ತನಾಗಿ ಮತ್ತು ರಾಜಾಧಿ ರಾಜನಾಗಿ ಬರುತ್ತಾನೆ. ಹಾಗೆ ಆಗಲಿ, ಆಮೇನ್.

**ಜೀವವನ್ನು ದೃಷ್ಟಕೋನದಲ್ಲಿಟ್ಟುಕೊಳ್ಳುವದು (3:8-10)**

ಪೇತ್ರನು ತನ್ನ ಓದುಗರಿಗೆ ದೇವರ ದೀರ್ಘಕಾಲದ ಶ್ರಮೆಯನ್ನು ಜ್ಞಾಪಿಸಿದಾಗ. ದೇವರು ಎಲ್ಲರೂ ಪಶ್ಚಾತ್ತಾಪಪಡಲಿ ಎಂದು ಬಯಸುತ್ತಾನೆ ಎಂದು ಹೇಳುವಾಗ, ಅದು ಜೀವಿತದ ಸಂಕ್ಷಿಪ್ತತೆ ಮತ್ತು ಮರಣದ ಖಚಿತತೆಯಾಗಿದೆ. ಕ್ರಿಸ್ತನಲ್ಲಿ ದೇವರು, ರಕ್ಷಿಸಲು, ನಿತ್ಯಜೀವವನ್ನು ನೀಡಲು ಮಾನವ ಕುಲವನ್ನು ತಲುಪಿದ್ದಾನೆ. Seneca ಒಬ್ಬ ಜನಪ್ರಿಯ ರಾಜಕಾರಣಿ ಮತ್ತು ತತ್ವಜ್ಞಾನಿ, ಅವನು ಪೌಲನ ಸಮಕಾಲೀನ. ಅವನು ರೋಮ ಪಟ್ಟಣದಲ್ಲಿ ವಾಸಿಸುತ್ತಿದ್ದನು. ನಮಗೆ ತಿಳಿದಿರುವ ಮಟ್ಟಿಗೆ ಅವನಿಗೆ ಕ್ರೈಸ್ತ ಸಂದೇಶದ ಪರಿಚಯವಿರಲಿಲ್ಲ. ಆದಾಗ್ಯೂ, ಅವನ ವಿಗ್ರಹಾರಾಧನೆಯ ದೃಷ್ಟಿಕೋನದಲ್ಲಿ, ಜೀವನಕ್ಕೆ ಅರ್ಥವಿಲ್ಲದೇ ಇರುವಾಗ ವಿಶೇಷ ಪ್ರಯತ್ನಮಾಡುವ ವಿಪರ್ಯಾಸದ ಕುರಿತು ಸಹ Seneca ಪರ್ಯಾಲೋಚಿಸುತ್ತಾನೆ.

> ನಾಳೆ ಎಂಬುದಕ್ಕೆ ನಾವು ಯಜಮಾನರಾಗಿಲ್ಲದೆ ಇರುವಾಗ ನಮ್ಮ ಜೀವಿತವನ್ನು ಪ್ರಾರಂಭಿಸುವದು ಎಷ್ಟು ಮೂರ್ಖತನವಾಗಿದೆ! ಬಹುದೂರದ ನಿರೀಕ್ಷೆಯನ್ನು ಯೋಜಿಸುವದು ಹುಚ್ಚುತನವಾಗಿದೆ! “ನಾನು ಖರೀದಿಸುತ್ತೇನೆ ಮತ್ತು ಕಟ್ಟುತ್ತೇನೆ, ಸಾಲ ತೆಗೆದುಕೊಂಡು ಹಣವನ್ನು ಪಡೆದುಕೊಳ್ಳುತ್ತೇನೆ, ಗೌರವದ ಬಿರುದುಗಳನ್ನು ಹೊಂದಿಕೊಳ್ಳುತ್ತೇನೆ, ನಂತರ ನಾನು ಹಿಂದಿನ ಮತ್ತು ಎಲ್ಲಾ ದಿನಗಳನ್ನು ಸುಖವಾಗಿ ಜೀವಿಸಲು ಅಧೀನ ಪಡಿಸುತ್ತೇನೆ” ಎಂದು ಹೇಳುವದು. ನನ್ನನ್ನು ನಂಬಿರಿ, ಸಮೃದ್ಧಿಯಲ್ಲಿರುವವರು ಕೂಡಾ ನಾನು ಎಲ್ಲವೂ ಸಂದೇಹವಾಗಿದೆ ಎಂದು ಹೇಳುವಾಗ. ಯಾರಿಗೂ ಭವಿಷ್ಯತ್ತಿನ ಕುರಿತು ತಮ್ಮನ್ನು ತಾವು ಸೆಳೆದುಕೊಳ್ಳುವ ಹಕ್ಕಿಲ್ಲ ... ನಾವು ದೂರದ ಪ್ರಯಾಣವನ್ನು ಯೋಜಿಸುತ್ತೇವೆ ಮತ್ತು ಪರದೇಶದಲ್ಲಿ ತಿರುಗಾಡಿ ದೀರ್ಘಕಾಲದ ನಂತರ ಮನೆಗೆ ಮರಳುವದನ್ನು ... ಈ ಎಲ್ಲಾ ಸಮಯದಲ್ಲಿ ಸಾವು ನಮ್ಮ ಹತ್ತಿರದಲ್ಲಿಯೇ ನಿಂತಿರುತ್ತದೆ.[13]

Seneca ನ ಪದಗಳಲ್ಲಿ ನಿರೀಕ್ಷೆಯಿಲ್ಲ. ಅವುಗಳನ್ನು ಓದುವಾಗ ವಿಷಾದವಾಗುತ್ತದೆ. ಪೇತ್ರನಿಗೆ, ಮತ್ತು ಅವನ ಮಾತುಗಳಲ್ಲಿ ನಂಬಿಕೆಯನ್ನಿಡುವವರಿಗೆ ಮತ್ತು ಕರ್ತನ ಮೇಲೆ ಭರವಸವಿಡುವವರಿಗೆ, ಆತನು ಇದು ನಮ್ಮ ಬದಿಯಲ್ಲಿ ನಿಂತಿರುವ ಜೀವಿತವಾಗಿದೆ, ಮರಣವಲ್ಲ ಎಂದು ಪ್ರಕಟಿಸುತ್ತಾನೆ. ಹೊಸ ಆಕಾಶಮಂಡಲ ಮತ್ತು ಹೊಸ ಭೂಮಂಡಲವಿದೆ ಅದರಲ್ಲಿ ನೀತಿವಂತರು ವಾಸಿಸುತ್ತಾರೆ.

**ಎರಡನೆಯ ಬರೋಣ ಮತ್ತು ನೀತಿನಿಯಮಗಳು (3:11-13)**

ಕ್ರೈಸ್ತರು ದೇವರಿಗೆ ವಿಧೇಯರಾಗುವದು ಮತ್ತು ಯೇಸು ಕ್ರಿಸ್ತನ ಸೇವೆಯನ್ನು ಮಾಡುವದು ಆದರ್ಶವಾಗಿದೆ ಯಾಕಂದರೆ ಇದು ಮಾಡಬೇಕಾದ ಸರಿಯಾದ ಕಾರ್ಯವಾಗಿದೆ. ದೇವರು ಸೃಷ್ಟಿಕರ್ತನಾಗಿದ್ದಾನೆ ಅಷ್ಟು ಸಾಕು. ಅವನು ನಜರೇತಿನ ಯೇಸುವಿನಲ್ಲಿ ತನ್ನ ಪ್ರೀತಿಯನ್ನು ತೋರಿಸಿದ್ದಾನೆ ಅಷ್ಟು ಸಾಕು. ನಾವು ಬೇರೆ ಯಾವ ಕಾರಣದಿಂದಾಗಿಯೂ ಅಲ್ಲ ಆತನು ಒಡೆಯನಾಗಿರುವದರಿಂದ ನಾವು ವಿಧೇಯರಾಗಿದ್ದೇವೆ ಇದು ಮಾದರಿಯಾಗಿದೆ. ನ್ಯಾಯತೀರ್ಪು ಮತ್ತು ನಿತ್ಯಜೀವದ ಕುರಿತು ಜ್ಞಾಪನಗಳ ಅವಶ್ಯಕತೆಯಿಲ್ಲ.

ಇದು ದೇಹದ ಬಲವಾದ ಇಚ್ಛೆಯನ್ನು ಕೋಲನ್ನು ಉಪಯೋಗಿಸೆ ದೈವ ಭಕ್ತಿಯಿಂದ ಜೀವಿಸುವದಕ್ಕೆ ಬೇಡಿಕೊಳ್ಳಲು ಅನುಮತಿಸುವದಾಗಿದೆ. ಒಂದು ರೀತಿಯಲ್ಲಿ ದೇವರ ಪ್ರೀತಿಯಾಗಿದ್ದಾನೆ. ಕ್ರೈಸ್ತರು ದೇವರಿಗೆ ವಿಧೇಯರಾಗುತ್ತಾರೆ ಯಾಕಂದರೆ ಆತನು ಪ್ರೀತಿಯ ತಂದೆಯಾಗಿದ್ದಾನೆ. ಇನ್ನೊಂದು ರೀತಿಯಲ್ಲಿ, ದೇವರು ಉರಿಯುವ ಬೆಂಕಿಯಾಗಿದ್ದಾನೆ. ಆತನು ನ್ಯಾಯಾಧೀಪತಿಯಾಗಿದ್ದಾನೆ. ಆತನು ಆಕಾಶದಲ್ಲಿ ದೊಡ್ಡ ದೊಣ್ಣೆಯನ್ನು ಹಿಡಿದುಕೊಂಡು

ಪಾಪಿಗಳನ್ನು ದಂಡಿಸಲು ಸಿದ್ಧನಾಗಿರುವ ದೈತಾಕೃತಿಯಾಗಿದ್ದಾನೆ ಎಂದು ಯೋಚಿಸುವದು ಭೀಕರವಾದ ಚಿತ್ರಣವಾಗಿದೆ. ಯೋಹಾನನು ವಿಶ್ವಾಸಿಗಳನ್ನು ಇಂಥಹಾ ಕಲ್ಪನೆಯಿಂದ "ಪರಿಪೂರ್ಣ ಪ್ರೀತಿಯು ಭಯವನ್ನು ನಿವಾರಿಸುತ್ತದೆ" (1 ಯೋಹಾನ 4:18) ಎಂದು ಹೇಳುವದರ ಮೂಲಕ ಸರಿಯಾದ ಮಾರ್ಗಕ್ಕೆ ನಡೆಸುತ್ತಾನೆ. ಆದಾಗ್ಯೂ ಭಯವು ಕ್ರೈಸ್ತರನ್ನು ಪ್ರೇರಿಪಿಸುವ ಶಕ್ತಿಯಾಗಿ ಅಲ್ಲಗಳೆಯಲಿ ಸಾಧ್ಯವಿಲ್ಲ. ಪಾಪದ ಆಕರ್ಷಣೆಯಲ್ಲಿ ವಿರಾಮದ ಅವಶ್ಯಕತೆಯಿದೆ ಮತ್ತು ದೇವರು ನಾವು ಮಾಡುವ ಪ್ರತಿಯೊಂದು ಸಂಗತಿಗಳಿಗೆ ನಮಗೆ ಲೆಕ್ಕಾ ಕೇಳುತ್ತಾನೆಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಳೆ ಒಡಂಬಡಿಕೆಯಲ್ಲಿ ಮತ್ತು ಹೊಸ ಒಡಂಬಡಿಕೆಯಲ್ಲಿರುವ ಪರಿಶುದ್ಧ ಮನುಷ್ಯರು ದೇವರು ನ್ಯಾಯಾಧಿಪತಿಯಾಗಿದ್ದಾನೆ ಎಂಬುದನ್ನು ಜ್ಞಾಪಿಸುವದಕ್ಕೆ ಹಿಂಜರಿಯಲಿಲ್ಲ. ಆ ಸಂಪ್ರದಾಯದಲ್ಲಿ ಪೇತ್ರನು ಕರ್ತನ ಬರೋಣವನ್ನು ಮತ್ತು ನ್ಯಾಯತೀರ್ಪನ್ನು ಸೂಚಿಸುತ್ತಾನೆ. ಕ್ರಿಸ್ತನು ನ್ಯಾಯಾಧಿಪತಿಯಾಗಿ ಬರಲಿರುವಾಗ, ಪೇತ್ರನು ಕ್ರೈಸ್ತರಿಗೆ ಅವರು ಪರಿಶುದ್ಧರಾಗಿ ಜೀವಿಸುವದು ಅವಶ್ಯವಾಗಿದೆ ಎಂದು ಜ್ಞಾಪಿಸುತ್ತಾನೆ.

---

ಟಿಪ್ಪಣಿಗಳು

[1]Donald Guthrie, *New Testament Theology* (Downers Grove, Ill.: Inter-Varsity Press, 1981), 978. [2]ಅಪೊಸ್ತಲರನ್ನು ಅಪೊಸ್ತಲ ಕೃತ್ಯದಲ್ಲಿ (6:2) ಒಂದೇ ಒಂದು ಸಾರಿ "ಹನ್ನೆರಡು ಜನ" ಎಂದು ಕರೆಯಲಾಗಿದೆ ಮತ್ತು ಒಮ್ಮೆ ಪೌಲನಿಂದ (1 ಕೊರಿಂಥ 15:5). ಸಾಮಾನ್ಯವಾಗಿ "ಹನ್ನೆರೆಡು ಜನರಲ್ಲ" ಪೌಲನಿಗೆ ಸಂಪೂರ್ಣವಾದ ಅಧಿಕಾರ ಮತ್ತು ನಿಯೋಜನೆ ಇತ್ತು (ಗಲಾತ್ಯ 1:1). [3]Michael Green, *The Second Epistle General of Peter and the General Epistle of Jude,* rev. ed., Tyndale New Testament Commentaries, vol. 18 (Grand Rapids, Mich.: Wm. B. Eerdmans Publishing Co., 1987), 138. [4]See Everett Ferguson, *Backgrounds of Early Christianity,* 2d ed. (Grand Rapids, Mich: Wm. B. Eerdmans Publishing Co., 1993), 232. [5]John R. Clements, "In the Land of Fadeless Day," *Songs of the Church,* comp. and ed. Alton H. Howard (West Monroe, La.: Howard Publishing Co., 1977). [6]Irenaeus *Against Heresies* 5.28.3. [7]Charles H. H. Scobie, *The Ways of Our God: An Approach to Biblical Theology* (Grand Rapids, Mich.: Wm. B. Eerdmans Publishing Co., 2003), 741. [8]Robert Davidson, "Some Aspects of the Old Testament Contribution to the Pattern of Christian Ethics," *Scottish Journal of Theology* 12 (December 1959): 376. [9]ಈ ವಚನದಲ್ಲಿ 2 ಪೇತ್ರ 3:14, ಅಪೊಸ್ತಲನು ("ನಿಷ್ಕಳಂಕ" *amometos* ಅಥವಾ "ನಿರ್ದೋಷಿಯಾದ" ಎಂಬ ಪದವನ್ನು ಉಪಯೋಗಿಸುತ್ತಾನೆ.) 1 ಪೇತ್ರ 1:19ರಲ್ಲಿರುವ ಆತನು ಹೇಳಿರುವ "ನಿಷ್ಕಳಂಕ" ಯಜ್ಞದ ಕುರು amomos ಪದಕ್ಕೆ ಬದಲಾಗಿ ಉಪಯೋಗಿಸುತ್ತಾನೆ. ಪದಗಳು ಪರಸ್ಪರ ನಿಕಟವಾಗಿವೆ ಮತ್ತು ವಿಶೇಷವಾಗಿ ಒಂದೇ ಅರ್ಥವನ್ನು ನೀಡುತ್ತವೆ.

[10]*Shepherd of Hermas: Similitudes* 9.14.4. [11]Jessie Brown Pounds , "We Are Going Down the Valley," *Songs of the Church,* comp. and ed. Alton H. Howard (West Monroe, La.: Howard Publishing Co., 1977). [12]*2 Clement* 11.2-5. [14]Seneca *Epistles* 101.